Re. No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. 1 | नई दिल्ली, बुधवार, अगस्त 27, 2003 | भाद्रपद 5, 1925 (शका) | खंड. 27 |
| No. 1 | New Delhi, Wednesday, August 27, 2003 | Bhadrapada 5, 1925 (Saka) | Vol. 27 |
| ಸಂ. ೧ | ನವ ದೆಹಲಿ, ಬುಧವಾರ, ಆಗಸ್ಟ್ ೨೭, ೨೦೦೩ | ಭಾದ್ರಪದ ೫, ೧೯೨೫ (ಶಕ) | ಸಂಪುಟ. ೨೭ |


**Ministry of Law and Justice**
(Legislative Department)
New Delhi, 27th August, 2003

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
(ವಿಧಾಯೀ ಇಲಾಖೆ)
ನವದೆಹಲಿ, 27 ನೇ ಆಗಸ್ಟ್, 2003

The Translation in Kannada of the following Acts, namely - (1) The Prevention of Black-Marketing and Maintenance of Supplies of Essential Commodities Act, 1980 (2) The Advocates Act, 1961 (3) The Beedi and Cigar Workers (Conditions of Employment) Act, 1966 (4) The Explosive Substances Act, 1908 (5) The Industrial Disputes Act, 1947 (6) The Remittances of Foreign Exchange and Investment in Foreign Exchange Bonds (Immunities and Exemptions) Act, 1991 (7) The Child Labour (Prohibition and Regulation) Act, 1986 - are hereby published under the authority of the President and shall be demed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ - (1) ಕಾಳಸಂತೆ ಪ್ರತಿಬಂಧ ಮತ್ತು ಅತ್ಯಾವಶ್ಯಕ ವಸ್ತುಗಳ ಸರಬರಾಜು ನಿರ್ವಹಣೆ ಅಧಿನಿಯಮ, 1980 (2) ನ್ಯಾಯವಾದಿಗಳ ಅಧಿನಿಯಮ, 1961 (3) ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966 (4) ಸ್ಫೋಟಕ ಪದಾರ್ಥಗಳ ಅಧಿನಿಯಮ, 1908 (5) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (6) ವಿದೇಶಿ ವಿನಿಮಯದ ರವಾನೆಗಳು ಮತ್ತು ವಿದೇಶಿ ವಿನಿಮಯ ಬಾಂಡುಗಳಲ್ಲಿ ಹಣ ಹೂಡಿಕೆ (ವಿಶೇಷ ರಕ್ಷಣೆಗಳು ಮತ್ತು ವಿನಾಯಿತಿಗಳು) ಅಧಿನಿಯಮ, 1991 (7) ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 - ಇವುಗಳಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2 ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ನ್ಯಾಯವಾದಿಗಳ ಅಧಿನಿಯಮ, 1961

(1961ರ ಅಧಿನಿಯಮ ಸಂಖ್ಯೆ 25)

[19ನೇ ಮೇ, 1961]

ನ್ಯಾಯವಾದಿಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಮತ್ತು ಬಾರ್ ಕೌನ್ಸಿಲ್‌ಗಳ ಮತ್ತು ಅಖಿಲ ಭಾರತ ಬಾರ್‌ನ ರಚನೆಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ನ್ಯಾಯವಾದಿಗಳ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ರಾಜ್ಯ ಕ್ಷೇತ್ರಗಳ ಹೊರತು ಇತರ ರಾಜ್ಯ ಕ್ಷೇತ್ರಗಳ ಸಂಬಂಧದಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(4) ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ರಾಜ್ಯ ಮತ್ತು ಗೋವಾ, ದಮನ್ ಮತ್ತು ದೀವು- ಈ ಒಕ್ಕೂಟ ರಾಜ್ಯ ಕ್ಷೇತ್ರಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) " ನ್ಯಾಯವಾದಿ " ಎಂದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗಿನ ಯಾವುದೇ ಪಟ್ಟಿಯಲ್ಲಿ ನೋಂದಾಯಿತನಾದ ಒಬ್ಬ ನ್ಯಾಯವಾದಿ;

(ಬಿ) ಈ ಅಧಿನಿಯಮದ ಯಾವುದೇ ಉಪಬಂಧದ ಸಂಬಂಧದಲ್ಲಿ "ಗೊತ್ತುಪಡಿಸಲಾದ ದಿನ" ಎಂದರೆ ಆ ಉಪಬಂಧವು ಜಾರಿಗೆ ಬಂದ ದಿನ;

(ಸಿ)[ * * * ]

(ಡಿ) " ಬಾರ್ ಕೌನ್ಸಿಲ್ " ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ಬಾರ್ ಕೌನ್ಸಿಲ್;

(ಇ) " ಭಾರತದ ಬಾರ್ ಕೌನ್ಸಿಲ್ " ಎಂದರೆ ಈ ಅಧಿನಿಯಮವು ಅನ್ವಯವಾಗುವ ರಾಜ್ಯ ಕ್ಷೇತ್ರಗಳಿಗಾಗಿ 4ನೇ ಪ್ರಕರಣದ ಮೇರೆಗೆ ರಚಿಸಲಾದ ಬಾರ್ ಕೌನ್ಸಿಲ್;

(ಎಫ್) [ * * * ]

(ಜಿ) 34ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮತ್ತು (1ಎ) ಉಪಪ್ರಕರಣದಲ್ಲಿ ಮತ್ತು 42 ಮತ್ತು 43ನೇ ಪ್ರಕರಣಗಳಲ್ಲಿ ಹೊರತು " ಉಚ್ಚ ನ್ಯಾಯಾಲಯ " ಎಂಬ ಪದವು ನ್ಯಾಯಿಕ ಕಮೀಷನರರ ನ್ಯಾಯಾಲಯವನ್ನು ಒಳಗೊಳ್ಳುವುದಿಲ್ಲ, ಮತ್ತು ರಾಜ್ಯ ಬಾರ್ ಕೌನ್ಸಿಲ್‌ನ ಸಂಬಂಧದಲ್ಲಿ " ಉಚ್ಚ ನ್ಯಾಯಾಲಯ " ಎಂದರೆ,-

(i) ಒಂದು ರಾಜ್ಯಕ್ಕಾಗಿ ಅಥವಾ ಒಂದು ರಾಜ್ಯ ಮತ್ತು ಒಂದು ಅಥವಾ ಹೆಚ್ಚು ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿ ರಚಿಸಲಾದ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ, ಆ ರಾಜ್ಯದ ಉಚ್ಚ ನ್ಯಾಯಾಲಯ;

(ii) ದೆಹಲಿಗಾಗಿ ರಚಿಸಲಾದ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ, ದೆಹಲಿಯ ಉಚ್ಚ ನ್ಯಾಯಾಲಯ;

(ಹೆಚ್) " ಕಾನೂನು ಪದವೀಧರ " ಎಂದರೆ, ಭಾರತದಲ್ಲಿ ಕಾನೂನು ಮೂಲಕ ಸ್ಥಾಪಿತವಾದ ಯಾವುದೇ ವಿಶ್ವ ವಿದ್ಯಾನಿಲಯದಿಂದ ಕಾನೂನಿನಲ್ಲಿ ಸ್ನಾತಕ ಪದವಿಯನ್ನು ಪಡೆದಿರುವ ಒಬ್ಬ ವ್ಯಕ್ತಿ;

(ಐ) " ಕಾನೂನು ವೃತ್ತಿಗ " ಎಂದರೆ ಯಾವುದೇ ಉಚ್ಚ ನ್ಯಾಯಾಲಯದ ಒಬ್ಬ ನ್ಯಾಯವಾದಿ ಅಥವಾ ವಕೀಲ, ಪ್ಲೀಡರ್, ಮುಖ್ತಿಯಾರ್ ಅಥವಾ ರೆವಿನ್ಯೂ ಏಜೆಂಟ್;

(ಜೆ) " ನಿಯಮಿಸಲಾದುದು " ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು;

(ಕೆ) " ಪಟ್ಟಿ " ಎಂದರೆ ಈ ಅಧಿನಿಯಮದ ಮೇರೆಗೆ ತಯಾರಿಸಿ ಇಟ್ಟುಕೊಂಡು ಬಂದ ನ್ಯಾಯವಾದಿಗಳ ಪಟ್ಟಿ;

(ಎಲ್) " ರಾಜ್ಯ " ಎಂಬ ಪದವು ಒಕ್ಕೂಟ ರಾಜ್ಯ ಕ್ಷೇತ್ರಗಳನ್ನು ಒಳಗೊಳ್ಳುವುದಿಲ್ಲ;

(ಎಂ) " ರಾಜ್ಯದ ಬಾರ್ ಕೌನ್ಸಿಲ್ " ಎಂದರೆ, 3ನೇ ಪ್ರಕರಣದ ಮೇರೆಗೆ ರಚಿಸಲಾದ ಬಾರ್ ಕೌನ್ಸಿಲ್;

(ಎನ್) " ರಾಜ್ಯ ಪಟ್ಟಿ " ಎಂದರೆ, 17ನೇ ಪ್ರಕರಣದ ಮೇರೆಗೆ ರಾಜ್ಯದ ಬಾರ್ ಕೌನ್ಸಿಲ್ ತಯಾರಿಸಿ ಇಟ್ಟುಕೊಂಡು ಬಂದ ನ್ಯಾಯವಾದಿಗಳ ಪಟ್ಟಿ.

(2) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಅಥವಾ ಗೋವಾ, ದಮನ್ ಮತ್ತು ದೀವು ಈ ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿ ಜಾರಿಯಲ್ಲಿರದ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು, ಆ ರಾಜ್ಯದ ಅಥವಾ ಆ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ, ಆ ರಾಜ್ಯದಲ್ಲಿ ಅಥವಾ ಸಂದರ್ಭಾನುಸಾರ ಆ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ ಅದಕ್ಕೆ ಮಾಡಲಾದ ಉಲ್ಲೇಖ ಎಂದು ಅರ್ಥೈಸತಕ್ಕುದು.

## ಅಧ್ಯಾಯ - II
## ಬಾರ್ ಕೌನ್ಸಿಲ್‌ಗಳು

**3. ರಾಜ್ಯದ ಬಾರ್ ಕೌನ್ಸಿಲ್‌ಗಳು.–** (1) ಬಾರ್ ಕೌನ್ಸಿಲ್‌ಗಳು ಈ ಕೆಳಕಂಡಂತೆ ರಚಿತವಾಗತಕ್ಕುದು:-

(ಎ) ಆಂಧ್ರಪ್ರದೇಶ, ಬಿಹಾರ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಝಾರ್ಖಂಡ, ಮಧ್ಯಪ್ರದೇಶ ಮತ್ತು ಛತ್ತೀಸ್‌ಘಡ, ಕರ್ನಾಟಕ, ಒರಿಸ್ಸಾ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಉತ್ತರಾಂಚಲ - ಈ ಪ್ರತಿಯೊಂದು ರಾಜ್ಯಗಳಿಗೆ ರಾಜ್ಯ ಬಾರ್ ಕೌನ್ಸಿಲ್ ಎಂಬ ಹೆಸರಿನ ಒಂದು ಕೌನ್ಸಿಲ್;

(ಬಿ) ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರಾ ರಾಜ್ಯಗಳಿಗೆ ಕ್ರಮವಾಗಿ ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ, ಮಣಿಪುರ, ತ್ರಿಪುರ, ಮಿಝೋರಾಂ ಮತ್ತು ಅರುಣಾಚಲ ಪ್ರದೇಶ, ರಾಜ್ಯದ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್;

(ಸಿ) ಕೇರಳ ರಾಜ್ಯ ಮತ್ತು ಒಕ್ಕೂಟ ರಾಜ್ಯಕ್ಷೇತ್ರವಾಗಿರುವ ಲಕ್ಷ ದ್ವೀಪಕ್ಕೆ ಕೇರಳದ ಬಾರ್ ಕೌನ್ಸಿಲ್ ಎಂಬ ಹೆಸರಿನ ರಾಜ್ಯದ ಬಾರ್ ಕೌನ್ಸಿಲ್;

(ಸಿಸಿ) ತಮಿಳುನಾಡು ರಾಜ್ಯ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರವಾಗಿರುವ ಪಾಂಡಿಚೆರಿಗೆ ಮದ್ರಾಸ್ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್;

(ಸಿಸಿಸಿ) ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ಮತ್ತು ದಾದ್ರ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದೀವು ಈ ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಮಹಾರಾಷ್ಟ್ರ ಮತ್ತು ಗೋವಾ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್;

(ಡಿ) ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಗೆ ಮತ್ತು ಒಕ್ಕೂಟ ರಾಜ್ಯಕ್ಷೇತ್ರವಾದ ಚಂಡೀಘಡಕ್ಕೆ ಪಂಜಾಬ್ ಮತ್ತು ಹರಿಯಾಣಾ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್;

(ಡಿಡಿ) ಹಿಮಾಚಲ ಪ್ರದೇಶ ರಾಜ್ಯಕ್ಕೆ ಹಿಮಾಚಲ ಪ್ರದೇಶದ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್;

(ಇ) ಪಶ್ಚಿಮ ಬಂಗಾಳ ರಾಜ್ಯ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರವಾಗಿರುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಪಶ್ಚಿಮ ಬಂಗಾಳ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್;

(ಎಫ್) ಒಕ್ಕೂಟ ರಾಜ್ಯ ಕ್ಷೇತ್ರವಾಗಿರುವ ದೆಹಲಿಗೆ ದೆಹಲಿ ಬಾರ್ ಕೌನ್ಸಿಲ್ ಎಂಬ ಹೆಸರಿನ ಬಾರ್ ಕೌನ್ಸಿಲ್.

(2) ಯಾವುದೇ ರಾಜ್ಯದ ಬಾರ್ ಕೌನ್ಸಿಲ್ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ,-

(ಎ) ದೆಹಲಿಯ ರಾಜ್ಯ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ, ಭಾರತದ ಅಡಿಷನಲ್ ಸಾಲಿಸಿಟರ್ ಜನರಲ್, ಪದನಿಮಿತ್ತ; ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ, ಮಣಿಪುರ ಮತ್ತು ತ್ರಿಪುರಾ ರಾಜ್ಯಗಳ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ, ಅಸ್ಸಾಂ, ಮಣಿಪುರ, ಮೇಘಾಲಯ, ನಾಗಾಲ್ಯಾಂಡ್ ಮತ್ತು ತ್ರಿಪುರ- ಈ ಪ್ರತಿಯೊಂದು ರಾಜ್ಯದ ಅಡ್ವೋಕೇಟ್ ಜನರಲ್, ಪದನಿಮಿತ್ತ; ಪಂಜಾಬ್ ಮತ್ತು ಹರಿಯಾಣ ರಾಜ್ಯ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ, ಪಂಜಾಬ್ ಮತ್ತು ಹರಿಯಾಣ ಈ ಪ್ರತಿಯೊಂದು ರಾಜ್ಯದ ಅಡ್ವೋಕೇಟ್ - ಜನರಲ್, ಪದನಿಮಿತ್ತ; ಮತ್ತು ಇತರ ಯಾವುದೇ ರಾಜ್ಯ ಬಾರ್ ಕೌನ್ಸಿಲಿನ ಸಂದರ್ಭದಲ್ಲಿ, ಆ ರಾಜ್ಯದ ಅಡ್ವೋಕೇಟ್ ಜನರಲ್, ಪದನಿಮಿತ್ತ;

(ಬಿ) ಐದು ಸಾವಿರಕ್ಕೆ ಮೀರದಷ್ಟು ಮತದಾರರನ್ನು ಹೊಂದಿರುವ ರಾಜ್ಯ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ, ಹದಿನೈದು ಸದಸ್ಯರು; ಐದು ಸಾವಿರ ಮತದಾರರನ್ನು ಮೀರಿದ್ದು, ಆದರೆ ಹತ್ತು ಸಾವಿರ ಮೀರದಷ್ಟು ಮತದಾರರನ್ನು ಹೊಂದಿರುವ ರಾಜ್ಯ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ ಇಪ್ಪತ್ತು ಸದಸ್ಯರು ಮತ್ತು ಹತ್ತು ಸಾವಿರವನ್ನು ಮೀರದ ಮತದಾರರನ್ನೊಳಗೊಂಡ ರಾಜ್ಯ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ ಇಪ್ಪತ್ತೈದು ಸದಸ್ಯರು. ಈ ಸದಸ್ಯರು ರಾಜ್ಯ ಬಾರ್ ಕೌನ್ಸಿಲ್‌ನ ಮತದಾರರ ಪಟ್ಟಿಯಲ್ಲಿರುವ ನ್ಯಾಯವಾದಿಗಳೊಳಗಿಂದ ಏಕ ವರ್ಗಾವಣೀಯ ಮತದಾನದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯನುಸಾರವಾಗಿ ಚುನಾಯಿತರಾದವರಾಗಿರುತ್ತಾರೆ:

ಪರಂತು, ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಚುನಾಯಿತ ಸದಸ್ಯರ ಪೈಕಿ ಅರ್ಧದಷ್ಟು ಸದಸ್ಯರು, ಭಾರತದ ಬಾರ್ ಕೌನ್ಸಿಲ್ ಈ ಬಗ್ಗೆ ರಚಿಸಬಹುದಾದ ಯಾವುದೇ ನಿಯಮಗಳಿಗೆ ಒಳಪಟ್ಟು, ರಾಜ್ಯ ಪಟ್ಟಿಯಲ್ಲಿ, ಕನಿಷ್ಠ ಪಕ್ಷ ಹತ್ತು ವರ್ಷಗಳ ಕಾಲ ನ್ಯಾಯವಾದಿಗಳಾಗಿರುವ ವ್ಯಕ್ತಿಗಳಾಗಿರತಕ್ಕುದು ಮತ್ತು ಯಾವನೇ ಅಂಥ ವ್ಯಕ್ತಿಯ ಸಂಬಂಧದಲ್ಲಿ ಸದರಿ ಹತ್ತು ವರ್ಷಗಳ ಅವಧಿಯನ್ನು ಲೆಕ್ಕ ಹಾಕುವಾಗ, ಭಾರತೀಯ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38) ರ ಮೇರೆಗೆ ಆ ವ್ಯಕ್ತಿಯು ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿದ ನ್ಯಾಯವಾದಿಯಾಗಿದ್ದಂಥ ಯಾವುದೇ ಅವಧಿಯು ಒಳಗೊಂಡಿರತಕ್ಕುದು.

(3) ಪ್ರತಿಯೊಂದು ರಾಜ್ಯ ಬಾರ್ ಕೌನ್ಸಿಲ್‌ಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಕೌನ್ಸಿಲ್‌ನಿಂದ ಚುನಾಯಿತರಾದ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷ ಇರತಕ್ಕುದು.

(3ಎ) ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1977ರ ಪ್ರಾರಂಭದ ನಿಕಟ ಪೂರ್ವದಲ್ಲಿ ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಪದಧಾರಣ ಮಾಡಿದ್ದ

ಪ್ರತಿಯೊಬ್ಬ ವ್ಯಕ್ತಿಯು, ಅಂಥ ಪ್ರಾರಂಭದಂದು ಅಧ್ಯಕ್ಷನಾಗಿ ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕುದು:

ಪರಂತು, ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1977ರ ಪ್ರಾರಂಭದ ಅನಂತರ ಚುನಾಯಿತನಾದ ಪ್ರತಿಯೊಂದು ರಾಜ್ಯ ಬಾರ್ ಕೌನ್ಸಿಲ್‌ನ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನು ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಳ್ಳುವವರೆಗೆ, ಅಂಥ ಪ್ರತಿಯೊಬ್ಬ ವ್ಯಕ್ತಿಯು ತನ್ನ ಹುದ್ದೆಯ ಕರ್ತವ್ಯಗಳ ನಿರ್ವಹಣೆಯನ್ನು ಮುಂದುವರಿಸತಕ್ಕುದು.

(4) ಒಬ್ಬ ನ್ಯಾಯವಾದಿಯು, ಭಾರತದ ಬಾರ್ ಕೌನ್ಸಿಲ್ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ವಿದ್ಯಾರ್ಹತೆಗಳನ್ನು ಹೊಂದಿರುವ ಅಥವಾ ಅಂಥ ಷರತ್ತುಗಳನ್ನು ಈಡೇರಿಸುವ ಹೊರತು, (2)ನೇ ಉಪಪ್ರಕರಣದ ಮೇರೆಗೆ ಒಂದು ಚುನಾವಣೆಯಲ್ಲಿ ಮತನೀಡಲು ಅಥವಾ ರಾಜ್ಯ ಬಾರ್ ಕೌನ್ಸಿಲ್‌ನ ಒಬ್ಬ ಸದಸ್ಯನಾಗಿ ಆಯ್ಕೆಯಾಗಲು ಮತ್ತು ಒಬ್ಬ ಸದಸ್ಯನಾಗಿರಲು ಅವನನ್ನು ಅನರ್ಹಗೊಳಿಸತಕ್ಕುದು ಮತ್ತು ರಚಿಸಬಹುದಾದಂಥ ಯಾವುವೇ ನಿಯಮಗಳಿಗೊಳಪಟ್ಟು ಪ್ರತಿಯೊಂದು ರಾಜ್ಯ ಬಾರ್ ಕೌನ್ಸಿಲ್ಲು ಮತದಾರರ ಪಟ್ಟಿಯನ್ನು ತಯಾರಿಸತಕ್ಕುದು ಮತ್ತು ಅದನ್ನು ಕಾಲಕಾಲಕ್ಕೆ ಪರಿಷ್ಕರಿಸತಕ್ಕುದು.

(5) (2)ನೇ ಉಪಪ್ರಕರಣದ ಪರಂತುಕದಲ್ಲಿರುವುದು ಯಾವುದೂ, ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1964ರ ಪ್ರಾರಂಭಕ್ಕೆ ಮುಂಚೆ ಚುನಾಯಿತನಾದ ಯಾವನೇ ಸದಸ್ಯನ ಪದಾವಧಿಗೆ ಬಾಧಕವಾಗತಕ್ಕುದಲ್ಲ. ಆದರೆ, ಅಂಥ ಪ್ರಾರಂಭದಂದು ಪ್ರತಿಯೊಂದು ಚುನಾವಣೆಯು, ಸದರಿ ಪರಂತುಕವನ್ನು ಜಾರಿಗೊಳಿಸಲು ಭಾರತದ ಬಾರ್ ಕೌನ್ಸಿಲ್ ರಚಿಸುವ ನಿಯಮಗಳ ಉಪಬಂಧಗಳಿಗನುಸಾರವಾಗಿ ನಡೆಯತಕ್ಕುದು.

(6) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ರಾಜ್ಯ ಬಾರ್ ಕೌನ್ಸಿಲ್ ಪುನರ್ ರಚನೆಯಾಗುವ ತನಕ (2)ನೇ ಉಪಪ್ರಕರಣದ (ಬಿ) ಖಂಡದಲ್ಲಿರುವುದು ಯಾವುದೂ ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1973ರ ಪ್ರಾರಂಭದ ನಿಕಟ ಪೂರ್ವದಲ್ಲಿ ರಚಿತವಾದ ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನಲ್ಲಿರುವ ಚುನಾಯಿತ ಸದಸ್ಯರ ಪ್ರಾತಿನಿಧ್ಯಕ್ಕೆ ಬಾಧಕವಾಗತಕ್ಕುದಲ್ಲ.

**4. ಭಾರತದ ಬಾರ್ ಕೌನ್ಸಿಲ್.**– (1) ಈ ಅಧಿನಿಯಮವು ಅನ್ವಯವಾಗುವ ರಾಜ್ಯ ಕ್ಷೇತ್ರಗಳಿಗೆ ಭಾರತದ ಬಾರ್ ಕೌನ್ಸಿಲ್ ಎಂಬ ಹೆಸರಿನ ಒಂದು ಬಾರ್ ಕೌನ್ಸಿಲ್ ಇರತಕ್ಕುದು; ಅದು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ:–

(ಎ) ಭಾರತದ ಅಟಾರ್ನಿ ಜನರಲ್, ಪದನಿಮಿತ್ತ;

(ಬಿ) ಭಾರತದ ಸಾಲಿಸಿಟರ್ ಜನರಲ್, ಪದನಿಮಿತ್ತ;

(ಬಿಬಿ) [ * * * ]

(ಸಿ) ಪ್ರತಿಯೊಂದು ರಾಜ್ಯದ ಬಾರ್ ಕೌನ್ಸಿಲ್, ತನ್ನ ಸದಸ್ಯರೊಳಗಿಂದ ಚುನಾಯಿಸಿದ ಒಬ್ಬ ಸದಸ್ಯ;

(1ಎ) ಯಾರೇ ವ್ಯಕ್ತಿಯು, 3ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆಯನ್ನು ಹೊಂದಿರುವ ಹೊರತು ಅವನು ಭಾರತದ ಬಾರ್ ಕೌನ್ಸಿಲ್‌ನ ಒಬ್ಬ ಸದಸ್ಯನಾಗಿ ಚುನಾಯಿತನಾಗುವುದಕ್ಕೆ ಅರ್ಹನಾಗತಕ್ಕುದಲ್ಲ.

(2) ನಿಯಮಿಸಬಹುದಾದಂಥ ರೀತಿಯಲ್ಲಿ ಭಾರತದ ಬಾರ್ ಕೌನ್ಸಿಲ್‌ಗೆ ಆ ಕೌನ್ಸಿಲ್‌ನಿಂದ ಚುನಾಯಿತನಾದ ಒಬ್ಬ ಅಧ್ಯಕ್ಷನು ಮತ್ತು ಒಬ್ಬ ಉಪಾಧ್ಯಕ್ಷನು ಇರತಕ್ಕುದು.

(2ಎ) ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1977ರ ಪ್ರಾರಂಭದ ನಿಕಟ ಪೂರ್ವದಲ್ಲಿ, ಭಾರತದ ಬಾರ್ ಕೌನ್ಸಿಲ್‌ನ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಪದಧಾರಣ ಮಾಡಿರುವ ಯಾರೇ

ವ್ಯಕ್ತಿಯು ಅಂಥ ಪ್ರಾರಂಭದಂದು, ಅಧ್ಯಕ್ಷನಾಗಿ ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕುದು:

ಪರಂತು, ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1977ರ ಪ್ರಾರಂಭದ ಅನಂತರ ಚುನಾಯಿತನಾದ ಕೌನ್ಸಿಲ್‌ನ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನು ಕಾರ್ಯಭಾರವನ್ನು ವಹಿಸಿಕೊಳ್ಳುವವರೆಗೆ, ಅಂಥ ಪ್ರತಿಯೊಬ್ಬ ವ್ಯಕ್ತಿಯು ತನ್ನ ಹುದ್ದೆಯ ಕರ್ತವ್ಯಗಳ ನಿರ್ವಹಣೆಯನ್ನು ಮುಂದುವರಿಸತಕ್ಕುದು.

(3) ರಾಜ್ಯ ಬಾರ್ ಕೌನ್ಸಿಲ್‌ನಿಂದ ಚುನಾಯಿತನಾದ ಭಾರತದ ಬಾರ್ ಕೌನ್ಸಿಲ್‌ನ ಸದಸ್ಯನ ಪದಾವಧಿಯು,-

(i) ಪದನಿಮಿತ್ತ ಪದಧಾರಣ ಮಾಡಿರುವ ರಾಜ್ಯದ ಬಾರ್ ಕೌನ್ಸಿಲ್‌ನ ಸದಸ್ಯನ ಸಂದರ್ಭದಲ್ಲಿ, ಅವನು ಚುನಾಯಿತನಾದ ದಿನಾಂಕದಿಂದ ಎರಡು ವರ್ಷಗಳವರೆಗೆ ಅಥವಾ ಅವನು ರಾಜ್ಯದ ಬಾರ್ ಕೌನ್ಸಿಲ್‌ನ ಸದಸ್ಯನಾಗಿರುವುದು ನಿಂತುಹೋಗುವವರೆಗೆ, ಇದರಲ್ಲಿ ಯಾವುದು ಮೊದಲೋ ಆವರೆಗೆ ಇರತಕ್ಕುದು; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ, ರಾಜ್ಯದ ಬಾರ್ ಕೌನ್ಸಿಲಿನ ಸದಸ್ಯನಾಗಿ ಅವನು ಪದಧಾರಣ ಮಾಡಿರುವ ಅವಧಿಯವರೆಗೆ ಇರತಕ್ಕುದು:

ಪರಂತು, ಅಂಥ ಪ್ರತಿಯೊಬ್ಬ ಸದಸ್ಯನು ಅವನ ಉತ್ತರಾಧಿಕಾರಿ ಚುನಾಯಿತನಾಗುವವರೆಗೆ, ಭಾರತದ ಬಾರ್ ಕೌನ್ಸಿಲ್‌ನ ಸದಸ್ಯನಾಗಿ ಪದಧಾರಣ ಮಾಡಿರುವುದು ಮುಂದುವರಿಯತಕ್ಕುದು.

**5. ಬಾರ್ ಕೌನ್ಸಿಲ್ ನಿಗಮಿತ ನಿಕಾಯವಾಗಿರುವುದು.-** ಪ್ರತಿಯೊಂದು ಬಾರ್ ಕೌನ್ಸಿಲ್, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ ಮತ್ತು ಹೊಂದಿರುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಒಂದು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಯಾವ ಹೆಸರಿನಿಂದ ಅದನ್ನು ಕರೆಯಲಾಗುವುದೋ ಆ ಹೆಸರಿನಿಂದ ಅದು ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

**6. ರಾಜ್ಯದ ಬಾರ್ ಕೌನ್ಸಿಲ್‌ಗಳ ಪ್ರಕಾರ್ಯಗಳು.-** (1) ಈ ಕೆಳಕಂಡವುಗಳು ರಾಜ್ಯ ಬಾರ್ ಕೌನ್ಸಿಲ್‌ನ ಪ್ರಕಾರ್ಯಗಳಾಗಿರತಕ್ಕುದು.

(ಎ) ವ್ಯಕ್ತಿಗಳನ್ನು ತನ್ನ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರಿಸಿಕೊಳ್ಳುವುದು;

(ಬಿ) ಅಂಥ ನ್ಯಾಯವಾದಿಗಳ ಪಟ್ಟಿಯನ್ನು ತಯಾರಿಸುವುದು ಮತ್ತು ಇಟ್ಟುಕೊಂಡು ಬರುವುದು;

(ಸಿ) ತನ್ನ ಪಟ್ಟಿಯಲ್ಲಿರುವ ನ್ಯಾಯವಾದಿಗಳ ವಿರುದ್ಧದ ದುರ್ನಡತೆಯ ಪ್ರಕರಣಗಳನ್ನು ಸ್ವೀಕರಿಸುವುದು ಮತ್ತು ನಿರ್ಧರಿಸುವುದು;

(ಡಿ) ತನ್ನ ಪಟ್ಟಿಯಲ್ಲಿನ ನ್ಯಾಯವಾದಿಗಳ ಹಕ್ಕುಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಹಿತಾಸಕ್ತಿಗಳನ್ನು ಕಾಪಾಡುವುದು;

(ಡಿಡಿ) ಈ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಮತ್ತು 7ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿರುವ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶಗಳಿಗಾಗಿ ನ್ಯಾಯವಾದಿಗಳ ಸಂಘಗಳ ಬೆಳವಣಿಗೆಯನ್ನು ವೃದ್ಧಿಗೊಳಿಸುವುದು;

(ಇ) ಕಾನೂನು ಸುಧಾರಣೆಯನ್ನು ಸಂವರ್ಧಿಸುವುದು ಮತ್ತು ಸಮರ್ಥಿಸುವುದು;

(ಇಇ) ಸುಪ್ರಸಿದ್ಧ ನ್ಯಾಯವೇತ್ತರಿಂದ ಕಾನೂನು ವಿಷಯಗಳ ಮೇಲೆ ವಿಚಾರ ಗೋಷ್ಠಿಗಳನ್ನು ಮತ್ತು ಉಪನ್ಯಾಸಗಳನ್ನು ಏರ್ಪಡಿಸುವುದು ಮತ್ತು ಕಾನೂನಿಗೆ ಸಂಬಂಧಿಸಿದ ನಿಯತಕಾಲಿಕ ಪತ್ರಿಕೆಗಳನ್ನು ಮತ್ತು ಪ್ರಬಂಧಗಳನ್ನು ಪ್ರಕಟಿಸುವುದು;

(ಇಇಇ)ನಿಯಮಿತ ರೀತಿಯಲ್ಲಿ ಬಡವರಿಗೆ ಕಾನೂನು ನೆರವನ್ನು ಒದಗಿಸುವುದು;

(ಎಫ್) ಬಾರ್ ಕೌನ್ಸಿಲ್‍ನ ನಿಧಿಗಳ ವ್ಯವಸ್ಥಾಪನೆ ಮಾಡುವುದು ಮತ್ತು ಅವುಗಳನ್ನು ತೊಡಗಿಸುವುದು;

(ಜಿ) ತನ್ನ ಸದಸ್ಯರ ಚುನಾವಣೆ ಬಗ್ಗೆ ಏರ್ಪಾಡು ಮಾಡುವುದು;

(ಜಿಜಿ) 7ನೇ ಪ್ರಕರಣದ (1)ನೇ ಉಪಪ್ರಕರಣದ (i)ನೇ ಖಂಡದ ಮೇರೆಗೆ ನೀಡಿದ ನಿರ್ದೇಶನಗಳ ಅನುಸಾರವಾಗಿ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡುವುದು ಮತ್ತು ಪರಿಶೀಲನೆ ನಡೆಸುವುದು;

(ಹೆಚ್) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ಪ್ರದತ್ತವಾದ ಇತರ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸುವುದು;

(ಐ) ಮೇಲೆ ಹೇಳಿದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವಶ್ಯಕವಾದ ಇತರ ಎಲ್ಲಾ ಕಾರ್ಯಗಳನ್ನು ಮಾಡುವುದು.

(2) ರಾಜ್ಯ ಬಾರ್ ಕೌನ್ಸಿಲ್ ಕೆಳಕಂಡ ಉದ್ದೇಶಗಳಿಗಾಗಿ ಒಂದು ಅಥವಾ ಹೆಚ್ಚು ನಿಧಿಗಳನ್ನು ನಿಯಮಿಸಿದ ರೀತಿಯಲ್ಲಿ ಸ್ಥಾಪಿಸಬಹುದು.

(ಎ) ಬಡವರಾದ, ಅಶಕ್ತರಾದ ನ್ಯಾಯವಾದಿಗಳಿಗಾಗಿ ಅಥವಾ ಇತರ ನ್ಯಾಯವಾದಿಗಳಿಗಾಗಿ ಕಲ್ಯಾಣ ಯೋಜನೆಗಳನ್ನು ಸಂಘಟಿಸುವುದಕ್ಕೆ ಆರ್ಥಿಕ ನೆರವನ್ನು ನೀಡುವುದು;

(ಬಿ) ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳನುಸಾರ ಕಾನೂನು ನೆರವು ಅಥವಾ ಸಲಹೆಯನ್ನು ನೀಡುವುದು;

(ಸಿ)ಕಾನೂನು ಗ್ರಂಥಾಲಯಗಳನ್ನು ಸ್ಥಾಪಿಸುವುದು.

(3) ರಾಜ್ಯ ಬಾರ್ ಕೌನ್ಸಿಲ್, (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಥವಾ ಯಾವುವೇ ಉದ್ದೇಶಗಳಿಗಾಗಿ ಯಾವುದೇ ಅನುದಾನಗಳನ್ನು, ದೇಣಿಗೆಗಳನ್ನು, ದಾನಗಳನ್ನು ಅಥವಾ ದತ್ತಿಗಳನ್ನು ಸ್ವೀಕರಿಸಬಹುದು ಮತ್ತು ಅವುಗಳನ್ನು ಆ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಯುಕ್ತ ನಿಧಿಗೆ ಅಥವಾ ನಿಧಿಗಳಿಗೆ ಜಮೆ ಮಾಡತಕ್ಕುದು.

**7. ಭಾರತದ ಬಾರ್ ಕೌನ್ಸಿಲ್‍ನ ಪ್ರಕಾರ್ಯಗಳು.–** (1) ಕೆಳಕಂಡವುಗಳು ಭಾರತದ ಬಾರ್ ಕೌನ್ಸಿಲ್‍ನ ಪ್ರಕಾರ್ಯಗಳಾಗಿರತಕ್ಕುದು:–

(ಎ) [ * * * ]

(ಬಿ) ನ್ಯಾಯವಾದಿಗಳಿಗಾಗಿ ವೃತ್ತೀಯ ನಡತೆ ಮತ್ತು ನೀತಿ ನಡಾವಳಿಯ ಮಟ್ಟವನ್ನು ಗೊತ್ತುಪಡಿಸುವುದು;

(ಸಿ) ತನ್ನ ಶಿಸ್ತುಪಾಲನಾ ಸಮಿತಿಯು ಮತ್ತು ಪ್ರತಿಯೊಂದು ರಾಜ್ಯ ಬಾರ್ ಕೌನ್ಸಿಲ್‍ನ ಶಿಸ್ತುಪಾಲನಾ ಸಮಿತಿಯು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಗೊತ್ತುಪಡಿಸುವುದು;

(ಡಿ) ನ್ಯಾಯವಾದಿಗಳ ಹಕ್ಕುಗಳು, ವಿಶೇಷಾಧಿಕಾರಗಳನ್ನು ಮತ್ತು ಹಿತಾಸಕ್ತಿಗಳನ್ನು ಕಾಪಾಡುವುದು;

(ಇ) ಕಾನೂನು ಸುಧಾರಣೆಗಳನ್ನು ಸಂವರ್ಧಿಸುವುದು ಮತ್ತು ಸಮರ್ಥಿಸುವುದು;

(ಎಫ್) ಈ ಅಧಿನಿಯಮದ ಮೇರೆಗೆ ಉದ್ಭವಿಸಬಹುದಾದ ಯಾವುದೇ ವಿಷಯವನ್ನು ರಾಜ್ಯ ಬಾರ್ ಕೌನ್ಸಿಲ್ಲು ಅದಕ್ಕೆ ಒಪ್ಪಿಸಿದಾಗ ಆ ಬಗ್ಗೆ ವ್ಯವಹರಿಸುವುದು ಮತ್ತು ಅದನ್ನು ವಿಲೇವಾರಿ ಮಾಡುವುದು;

(ಜಿ) ರಾಜ್ಯ ಬಾರ್ ಕೌನ್ಸಿಲ್‌ಗಳ ಸಾಮಾನ್ಯ ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳನ್ನು ನಿಯಂತ್ರಿಸುವುದು;

(ಎಚ್) ಕಾನೂನು ಶಿಕ್ಷಣವನ್ನು ಸಂವರ್ಧಿಸುವುದು ಮತ್ತು ಅಂಥ ಶಿಕ್ಷಣವನ್ನು ಕೊಡುವ ಭಾರತದಲ್ಲಿನ ವಿಶ್ವವಿದ್ಯಾನಿಲಯಗಳೊಂದಿಗೆ ಮತ್ತು ರಾಜ್ಯ ಬಾರ್ ಕೌನ್ಸಿಲ್‌ಗಳೊಂದಿಗೆ ಸಮಾಲೋಚಿಸಿ ಅಂಥ ಶಿಕ್ಷಣದ ಗುಣಮಟ್ಟವನ್ನು ಗೊತ್ತುಪಡಿಸುವುದು;

(ಐ) ಯಾವ ವಿಶ್ವವಿದ್ಯಾನಿಲಯದ ಕಾನೂನು ಪದವಿಯು ನ್ಯಾಯವಾದಿಯಾಗಿ ಹೆಸರು ನೋಂದಾಯಿಸುವುದಕ್ಕೆ ವಿದ್ಯಾರ್ಹತೆ ಆಗಿರುವುದೋ ಆ ವಿಶ್ವವಿದ್ಯಾನಿಲಯಗಳಿಗೆ ಮಾನ್ಯತೆ ನೀಡುವುದು ಮತ್ತು ಆ ಉದ್ದೇಶಕ್ಕಾಗಿ ಆ ವಿಶ್ವವಿದ್ಯಾನಿಲಯಗಳಿಗೆ ಭೇಟಿ ಕೊಡುವುದು ಮತ್ತು ಪರಿಶೀಲನೆ ನಡೆಸುವುದು ಅಥವಾ ಈ ಸಂಬಂಧವಾಗಿ ಅದು ನೀಡಬಹುದಾದಂಥ ನಿರ್ದೇಶನಗಳ ಅನುಸಾರವಾಗಿ ರಾಜ್ಯ ಬಾರ್ ಕೌನ್ಸಿಲ್‌ಗಳು ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡುವಂತೆ ಮತ್ತು ಪರಿಶೀಲನೆ ನಡೆಸುವಂತೆ ಏರ್ಪಾಡು ಮಾಡತಕ್ಕುದು;

(ಐಎ) ಸುಪ್ರಸಿದ್ಧ ನ್ಯಾಯವೇತ್ತರಿಂದ ಕಾನೂನು ವಿಷಯಗಳ ಮೇಲೆ ವಿಚಾರಗೋಷ್ಠಿಗಳನ್ನು ಮತ್ತು ಉಪನ್ಯಾಸಗಳನ್ನು ಏರ್ಪಡಿಸುವುದು ಮತ್ತು ಕಾನೂನಿಗೆ ಸಂಬಂಧಿಸಿದ ನಿಯತಕಾಲಿಕ ಪತ್ರಿಕೆಗಳನ್ನು ಮತ್ತು ವೃತ್ತ ಪ್ರಬಂಧಗಳನ್ನು ಪ್ರಕಟಿಸುವುದು;

(ಐಬಿ) ನಿಯಮಿತ ರೀತಿಯಲ್ಲಿ ಬಡವರಿಗೆ ಕಾನೂನು ನೆರವನ್ನು ಒದಗಿಸುವುದು;

(ಐಸಿ) ಈ ಅಧಿನಿಯಮದ ಮೇರೆಗೆ ನ್ಯಾಯವಾದಿಯಾಗಿ ಸೇರಿಕೊಳ್ಳುವ ಉದ್ದೇಶಕ್ಕಾಗಿ, ಭಾರತದ ಹೊರಗಡೆ ಕಾನೂನು ವಿಷಯದಲ್ಲಿ ಪಡೆದ ವಿದೇಶೀ ವಿದ್ಯಾರ್ಹತೆಗಳನ್ನು ಪಾರಸ್ಪರಿಕ ಆಧಾರದ ಮೇಲೆ ಮಾನ್ಯತೆ ನೀಡುವುದು;

(ಜೆ) ಬಾರ್ ಕೌನ್ಸಿಲ್‌ನ ನಿಧಿಗಳ ವ್ಯವಸ್ಥಾಪನೆ ಮಾಡುವುದು ಮತ್ತು ಅವುಗಳನ್ನು ತೊಡಗಿಸುವುದು;

(ಕೆ) ತನ್ನ ಸದಸ್ಯರ ಚುನಾವಣೆ ಬಗ್ಗೆ ಏರ್ಪಾಟು ಮಾಡುವುದು;

(ಎಲ್) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತನಗೆ ಪ್ರದತ್ತವಾದ ಇತರ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸುವುದು;

(ಎಂ) ಮೇಲೆ ಹೇಳಿದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವಶ್ಯಕವಾದ ಇತರ ಎಲ್ಲಾ ಕಾರ್ಯಗಳನ್ನು ಮಾಡುವುದು.

(2) ಭಾರತದ ಬಾರ್ ಕೌನ್ಸಿಲ್ ಕೆಳಕಂಡ ಉದ್ದೇಶಗಳಿಗಾಗಿ ಒಂದು ಅಥವಾ ಹೆಚ್ಚು ನಿಧಿಗಳನ್ನು ನಿಯಮಿಸಿದ ರೀತಿಯಲ್ಲಿ ಸ್ಥಾಪಿಸಬಹುದು:–

(ಎ) ಬಡವರಾದ, ಅಶಕ್ತರಾದ ನ್ಯಾಯವಾದಿಗಳಿಗಾಗಿ ಅಥವಾ ಇತರ ನ್ಯಾಯವಾದಿಗಳಿಗಾಗಿ ಕಲ್ಯಾಣ ಯೋಜನೆಗಳನ್ನು ಸಂಘಟಿಸುವುದಕ್ಕೆ ಆರ್ಥಿಕ ನೆರವನ್ನು ನೀಡುವುದು;

(ಬಿ) ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳಿಗನುಸಾರ ಕಾನೂನು ನೆರವನ್ನು ಅಥವಾ ಸಲಹೆಯನ್ನು ನೀಡುವುದು;

(ಸಿ) ಕಾನೂನು ಗ್ರಂಥಾಲಯಗಳನ್ನು ಸ್ಥಾಪಿಸುವುದು;

(3) ಭಾರತದ ಬಾರ್ ಕೌನ್ಸಿಲ್ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಥವಾ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಅನುದಾನಗಳನ್ನು, ದೇಣಿಗೆಗಳನ್ನು, ದಾನಗಳನ್ನು ಅಥವಾ ದತ್ತಿಗಳನ್ನು ಸ್ವೀಕರಿಸಬಹುದು, ಮತ್ತು ಅವುಗಳನ್ನು ಆ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಯುಕ್ತ ನಿಧಿಗೆ ಅಥವಾ ನಿಧಿಗಳಿಗೆ ಜಮೆ ಮಾಡತಕ್ಕುದು.

**7ಎ. ಅಂತಾರಾಷ್ಟ್ರೀಯ ನಿಕಾಯಗಳಲ್ಲಿ ಸದಸ್ಯತ್ವ.–** ಭಾರತದ ಬಾರ್ ಕೌನ್ಸಿಲ್ಲು ಅಂತಾರಾಷ್ಟ್ರೀಯ ನ್ಯಾಯವಾದಿಗಳ ಸಂಘ ಅಥವಾ ಅಂತಾರಾಷ್ಟ್ರೀಯ ಕಾನೂನು ನೆರವು ಸಂಘ ಮುಂತಾದ ಅಂತಾರಾಷ್ಟ್ರೀಯ ಕಾನೂನು ನಿಕಾಯಗಳ ಸದಸ್ಯತ್ವವನ್ನು ಪಡೆಯಬಹುದು, ಮತ್ತು ವಂತಿಗೆಯ ಅಥವಾ ಇತರ ರೂಪದಲ್ಲಿ ಅಂಥ ನಿಕಾಯಗಳಿಗೆ ತಾನು ಸೂಕ್ತವೆಂದು ಯೋಚಿಸುವಂಥ ಮೊತ್ತವನ್ನು ವಂತಿಗೆ ನೀಡಬಹುದು ಮತ್ತು ಯಾವುದೇ ಅಂತಾರಾಷ್ಟ್ರೀಯ ಕಾನೂನು ಸಮ್ಮೇಳನದಲ್ಲಿ ಅಥವಾ ವಿಚಾರಗೋಷ್ಠಿಯಲ್ಲಿ ಅದರ ಪ್ರತಿನಿಧಿಗಳು ಭಾಗವಹಿಸುವ ಖರ್ಚಿಗೆ ಅನುಮೋದನೆ ನೀಡಬಹುದು.

**8. ರಾಜ್ಯ ಬಾರ್ ಕೌನ್ಸಿಲ್‌ನ ಸದಸ್ಯರ ಪದಾವಧಿ.–** ರಾಜ್ಯ ಬಾರ್ ಕೌನ್ಸಿಲ್‌ನಲ್ಲಿನ ಚುನಾಯಿತ ಸದಸ್ಯನ (54ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅದರ ಚುನಾಯಿತ ಸದಸ್ಯನ ಹೊರತು) ಪದಾವಧಿಯು ಆತನು ಚುನಾಯಿತನಾಗಿರುವ ಬಗ್ಗೆ ಫಲಿತಾಂಶವನ್ನು ಪ್ರಕಟಿಸಿದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು:

ಪರಂತು, ರಾಜ್ಯ ಬಾರ್ ಕೌನ್ಸಿಲ್, ಸದರಿ ಅವಧಿ ಅಂತ್ಯವಾಗುವುದಕ್ಕೆ ಮುಂಚೆ ಅದರ ಸದಸ್ಯರ ಚುನಾವಣೆಗಾಗಿ ಅವಕಾಶ ಕಲ್ಪಿಸಲು ವಿಫಲವಾದಲ್ಲಿ, ಭಾರತದ ಬಾರ್ ಕೌನ್ಸಿಲ್, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಆದೇಶದ ಮೂಲಕ ಆರು ತಿಂಗಳಿಗೆ ಮೀರದಂತೆ ಸದರಿ ಅವಧಿಯನ್ನು ವಿಸ್ತರಿಸಬಹುದು.

**8ಎ. ಚುನಾವಣೆ ಇಲ್ಲದಿರುವಾಗ ವಿಶೇಷ ಸಮಿತಿ ರಚನೆ.–** ರಾಜ್ಯ ಬಾರ್ ಕೌನ್ಸಿಲ್ ಸಂದರ್ಭಾನುಸಾರ ಐದು ವರ್ಷಗಳು ಅಥವಾ 8ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವಿಸ್ತರಿಸಿದ ಅವಧಿ ಅಂತ್ಯವಾಗುವುದಕ್ಕೆ ಮುಂಚೆ ಅದರ ಸದಸ್ಯರುಗಳು ಚುನಾವಣೆಗಾಗಿ ಉಪಬಂಧಿಸಲು ವಿಫಲವಾದಲ್ಲಿ, ಭಾರತದ ಬಾರ್ ಕೌನ್ಸಿಲ್ ಅಂಥ ಅವಧಿಯು ಮುಗಿದ ಕೂಡಲೇ ಬರುವ ದಿನಾಂಕದಂದು ಅಥವಾ ಆ ದಿನಾಂಕದಿಂದ ಈ ಅಧಿನಿಯಮದ ಮೇರೆಗೆ ಬಾರ್ ಕೌನ್ಸಿಲ್ ರಚನೆಯಾಗುವವರೆಗೆ ರಾಜ್ಯ ಬಾರ್ ಕೌನ್ಸಿಲ್‌ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ,–

(i) 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿರುವ ರಾಜ್ಯ ಬಾರ್ ಕೌನ್ಸಿಲ್‌ನ ಪದನಿಮಿತ್ತ ಸದಸ್ಯನು ಅಧ್ಯಕ್ಷನಾಗಿರುವಂಥ:

ಪರಂತು, ಒಬ್ಬರಿಗಿಂತ ಹೆಚ್ಚಿನ ಪದನಿಮಿತ್ತ ಸದಸ್ಯರುಗಳಿದ್ದಲ್ಲಿ ಅವರಲ್ಲಿ ಅತ್ಯಂತ ಜೇಷ್ಠತಮನಾದವನು ಅಧ್ಯಕ್ಷನಾಗತಕ್ಕದ್ದು; ಮತ್ತು

(ii)ರಾಜ್ಯ ಬಾರ್ ಕೌನ್ಸಿಲ್‌ನ ಮತದಾರರ ಪಟ್ಟಿಯಲ್ಲಿರುವ ನ್ಯಾಯವಾದಿಗಳ ಪೈಕಿ ಭಾರತದ ಬಾರ್ ಕೌನ್ಸಿಲ್‌ನ ನಾಮ ನಿರ್ದೇಶನ ಮಾಡುವ ಇಬ್ಬರು ಸದಸ್ಯರು ಇರುವಂಥ

– ಒಂದು ವಿಶೇಷ ಸಮಿತಿಯನ್ನು ರಚಿಸತಕ್ಕದ್ದು.

(2) ವಿಶೇಷ ಸಮಿತಿ ರಚಿಸಿದ ಮೇಲೆ ಮತ್ತು ರಾಜ್ಯ ಬಾರ್ ಕೌನ್ಸಿಲ್ ರಚನೆಯಾಗುವವರೆಗೆ–

(ಎ) ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ನಿಹಿತವಾಗಿರುವ ಎಲ್ಲ ಆಸ್ತಿಗಳು ಮತ್ತು ಸ್ವತ್ತುಗಳು ವಿಶೇಷ ಸಮಿತಿಯಲ್ಲಿ ನಿಹಿತವಾಗತಕ್ಕುದು;

(ಬಿ) ರಾಜ್ಯ ಬಾರ್ ಕೌನ್ಸಿಲ್‌ನ ಎಲ್ಲ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಅವು ಯಾವುದೇ ಕರಾರಿನಿಂದ ಅಥವಾ ಇತರೆ ರೀತಿಯಿಂದ ಉದ್ಭವಿಸಿರಲಿ ಅವು ವಿಶೇಷ ಸಮಿತಿಯ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳಾಗಿರತಕ್ಕುದು;

(ಸಿ) ಯಾವುದೇ ಶಿಸ್ತಿನ ವಿಷಯ ಅಥವಾ ಇತರೆ ರೀತಿಯ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಬಾರ್ ಕೌನ್ಸಿಲ್‌ನ ಮುಂದೆ ಇತ್ಯರ್ಥದಲ್ಲಿ ಇರುವ ಎಲ್ಲಾ ವ್ಯವಹರಣೆಗಳು ವಿಶೇಷ ಸಮಿತಿಗೆ ವರ್ಗಾವಣೆಯಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ವಿಶೇಷ ಸಮಿತಿಯು, ಭಾರತದ ಬಾರ್ ಕೌನ್ಸಿಲ್ ಈ ಸಂಬಂಧವಾಗಿ ನೀಡಬಹುದಾದಂಥ ನಿರ್ದೇಶನಗಳ ಅನುಸಾರವಾಗಿ ರಾಜ್ಯ ಬಾರ್ ಕೌನ್ಸಿಲ್‌ಗೆ (1)ನೇ ಉಪಪ್ರಕರಣದ ಮೇರೆಗೆ ಅದರ ರಚನೆಯಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ

ಚುನಾವಣೆಗಳನ್ನು ನಡೆಸತಕ್ಕದ್ದು ಮತ್ತು ವಿಶೇಷ ಸಮಿತಿಯು ಯಾವುದೇ ಕಾರಣಕ್ಕಾಗಿ ಆರು ತಿಂಗಳ ಸದರಿ ಅವಧಿಯೊಳಗಾಗಿ ಚುನಾವಣೆ ನಡೆಸುವ ಸ್ಥಿತಿಯಲ್ಲಿರದಿದ್ದಲ್ಲಿ, ಭಾರತದ ಬಾರ್ ಕೌನ್ಸಿಲ್, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಸದರಿ ಅವಧಿಯನ್ನು ವಿಸ್ತರಿಸಬಹುದು.

**9. ಶಿಸ್ತು ಸಮಿತಿಗಳು.–** (1) ಒಂದು ಬಾರ್ ಕೌನ್ಸಿಲ್, ಒಂದು ಅಥವಾ ಹೆಚ್ಚು ಶಿಸ್ತು ಸಮಿತಿಗಳನ್ನು ರಚಿಸತಕ್ಕದ್ದು, ಅಂಥ ಪ್ರತಿಯೊಂದು ಸಮಿತಿಯು ಮೂವರು ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು, ಅವರಲ್ಲಿ ಇಬ್ಬರು, ಕೌನ್ಸಿಲ್ ತನ್ನ ಸದಸ್ಯರೊಳಗಿಂದ ಚುನಾಯಿಸಿದ ವ್ಯಕ್ತಿಗಳಾಗಿರತಕ್ಕದ್ದು ಮತ್ತು ಮತ್ತೊಬ್ಬನು 3ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆಗಳನ್ನು ಹೊಂದಿರುವ ಮತ್ತು ಕೌನ್ಸಿಲ್‌ನ ಸದಸ್ಯರಾಗಿರದ ನ್ಯಾಯವಾದಿಗಳೊಳಗಿಂದ ಕೌನ್ಸಿಲ್ ಸಹ ಸದಸ್ಯನನ್ನಾಗಿ ಸೇರಿಸಿಕೊಂಡ ವ್ಯಕ್ತಿಯಾಗಿರತಕ್ಕದ್ದು ಮತ್ತು ಶಿಸ್ತುಪಾಲನಾ ಸಮಿತಿಯ ಸದಸ್ಯರಲ್ಲಿ ಜೇಷ್ಠತಮನಾದ ನ್ಯಾಯವಾದಿಯು ಅದರ ಅಧ್ಯಕ್ಷನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1964ರ ಪ್ರಾರಂಭಕ್ಕೆ ಮುಂಚೆ ರಚಿತವಾದ ಯಾವುದೇ ಶಿಸ್ತು ಸಮಿತಿಯು, ಈ ಪ್ರಕರಣವು ಸದರಿ ಅಧಿನಿಯಮದಿಂದ ತಿದ್ದುಪಡಿ ಆಗಿರದಿದ್ದರೆ ಹೇಗೋ ಹಾಗೆ ತನ್ನ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಗಳನ್ನು ವಿಲೇವಾರಿ ಮಾಡಬಹುದು.

**9ಎ. ಕಾನೂನು ನೆರವು ಸಮಿತಿಗಳ ರಚನೆ.–** (1) ಬಾರ್ ಕೌನ್ಸಿಲ್ ಒಂದು ಅಥವಾ ಹೆಚ್ಚು ಕಾನೂನು ನೆರವು ಸಮಿತಿಗಳನ್ನು ರಚಿಸಬಹುದು ಮತ್ತು ಅಂಥ ಪ್ರತಿಯೊಂದು ಸಮಿತಿಯು, ನಿಯಮಿಸಬಹುದಾದಂತೆ ಒಂಭತ್ತಕ್ಕೆ ಮೀರದಷ್ಟು, ಆದರೆ ಐದಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕುದು.

(2) ಕಾನೂನು ನೆರವು ಸಮಿತಿಗಳ ಸದಸ್ಯರ ಅರ್ಹತೆಗಳು, ಆಯ್ಕೆಯ ವಿಧಾನ ಮತ್ತು ಪದಾವಧಿಯು ನಿಯಮಿಸಬಹುದಾದಂತೆ ಇರತಕ್ಕುದು.

**10. ಶಿಸ್ತು ಸಮಿತಿಗಳ ಹೊರತಾಗಿ ಇತರ ಸಮಿತಿಗಳ ರಚನೆ.–** (1) ರಾಜ್ಯ ಬಾರ್ ಕೌನ್ಸಿಲ್, ಈ ಕೆಳಕಂಡ ಸ್ಥಾಯೀ ಸಮಿತಿಗಳನ್ನು ರಚಿಸತಕ್ಕುದು, ಎಂದರೆ:–

(ಎ) ಕೌನ್ಸಿಲ್ ತನ್ನ ಸದಸ್ಯರೊಳಗಿಂದ ಚುನಾಯಿಸಿದ ಐವರು ಸದಸ್ಯರನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿ;

(ಬಿ) ಕೌನ್ಸಿಲ್ ತನ್ನ ಸದಸ್ಯರೊಳಗಿಂದ ಚುನಾಯಿಸಿದ ಮೂವರು ಸದಸ್ಯರನ್ನೊಳಗೊಂಡ ಭರ್ತಿ ಸಮಿತಿ.

(2) ಭಾರತದ ಬಾರ್ ಕೌನ್ಸಿಲ್ ಈ ಕೆಳಕಂಡ ಸ್ಥಾಯೀ ಸಮಿತಿಗಳನ್ನು ರಚಿಸತಕ್ಕುದು, ಎಂದರೆ:–

(ಎ) ಕೌನ್ಸಿಲ್ ತನ್ನ ಸದಸ್ಯರೊಳಗಿಂದ ಚುನಾಯಿಸಿದ ಒಂಬತ್ತು ಸದಸ್ಯರನ್ನೊಳಗೊಂಡ ಒಂದು ಕಾರ್ಯ ನಿರ್ವಾಹಕ ಸಮಿತಿ;

(ಬಿ) ಹತ್ತು ಸದಸ್ಯರನ್ನೊಳಗೊಂಡ ಒಂದು ಕಾನೂನು ಶಿಕ್ಷಣ ಸಮಿತಿ, ಅವರಲ್ಲಿ ಐವರು ಸದಸ್ಯರು, ಕೌನ್ಸಿಲ್ ತನ್ನ ಸದಸ್ಯರೊಳಗಿಂದ ಚುನಾಯಿಸಿದ ವ್ಯಕ್ತಿಗಳಾಗಿರತಕ್ಕುದು ಮತ್ತು ಐವರು ಕೌನ್ಸಿಲ್ ತನ್ನ ಸದಸ್ಯರೊಳಗಿಂದ ಸಹ ಸದಸ್ಯರನ್ನಾಗಿ ಸೇರಿಸಿಕೊಂಡ ವ್ಯಕ್ತಿಗಳಾಗಿರತಕ್ಕುದು.

(3) ರಾಜ್ಯ ಬಾರ್ ಕೌನ್ಸಿಲ್ ಮತ್ತು ಭಾರತದ ಬಾರ್ ಕೌನ್ಸಿಲ್ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ತಮ್ಮ ಸದಸ್ಯರೊಳಗಿಂದ ಅವಶ್ಯಕವೆಂದು ಭಾವಿಸಬಹುದಾದಂಥ ಇತರ ಸಮಿತಿಗಳನ್ನು ರಚಿಸಬಹುದು.

**10ಎ. ಬಾರ್ ಕೌನ್ಸಿಲ್‌ಗಳು ಮತ್ತು ಅವುಗಳ ಸಮಿತಿಗಳು ವ್ಯವಹಾರ ನಿರ್ವಹಿಸುವುದು.–** (1) ಭಾರತದ ಬಾರ್ ಕೌನ್ಸಿಲ್, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ನವದೆಹಲಿಯಲ್ಲಿ ಅಥವಾ ಅದು ನಿರ್ಧರಿಸಬಹುದಾದಂಥ ಇತರ ಸ್ಥಳದಲ್ಲಿ ಸಭೆ ಸೇರತಕ್ಕದ್ದು.

(2) ರಾಜ್ಯ ಬಾರ್ ಕೌನ್ಸಿಲ್, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅದರ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅದು ನಿರ್ಧರಿಸಬಹುದಾದಂಥ ಇತರ ಸ್ಥಳದಲ್ಲಿ ಸಭೆ ಸೇರತಕ್ಕದ್ದು.

(3) ಬಾರ್ ಕೌನ್ಸಿಲ್ ರಚಿಸಿದ ಶಿಸ್ತು ಸಮಿತಿಗಳಿಗೆ ಹೊರತಾದ ಸಮಿತಿಗಳು ಸಂಬಂಧಪಟ್ಟ ಬಾರ್ ಕೌನ್ಸಿಲ್‌ಗಳ ಕೇಂದ್ರ ಕಾರ್ಯಸ್ಥಾನಗಳಲ್ಲಿ ಸಭೆ ಸೇರತಕ್ಕದು.

(4) ಪ್ರತಿಯೊಂದು ಬಾರ್ ಕೌನ್ಸಿಲ್ ಮತ್ತು ಶಿಸ್ತು ಸಮಿತಿಗಳ ಹೊರತು ಅದರ ಪ್ರತಿಯೊಂದು ಸಮಿತಿಯು, ತನ್ನ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವ ಬಗ್ಗೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಅನುಸರಿಸತಕ್ಕದು.

(5) 9ನೇ ಪ್ರಕರಣದ ಮೇರೆಗೆ ರಚಿತವಾದ ಶಿಸ್ತು ಸಮಿತಿಗಳು ನಿಯಮಿಸಬಹುದಾದಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕುದು ಮತ್ತು ತಮ್ಮ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದು.

**10ಬಿ. ಬಾರ್ ಕೌನ್ಸಿಲಿನ ಸದಸ್ಯರ ಅನರ್ಹತೆ.–** ಬಾರ್ ಕೌನ್ಸಿಲಿನ ಚುನಾಯಿತ ಸದಸ್ಯನು, ತಾನು ಸದಸ್ಯನಾಗಿರುವ ಕೌನ್ಸಿಲ್‌ನ ನಿರಂತರವಾಗಿ ಬರುವ ಮೂರು ಸಭೆಗಳಿಗೆ ಸಾಕಷ್ಟು ಕಾರಣಗಳಿಲ್ಲದೆ ಗೈರು ಹಾಜರಾಗಿದ್ದಾನೆಂದು ಬಾರ್ ಕೌನ್ಸಿಲ್ ಘೋಷಿಸಿದರೆ ಅಥವಾ ಅವನ ಹೆಸರನ್ನು ಯಾವುದೇ ಕಾರಣಕ್ಕಾಗಿ ನ್ಯಾಯವಾದಿಗಳ ಪಟ್ಟಿಯಿಂದ ತೆಗೆದುಹಾಕಿದರೆ ಅಥವಾ ಅವನು ಭಾರತದ ಬಾರ್ ಕೌನ್ಸಿಲ್ ರಚಿಸಿರುವ ಯಾವುದೇ ನಿಯಮದ ಮೇರೆಗೆ ಅನ್ಯಥಾ ಅನರ್ಹನಾಗಿದ್ದರೆ ಅವನು ತನ್ನ ಪದವನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕುದು.

**11. ಬಾರ್ ಕೌನ್ಸಿಲ್‌ನ ಸಿಬ್ಬಂದಿ.–** (1) ಪ್ರತಿಯೊಂದು ಬಾರ್ ಕೌನ್ಸಿಲ್ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳತಕ್ಕುದು ಮತ್ತು ಅದು ಅವಶ್ಯಕವೆಂದು ಭಾವಿಸಬಹುದಾದಂತೆ ಅದರ ಸಿಬ್ಬಂದಿಗಾಗಿ ಒಬ್ಬ ಅಕೌಂಟೆಂಟ್‌ನನ್ನು ಮತ್ತು ಅಂಥ ಇತರ ವ್ಯಕ್ತಿಗಳನ್ನು ನೇಮಕ ಮಾಡತಕ್ಕುದು.

(2) ಕಾರ್ಯದರ್ಶಿ ಮತ್ತು ಅಕೌಂಟೆಂಟ್ ಯಾರಾದರೂ ಇದ್ದರೆ, ಅವರು, ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕುದು.

**12. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಪ್ರತಿಯೊಂದು ಬಾರ್ ಕೌನ್ಸಿಲ್, ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಲೆಕ್ಕಪುಸ್ತಕಗಳನ್ನು ಮತ್ತು ಇತರ ಪುಸ್ತಕಗಳನ್ನು ಇಟ್ಟುಕೊಂಡು ಬರುವ ವ್ಯವಸ್ಥೆ ಮಾಡತಕ್ಕುದು.

(2) ಬಾರ್ ಕೌನ್ಸಿಲಿನ ಲೆಕ್ಕಪತ್ರಗಳನ್ನು ಕಂಪನಿಗಳ ಅಧಿನಿಯಮ, 1956ರ ಮೇರೆಗೆ ಕಂಪನಿಗಳ ಲೆಕ್ಕ ಪರಿಶೋಧಕರಾಗಿ ಕಾರ್ಯ ನಿರ್ವಹಿಸಲು ಯುಕ್ತವಾಗಿ ಅರ್ಹರಾದ ಲೆಕ್ಕಪರಿಶೋಧಕರು, ನಿಯಮಿಸಬಹುದಾದಂಥ ವೇಳೆಗಳಲ್ಲಿ ಮತ್ತು ರೀತಿಯಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕುದು.

(3) ರಾಜ್ಯ ಬಾರ್ ಕೌನ್ಸಿಲ್ ತನ್ನ ಲೆಕ್ಕಗಳ ಒಂದು ಪ್ರತಿಯನ್ನು ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ಸಾಧ್ಯವಾಗಬಹುದಾದಷ್ಟು ಬೇಗನೆ ಪ್ರತಿಯೊಂದು ಆರ್ಥಿಕ ವರ್ಷದ ಕೊನೆಯಲ್ಲಿ ಆದರೆ ಆನಂತರ ಬರುವ ವರ್ಷದ ಡಿಸೆಂಬರ್ 31ನೇ ದಿನವನ್ನು ಮೀರದಂತೆ ಭಾರತದ ಬಾರ್ ಕೌನ್ಸಿಲ್‌ಗೆ ಕಳುಹಿಸತಕ್ಕುದು ಮತ್ತು ರಾಜಪತ್ರದಲ್ಲಿ ಅದು ಪ್ರಕಟವಾಗುವಂತೆ ಮಾಡತಕ್ಕುದು.

(4) ಭಾರತದ ಬಾರ್ ಕೌನ್ಸಿಲ್, ತನ್ನ ಲೆಕ್ಕಪತ್ರಗಳ ಪ್ರತಿಯನ್ನು ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ಸಾಧ್ಯವಾದಷ್ಟು ಬೇಗನೆ ಪ್ರತಿಯೊಂದು ಆರ್ಥಿಕ ವರ್ಷದ ಕೊನೆಯಲ್ಲಿ, ಆದರೆ ಅನಂತರ ಬರುವ ವರ್ಷದ ಡಿಸೆಂಬರ್ 31ನೇ ದಿನವನ್ನು ಮೀರದಂತೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಅದು ಭಾರತದ ರಾಜಪತ್ರದಲ್ಲಿ ಪ್ರಕಟವಾಗುವಂತೆ ವ್ಯವಸ್ಥೆ ಮಾಡತಕ್ಕುದು.

**13. ಬಾರ್ ಕೌನ್ಸಿಲ್‌ಗಳಲ್ಲಿನ ಮತ್ತು ಅವುಗಳ ಸಮಿತಿಗಳಲ್ಲಿನ ಖಾಲಿ ಸ್ಥಾನಗಳಿಂದಾಗಿ ಕೈಕೊಂಡ ಕ್ರಮವು ಅಸಿಂಧುಗೊಳ್ಳತಕ್ಕುದಲ್ಲ.–** ಬಾರ್ ಕೌನ್ಸಿಲ್ ಅಥವಾ ಅದರ ಯಾವುದೇ ಸಮಿತಿಯು ಕೈಕೊಂಡ ಕ್ರಮವನ್ನು

ಕೌನ್ಸಿಲ್‌ನಲ್ಲಿ ಅಥವಾ ಸಂದರ್ಭಾನುಸಾರ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನ ಇದೆಯೆಂಬ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷ ಇದೆಯೆಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

**14. ಬಾರ್ ಕೌನ್ಸಿಲ್ ಚುನಾವಣೆಗಳನ್ನು ಕೆಲವು ಕಾರಣಗಳ ಮೇಲೆ ಪ್ರಶ್ನಿಸತಕ್ಕುದಲ್ಲ.–** ಬಾರ್ ಕೌನ್ಸಿಲ್‌ನ ಯಾರೇ ಸದಸ್ಯನ ಚುನಾವಣೆಯ ದಿನಾಂಕದ ನೋಟೀಸನ್ನು ಆ ದಿನಾಂಕಕ್ಕೆ ಮುಂಚೆ ಮೂವತ್ತು ದಿನಗಳಿಗೆ ಕಡಿಮೆಯಿಲ್ಲದಂತೆ ರಾಜಪತ್ರದಲ್ಲಿ ಪ್ರಕಟಿಸಿದ್ದರೆ, ಆ ಚುನಾವಣೆಯ ಯುಕ್ತ ನೋಟೀಸನ್ನು ಚುನಾವಣೆಯಲ್ಲಿ ಮತ ನೀಡಲು ಅರ್ಹನಾದ ಯಾವನೇ ವ್ಯಕ್ತಿಗೆ ಕೊಟ್ಟಿಲ್ಲ ಎಂಬ ಕಾರಣದ ಮೇಲೆ ಅವನು ಚುನಾಯಿತನಾಗಿರುವ ವಿಷಯವನ್ನು ಪ್ರಶ್ನಿಸತಕ್ಕುದಲ್ಲ.

**15. ನಿಯಮ ರಚನಾಧಿಕಾರ.–** (1) ಬಾರ್ ಕೌನ್ಸಿಲ್ ಈ ಅಧ್ಯಾಯದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಉದ್ದೇಶಗಳಿಗೆ ಉಪಬಂಧ ಕಲ್ಪಿಸಬಹುದು,–

(ಎ) ವ್ಯಕ್ತಿಗಳು ಅಂಚೆಯ ಮೂಲಕ ಮತದಾನ ಮಾಡುವ ಹಕ್ಕನ್ನು ಚಲಾಯಿಸಬಹುದೆಂಬ ಷರತ್ತು ಸೇರಿದಂತೆ ರಹಸ್ಯ ಮತದಾನದ ಮೂಲಕ ಬಾರ್ ಕೌನ್ಸಿಲ್‌ನ ಸದಸ್ಯರ ಚುನಾವಣೆ, ಮತದಾರರ ಪಟ್ಟಿಯ ಸಿದ್ಧತೆ ಮತ್ತು ಪರಿಷ್ಕರಣೆ ಮತ್ತು ಚುನಾವಣೆಯ ಫಲಿತಾಂಶಗಳನ್ನು ಪ್ರಕಟಿಸತಕ್ಕ ರೀತಿ;

(ಬಿ) * * * * *

(ಸಿ) ಬಾರ್ ಕೌನ್ಸಿಲ್‌ನ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಚುನಾವಣೆಯ ರೀತಿ;

(ಡಿ) ಬಾರ್ ಕೌನ್ಸಿಲ್‌ನ ಅಥವಾ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಪದದ ಚುನಾವಣೆಯ ಕ್ರಮಬದ್ಧತೆ ಕುರಿತ ಸಂದೇಹಗಳು ಮತ್ತು ವಿವಾದಗಳನ್ನು ಅಂತಿಮವಾಗಿ ತೀರ್ಮಾನಿಸತಕ್ಕ ರೀತಿ ಮತ್ತು ತೀರ್ಮಾನಿಸುವ ಪ್ರಾಧಿಕಾರ;

(ಇ) * * * * *

(ಎಫ್) ಬಾರ್ ಕೌನ್ಸಿಲ್‌ನಲ್ಲಿ ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳನ್ನು ಭರ್ತಿ ಮಾಡುವುದು;

(ಜಿ) ಬಾರ್ ಕೌನ್ಸಿಲ್‌ನ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ಜಿಎ) 6ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಮತ್ತು 7ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆರ್ಥಿಕ ನೆರವನ್ನು ನೀಡುವ ಅಥವಾ ಕಾನೂನು ನೆರವನ್ನು ನೀಡುವ ಅಥವಾ ಸಲಹೆ ನೀಡುವ ಉದ್ದೇಶಕ್ಕಾಗಿ ಬಾರ್ ಕೌನ್ಸಿಲ್ ಒಂದು ಅಥವಾ ಹೆಚ್ಚು ಹೆಚ್ಚು ನಿಧಿಗಳನ್ನು ಸ್ಥಾಪಿಸುವುದು;

(ಜಿಬಿ) ಬಡವರಿಗೆ ಕಾನೂನು ನೆರವು ಮತ್ತು ಸಲಹೆ ನೀಡುವ ವ್ಯವಸ್ಥೆ, ಆ ಉದ್ದೇಶಕ್ಕಾಗಿ ಸಮಿತಿಗಳ ಮತ್ತು ಉಪ ಸಮಿತಿಗಳ ರಚನೆ ಮತ್ತು ಅವುಗಳ ಪ್ರಕಾರ್ಯಗಳು ಹಾಗೂ ಯಾವ ವ್ಯವಹರಣೆಗಳಿಗೆ ಸಂಬಂಧಿಸಿ ಕಾನೂನು ನೆರವನ್ನು ಅಥವಾ ಸಲಹೆಯನ್ನು ನೀಡಬಹುದೋ ಆ ವ್ಯವಹರಣೆಗಳ ಸ್ವರೂಪ;

(ಹೆಚ್) ಬಾರ್ ಕೌನ್ಸಿಲ್‌ನ ಸಭೆಗಳನ್ನು ಕರೆಯುವುದು ಮತ್ತು ಅವುಗಳನ್ನು ನಡೆಸುವುದು ಮತ್ತು ಅಲ್ಲಿ ವ್ಯವಹಾರವನ್ನು ನಿರ್ವಹಿಸುವುದು ಮತ್ತು ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆ;

(ಐ) ಬಾರ್ ಕೌನ್ಸಿಲ್‌ನ ಯಾವುದೇ ಸಮಿತಿಯ ರಚನೆ ಮತ್ತು ಪ್ರಕಾರ್ಯಗಳು ಮತ್ತು ಯಾವುದೇ ಅಂಥ ಸಮಿತಿಯ ಸದಸ್ಯರ ಪದಾವಧಿ;

(ಜೆ) ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಯಾವುದೇ ಅಂಥ ಸಮಿತಿಯ ವ್ಯವಹಾರವನ್ನು ನಡೆಸುವುದು ಮತ್ತು ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆ;

(ಕೆ) ಬಾರ್ ಕೌನ್ಸಿಲ್‌ನ ಕಾರ್ಯದರ್ಶಿ, ಅಕೌಂಟೆಂಟ್ ಮತ್ತು ಇತರ ನೌಕರರ ಅರ್ಹತೆಗಳು ಮತ್ತು ಸೇವಾ ಷರತ್ತುಗಳು;

(ಎಲ್) ಬಾರ್ ಕೌನ್ಸಿಲ್‌ನ ಲೆಕ್ಕದ ಪುಸ್ತಕಗಳನ್ನು ಮತ್ತು ಇತರ ಪುಸ್ತಕಗಳನ್ನು ಇಟ್ಟುಕೊಂಡು ಬರುವುದು;

(ಎಂ) ಲೆಕ್ಕ ಪರಿಶೋಧಕರ ನೇಮಕ ಮತ್ತು ಬಾರ್ ಕೌನ್ಸಿಲ್‌ನ ಲೆಕ್ಕಪತ್ರಗಳ ಪರಿಶೋಧನೆ;

(ಎನ್) ಬಾರ್ ಕೌನ್ಸಿಲ್‌ನ ನಿಧಿಗಳ ವ್ಯವಸ್ಥಾಪನೆ ಮತ್ತು ಹೂಡಿಕೆ.

(3) ಈ ಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ರಚಿಸಿದ ನಿಯಮಗಳನ್ನು ಭಾರತದ ಬಾರ್ ಕೌನ್ಸಿಲ್ ಅನುಮೋದಿಸಿದ ಹೊರತು ಅವು ಪರಿಣಾಮಕಾರಿಯಾಗತಕ್ಕುದಲ್ಲ.

## ಅಧ್ಯಾಯ – III

## ನ್ಯಾಯವಾದಿಗಳಿಗೆ ಪ್ರವೇಶ ಮತ್ತು ಅವರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸುವುದು

**16. ಹಿರಿಯ ಮತ್ತು ಇತರ ನ್ಯಾಯವಾದಿಗಳು.–** (1) ನ್ಯಾಯವಾದಿಗಳಲ್ಲಿ, ಹಿರಿಯ ನ್ಯಾಯವಾದಿಗಳು ಮತ್ತು ಇತರ ನ್ಯಾಯವಾದಿಗಳು ಎಂಬ ಎರಡು ವರ್ಗಗಳು ಇರತಕ್ಕುದು.

(2) ಒಬ್ಬ ನ್ಯಾಯವಾದಿಯು, ಅವನ ಸಾಮರ್ಥ್ಯದ, ಬಾರ್‌ನಲ್ಲಿನ ಸ್ಥಾನಮಾನದ ಅಥವಾ ಕಾನೂನಿನಲ್ಲಿ ಅವನಿಗಿರುವ ವಿಶೇಷ ಜ್ಞಾನದ ಅಥವಾ ಅನುಭವದ ದೃಷ್ಟಿಯಿಂದ ಅವನು ಹಿರಿಯ ನ್ಯಾಯವಾದಿಯ ವಿಶಿಷ್ಟ ಸ್ಥಾನಕ್ಕೆ ಅರ್ಹನಾಗಿದ್ದಾನೆಂಬುದಾಗಿ ಸರ್ವೋಚ್ಚ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅವನನ್ನು ಅವನ ಸಮ್ಮತಿಯೊಂದಿಗೆ ಹಿರಿಯ ನ್ಯಾಯವಾದಿಯಾಗಿ ಹೆಸರಿಸಬಹುದು.

(3) ಹಿರಿಯ ನ್ಯಾಯವಾದಿಗಳು, ತಮ್ಮ ವೃತ್ತಿ ನಡೆಸುವ ವಿಷಯದಲ್ಲಿ ಭಾರತದ ಬಾರ್ ಕೌನ್ಸಿಲ್ ಕಾನೂನು ವೃತ್ತಿಯ ಹಿತದೃಷ್ಟಿಯಿಂದ ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಒಳಪಡತಕ್ಕುದು.

(4) ಗೊತ್ತುಪಡಿಸಲಾದ ದಿನದ ನಿಕಟ ಪೂರ್ವದಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಯಾಗಿರುವ ಒಬ್ಬ ನ್ಯಾಯವಾದಿಯನ್ನು, ಈ ಪ್ರಕರಣದ ಉದ್ದೇಶಗಳಿಗಾಗಿ ಹಿರಿಯ ನ್ಯಾಯವಾದಿಯೆಂದು ಭಾವಿಸತಕ್ಕುದು:

ಪರಂತು, ಅಂಥ ಯಾವನೇ ಹಿರಿಯ ನ್ಯಾಯವಾದಿಯು, ತಾನು ಹಿರಿಯ ನ್ಯಾಯವಾದಿಯಾಗಿ ಮುಂದುವರಿಯಲು ಇಚ್ಛಿಸುವುದಿಲ್ಲವೆಂದು ಆತನ ಹೆಸರು ನಮೂದಾಗಿರುವ ನ್ಯಾಯವಾದಿಗಳ ಪಟ್ಟಿಯನ್ನು ಇಟ್ಟುಕೊಂಡು ಬಂದಿರುವ ಬಾರ್ ಕೌನ್ಸಿಲ್‌ಗೆ 31ನೇ ಡಿಸೆಂಬರ್, 1965ಕ್ಕೆ ಮುಂಚೆ ಒಂದು ಅರ್ಜಿಯನ್ನು ಸಲ್ಲಿಸಿದರೆ ಬಾರ್ ಕೌನ್ಸಿಲ್ ಅರ್ಜಿಯನ್ನು ಅಂಗೀಕರಿಸಬಹುದು ಮತ್ತು ಪಟ್ಟಿಯನ್ನು ತದನುಸಾರವಾಗಿ ವ್ಯತ್ಯಾಸಗೊಳಿಸತಕ್ಕುದು.

**17. ರಾಜ್ಯ ಬಾರ್ ಕೌನ್ಸಿಲ್‌ಗಳು ನ್ಯಾಯವಾದಿಗಳ ಪಟ್ಟಿಯನ್ನು ಇಟ್ಟುಕೊಂಡು ಬರುವುದು.–** (1) ಪ್ರತಿಯೊಂದು ರಾಜ್ಯ ಬಾರ್ ಕೌನ್ಸಿಲ್ ನ್ಯಾಯವಾದಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕುದು ಮತ್ತು ಅದನ್ನು ಇಟ್ಟುಕೊಂಡು ಬರತಕ್ಕುದು ಮತ್ತು ಅದರಲ್ಲಿ ಈ ಕೆಳಕಂಡ ವ್ಯಕ್ತಿಗಳ ಹೆಸರು ಮತ್ತು ವಿಳಾಸಗಳನ್ನು ನಮೂದಿಸತಕ್ಕುದು.

(ಎ) ಭಾರತದ ನಾಗರಿಕರಾಗಿದ್ದು, 1947ರ ಆಗಸ್ಟ್ 15ನೇ ದಿನಕ್ಕೆ ಮುಂಚೆ, ಭಾರತ ಸರ್ಕಾರದ ಅಧಿನಿಯಮ, 1935 ಇದರಲ್ಲಿ ಪರಿಭಾಷಿಸಿದಂತೆ, ಭಾರತದೊಳಗೆ ಅಡಕವಾಗಿದ್ದಂಥ ಯಾವುದೇ ಪ್ರದೇಶದಲ್ಲಿ ಸದರಿ ಅಧಿನಿಯಮದ ಮೇರೆಗೆ ನ್ಯಾಯವಾದಿಗಳಾಗಿ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸಲಾದ ವ್ಯಕ್ತಿಗಳೂ ಸೇರಿದಂತೆ ಭಾರತೀಯ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38)ರ ಮೇರೆಗೆ ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಗೊತ್ತುಪಡಿಸಲಾದ ದಿನದ ನಿಕಟ ಪೂರ್ವದಲ್ಲಿ ನ್ಯಾಯವಾದಿಗಳಾಗಿ ಸೇರಿಸಲಾಗಿರುವಂಥ ಮತ್ತು ಬಾರ್ ಕೌನ್ಸಿಲ್‌ನ ಅಧಿಕಾರ

ವ್ಯಾಪ್ತಿಯೊಳಗೆ ವೃತ್ತಿಯನ್ನು ನಡೆಸಲು ನಿಯಮಿಸಲಾದ ರೀತಿಯಲ್ಲಿ ಯಾವುದೇ ಸಮಯದಲ್ಲಿ ತಮ್ಮ ಉದ್ದೇಶವನ್ನು ವ್ಯಕ್ತಪಡಿಸುವಂಥ ಎಲ್ಲಾ ವ್ಯಕ್ತಿಗಳು;

(ಬಿ) ಗೊತ್ತುಪಡಿಸಲಾದ ದಿನದಂದು ಅಥವಾ ಅನಂತರ ಈ ಅಧಿನಿಯಮದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್‌ನ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಗಳೆಂದು ಸೇರಿಕೊಂಡಿರುವ ಇತರ ಎಲ್ಲಾ ವ್ಯಕ್ತಿಗಳು.

(2) ನ್ಯಾಯವಾದಿಗಳ ಅಂಥ ಪ್ರತಿಯೊಂದು ಪಟ್ಟಿಯು ಎರಡು ಭಾಗಗಳನ್ನು ಒಳಗೊಂಡಿರತಕ್ಕದ್ದು; ಮೊದಲನೇ ಭಾಗವು ಹಿರಿಯ ನ್ಯಾಯವಾದಿಗಳ ಹೆಸರುಗಳನ್ನು ಮತ್ತು ಎರಡನೇ ಭಾಗವು ಇತರ ನ್ಯಾಯವಾದಿಗಳ ಹೆಸರುಗಳನ್ನು ಒಳಗೊಂಡಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ಸಿದ್ಧಪಡಿಸಿ ಇಟ್ಟುಕೊಂಡು ಬಂದಿರುವ ನ್ಯಾಯವಾದಿಗಳ ಪಟ್ಟಿಯ ಪ್ರತಿಯೊಂದು ಭಾಗದಲ್ಲಿನ ನಮೂದನೆಗಳು ಜ್ಯೇಷ್ಠತೆಯ ಕ್ರಮದಲ್ಲಿ ಇರತಕ್ಕದ್ದು ಮತ್ತು ಈ ಸಂಬಂಧದಲ್ಲಿ ಭಾರತದ ಬಾರ್ ಕೌನ್ಸಿಲ್ ರಚಿಸಬಹುದಾದ ಯಾವುದೇ ನಿಯಮಕ್ಕೆ ಒಳಪಟ್ಟು ಅಂಥ ಜ್ಯೇಷ್ಠತೆಯನ್ನು ಈ ಕೆಳಕಂಡಂತೆ ನಿರ್ಧರಿಸತಕ್ಕದ್ದು.

(ಎ) (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ನ್ಯಾಯವಾದಿಯ ಜ್ಯೇಷ್ಠತೆಯನ್ನು ಭಾರತೀಯ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38)ರ ಮೇರೆಗೆ ಪಟ್ಟಿಯಲ್ಲಿ ಅವನ ಹೆಸರು ಸೇರ್ಪಡೆಯಾದ ದಿನಾಂಕಕ್ಕನುಸಾರವಾಗಿ ನಿರ್ಧರಿಸತಕ್ಕದ್ದು;

(ಬಿ) ಗೊತ್ತುಪಡಿಸಲಾದ ದಿನದ ನಿಕಟ ಪೂರ್ವದಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಯಾಗಿದ್ದ ಯಾವನೇ ವ್ಯಕ್ತಿಯ ಜ್ಯೇಷ್ಠತೆಯನ್ನು, ರಾಜ್ಯದ ನ್ಯಾಯವಾದಿಗಳ ಪಟ್ಟಿಯ ಮೊದಲನೇ ಭಾಗದ ಉದ್ದೇಶಗಳಿಗಾಗಿ, ಭಾರತದ ಬಾರ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ತತ್ವಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು;

(ಸಿ)[ * * * ]

(ಡಿ) ಗೊತ್ತುಪಡಿಸಲಾದ ದಿನದಂದು ಅಥವಾ ಅನಂತರ ಹಿರಿಯ ನ್ಯಾಯವಾದಿಯಾಗಿ ಪಟ್ಟಿಯಲ್ಲಿ ಸೇರಿಸಲಾದ ಅಥವಾ ನ್ಯಾಯವಾದಿಯಾಗಿ ಪ್ರವೇಶ ಪಡೆದ ಇತರ ಯಾವನೇ ವ್ಯಕ್ತಿಯ ಜ್ಯೇಷ್ಠತೆಯನ್ನು ಅಂಥ ಸೇರ್ಪಡೆಯ ಅಥವಾ ಸಂದರ್ಭಾನುಸಾರ ಪ್ರವೇಶಾವಕಾಶದ ದಿನಾಂಕದಿಂದ ನಿರ್ಧರಿಸತಕ್ಕದ್ದು.

(ಇ) (ಎ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1980ರ ಪ್ರಾರಂಭಕ್ಕೆ ಮುಂಚೆಯಾಗಲೀ ಅಥವಾ ತರುವಾಯವಾಗಲೀ ನ್ಯಾಯವಾದಿಯಾಗಿ ಪಟ್ಟಿಯಲ್ಲಿ ಸೇರಿಸಿದ ಅಟಾರ್ನಿಯ ಜ್ಯೇಷ್ಠತೆಯನ್ನು, ಅಟಾರ್ನಿಯಾಗಿ ಆತನನ್ನು ಪಟ್ಟಿಯಲ್ಲಿ ಸೇರಿಸಲಾದ ದಿನಾಂಕದನುಸಾರವಾಗಿ ನಿರ್ಧರಿಸತಕ್ಕದ್ದು.

(4) ಯಾವನೇ ವ್ಯಕ್ತಿಯು, ಒಂದು ರಾಜ್ಯ ಬಾರ್ ಕೌನ್ಸಿಲ್‌ಗಿಂತ ಹೆಚ್ಚಿನ ರಾಜ್ಯಗಳ ಬಾರ್ ಕೌನ್ಸಿಲ್‌ಗಳ ಪಟ್ಟಿಗಳಲ್ಲಿ ನ್ಯಾಯವಾದಿಯಾಗಿ ತನ್ನ ಹೆಸರನ್ನು ಸೇರ್ಪಡೆಮಾಡಿಕೊಳ್ಳತಕ್ಕದ್ದು.

**18. ಒಂದು ರಾಜ್ಯ ಪಟ್ಟಿಯಿಂದ ಮತ್ತೊಂದು ರಾಜ್ಯ ಪಟ್ಟಿಗೆ ಹೆಸರಿನ ವರ್ಗಾವಣೆ.–** (1) 17ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿಯು, ಆ ರಾಜ್ಯದ ಬಾರ್ ಕೌನ್ಸಿಲ್‌ನ ಪಟ್ಟಿಯಿಂದ ಇತರ ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಗೆ ತನ್ನ ಹೆಸರನ್ನು ವರ್ಗಾಯಿಸಲು ನಿಯಮಿಸಲಾದ ನಮೂನೆಯಲ್ಲಿ ಅರ್ಜಿಯನ್ನು ಭಾರತದ ಬಾರ್ ಕೌನ್ಸಿಲ್‌ಗೆ ಸಲ್ಲಿಸಬಹುದು, ಮತ್ತು ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಭಾರತದ ಬಾರ್ ಕೌನ್ಸಿಲ್, ಅಂಥ ವ್ಯಕ್ತಿಯ ಹೆಸರನ್ನು, ಯಾವುದೇ ಶುಲ್ಕವಿಲ್ಲದೆ, ಮೊದಲು ನಮೂದಿಸಿದ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಿಂದ ತೆಗೆದುಹಾಕತಕ್ಕದೆಂದು ಮತ್ತು ಆ ಇತರ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ನಮೂದಿಸತಕ್ಕದೆಂದು

ನಿರ್ದೇಶಿಸತಕ್ಕುದು ಮತ್ತು ಸಂಬಂಧಪಟ್ಟ ರಾಜ್ಯ ಬಾರ್ ಕೌನ್ಸಿಲ್‌ಗಳು ಅಂಥ ನಿರ್ದೇಶನವನ್ನು ಪಾಲಿಸತಕ್ಕುದು:

ಪರಂತು, ಯಾವ ನ್ಯಾಯವಾದಿಯ ವಿರುದ್ಧ ಯಾವುದೇ ಶಿಸ್ತು ವ್ಯವಹರಣೆಯು ಇತ್ಯರ್ಥದಲ್ಲಿರುವುದೋ ಆ ವ್ಯಕ್ತಿಯು, ವರ್ಗಾವಣೆಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಅಥವಾ ಇತರ ಯಾವುದೇ ಕಾರಣಕ್ಕಾಗಿ, ವರ್ಗಾವಣೆಗಾಗಿ ಸಲ್ಲಿಸಲಾದ ಅರ್ಜಿಯು ವಾಸ್ತವಿಕ ಉದ್ದೇಶಕ್ಕಾಗಿ ಸಲ್ಲಿಸಿದ್ದಲ್ಲವೆಂದು ಮತ್ತು ವರ್ಗಾವಣೆಯನ್ನು ಮಾಡತಕ್ಕುದಲ್ಲವೆಂದು ಭಾರತದ ಬಾರ್ ಕೌನ್ಸಿಲಿಗೆ ಕಂಡುಬಂದಲ್ಲಿ, ಭಾರತದ ಬಾರ್ ಕೌನ್ಸಿಲ್, ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಈ ಸಂಬಂಧದಲ್ಲಿ ಮನವಿಯನ್ನು ಸಲ್ಲಿಸುವ ಅವಕಾಶವನ್ನು ಕೊಟ್ಟ ತರುವಾಯ ಅರ್ಜಿಯನ್ನು ತಿರಸ್ಕರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಯು ಅರ್ಜಿಯನ್ನು ಸಲ್ಲಿಸಿದ ತರುವಾಯ, ಅವನ ಹೆಸರನ್ನು ಒಂದು ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಿಂದ ಮತ್ತೊಂದಕ್ಕೆ ವರ್ಗಾಯಿಸಿರುವಲ್ಲಿ, ಈ ಮುಂಚಿನ ಪಟ್ಟಿಯಲ್ಲಿ ಅವನು ಹೊಂದಿದ್ದ ಜ್ಯೇಷ್ಠತೆಯನ್ನು ತರುವಾಯದ ಪಟ್ಟಿಯಲ್ಲಿ ಉಳಿಸಿಕೊಳ್ಳತಕ್ಕುದೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

**19. ರಾಜ್ಯ ಬಾರ್ ಕೌನ್ಸಿಲ್‌ಗಳು ಭಾರತದ ಬಾರ್ ಕೌನ್ಸಿಲಿಗೆ ನ್ಯಾಯವಾದಿಗಳ ಪಟ್ಟಿಗಳ ನಕಲುಗಳನ್ನು ಕಳುಹಿಸುವುದು.–** ಪ್ರತಿಯೊಂದು ರಾಜ್ಯ ಬಾರ್ ಕೌನ್ಸಿಲ್, ಈ ಅಧಿನಿಯಮದ ಮೇರೆಗೆ ಮೊದಲ ಬಾರಿಗೆ ಅದು ತಯಾರಿಸಿದ ನ್ಯಾಯವಾದಿಗಳ ಪಟ್ಟಿಯ ಅಧಿಪ್ರಮಾಣಿತ ಪ್ರತಿಯನ್ನು ಭಾರತದ ಬಾರ್ ಕೌನ್ಸಿಲ್‌ಗೆ ಕಳುಹಿಸತಕ್ಕುದು ಮತ್ತು ಆ ತರುವಾಯ ಯಾವುದೇ ಅಂಥ ಪಟ್ಟಿಯಲ್ಲಿ ಮಾಡಿದ ಎಲ್ಲಾ ವ್ಯತ್ಯಾಸಗಳನ್ನು ಮತ್ತು ಅದಕ್ಕೆ ಮಾಡಿದ ಸೇರ್ಪಡೆಗಳನ್ನು, ಮಾಡಿದ ಕೂಡಲೇ ಅವುಗಳನ್ನು ಭಾರತದ ಬಾರ್ ಕೌನ್ಸಿಲಿಗೆ ತಿಳಿಸತಕ್ಕುದು.

**20. ಸರ್ವೋಚ್ಚ ನ್ಯಾಯಾಲಯದ ಕೆಲವು ನ್ಯಾಯವಾದಿಗಳ ಹೆಸರುಗಳ ಸೇರ್ಪಡೆಗೆ ವಿಶೇಷ ಉಪಬಂಧ.–** (1) ಈ ಅಧ್ಯಾಯದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಗೊತ್ತುಪಡಿಸಲಾದ ದಿನದ ನಿಕಟ ಪೂರ್ವದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಹಕ್ಕಿನಿಂದ ವೃತ್ತಿಯನ್ನು ನಡೆಸಲು ಅರ್ಹನಾಗಿರುವ ಮತ್ತು ಯಾವುದೇ ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಹೆಸರು ಸೇರ್ಪಡೆಯಾಗಿಲ್ಲದ ಪ್ರತಿಯೊಬ್ಬ ನ್ಯಾಯವಾದಿಯು ನಿಯಮಿಸಲಾದ ಅವಧಿಯೊಳಗೆ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಿಕೊಳ್ಳಲು ಭಾರತದ ಬಾರ್ ಕೌನ್ಸಿಲ್‌ಗೆ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ತನ್ನ ಉದ್ದೇಶವನ್ನು ತಿಳಿಸಬಹುದು ಮತ್ತು ಅದನ್ನು ಸ್ವೀಕರಿಸಿದ ಮೇಲೆ ಭಾರತದ ಬಾರ್ ಕೌನ್ಸಿಲ್, ಅಂಥ ನ್ಯಾಯವಾದಿಯ ಹೆಸರನ್ನು ಯಾವುದೇ ಶುಲ್ಕವಿಲ್ಲದೆ, ಆ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ಸೇರಿಸತಕ್ಕುದೆಂದು ನಿರ್ದೇಶಿಸತಕ್ಕುದು ಮತ್ತು ಸಂಬಂಧಪಟ್ಟ ರಾಜ್ಯ ಬಾರ್ ಕೌನ್ಸಿಲ್ ಅಂಥ ನಿರ್ದೇಶನವನ್ನು ಪಾಲಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಭಾರತದ ಬಾರ್ ಕೌನ್ಸಿಲ್‌ನ ನಿರ್ದೇಶನಕ್ಕನುಸಾರ ಮಾಡಲಾದ ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿನ ಯಾವುದೇ ನಮೂದನೆಯನ್ನು 17ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸಲಾದ ಜ್ಯೇಷ್ಠತೆಯ ಕ್ರಮದಲ್ಲಿ ಮಾಡತಕ್ಕುದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನ್ಯಾಯವಾದಿಯು, ನಿಯಮಿಸಲಾದ ಸಮಯದೊಳಗೆ ತನ್ನ ಉದ್ದೇಶವನ್ನು ವ್ಯಕ್ತಪಡಿಸಿದ್ದರೆ ಅಥವಾ ವ್ಯಕ್ತಪಡಿಸಲು ತಪ್ಪಿದರೆ, ಅವನ ಹೆಸರನ್ನು ದೆಹಲಿಯ ರಾಜ್ಯ ಬಾರ್ ಕೌನ್ಸಿಲ್‌ನ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸತಕ್ಕುದು.

**21. ಜ್ಯೇಷ್ಠತೆಯ ಸಂಬಂಧದಲ್ಲಿ ವಿವಾದಗಳು.–** (1) ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ಜ್ಯೇಷ್ಠತೆಯ ದಿನಾಂಕವು ಒಂದೇ ಆಗಿದ್ದಲ್ಲಿ ವಯಸ್ಸಿನಲ್ಲಿ ಹಿರಿಯನಾಗಿರುವವನನ್ನು ಇತರರಿಗಿಂತ ಜ್ಯೇಷ್ಠ ಎಂಬುದಾಗಿ ಪರಿಗಣಿಸತಕ್ಕುದು.

(2) ಮೇಲೆ ಹೇಳಿದುದಕ್ಕೆ ಒಳಪಟ್ಟು ಯಾರೇ ವ್ಯಕ್ತಿಯ ಜ್ಯೇಷ್ಠತೆಯ ಸಂಬಂಧದಲ್ಲಿ ಯಾವುದೇ ವಿವಾದವು ಉದ್ಭವಿಸಿದರೆ, ಅದನ್ನು ತೀರ್ಮಾನಕ್ಕಾಗಿ ಸಂಬಂಧಪಟ್ಟ ರಾಜ್ಯ ಬಾರ್ ಕೌನ್ಸಿಲ್‌ಗೆ ಕಳುಹಿಸತಕ್ಕುದು.

**22. ಹೆಸರು ಸೇರ್ಪಡೆ ಪ್ರಮಾಣ ಪತ್ರ.–** (1) ರಾಜ್ಯ ಬಾರ್ ಕೌನ್ಸಿಲ್ಲು, ಈ ಅಧಿನಿಯಮದ ಮೇರೆಗೆ ಅದು ಇಟ್ಟುಕೊಂಡು ಬಂದಿರುವ ನ್ಯಾಯವಾದಿಗಳ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾದ ಪ್ರತಿಯೊಬ್ಬ ವ್ಯಕ್ತಿಗೆ ನಿಯಮಿಸಲಾದ ನಮೂನೆಯಲ್ಲಿ ಹೆಸರು ಸೇರ್ಪಡೆ ಪ್ರಮಾಣ ಪತ್ರವನ್ನು ನೀಡತಕ್ಕುದು.

(2) ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿ ಹಾಗೆ ಹೆಸರು ಸೇರ್ಪಡೆಯಾದ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಖಾಯಂ ನಿವಾಸ ಸ್ಥಳವನ್ನು ಬದಲಾಯಿಸಿದರೆ, ಅಂಥ ಯಾವುದೇ ಬದಲಾವಣೆಯನ್ನು ತೊಂಬತ್ತು ದಿನಗಳೊಳಗಾಗಿ ಸಂಬಂಧಪಟ್ಟ ರಾಜ್ಯ ಬಾರ್ ಕೌನ್ಸಿಲ್‌ಗೆ ತಿಳಿಸತಕ್ಕುದು.

**23. ಮೊದಲು ವಾದಿಸುವ ಹಕ್ಕು.–** (1) ಭಾರತದ ಅಟಾರ್ನಿ ಜನರಲ್ಲನು ಇತರ ಎಲ್ಲಾ ನ್ಯಾಯವಾದಿಗಳಿಗಿಂತ ಮೊದಲು ವಾದಿಸುವ ಹಕ್ಕನ್ನು ಹೊಂದಿರತಕ್ಕುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಭಾರತದ ಸಾಲಿಸಿಟರ್ ಜನರಲ್ಲನು ಇತರ ಎಲ್ಲಾ ನ್ಯಾಯವಾದಿಗಳಿಗಿಂತ ಮೊದಲು ವಾದಿಸುವ ಹಕ್ಕನ್ನು ಹೊಂದಿರತಕ್ಕುದು.

(3) (1) ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ಲನು ಇತರ ಎಲ್ಲ ನ್ಯಾಯವಾದಿಗಳಿಗಿಂತ ಮೊದಲು ವಾದಿಸುವ ಹಕ್ಕನ್ನು ಹೊಂದಿರತಕ್ಕುದು.

(3ಎ) (1)ನೆಯ, (2)ನೆಯ ಮತ್ತು (3)ನೆಯ ಉಪಪ್ರಕರಣಗಳ ನಿಬಂಧನೆಗಳಿಗೆ ಒಳಪಟ್ಟು ಭಾರತದ ಎರಡನೆಯ ಹೆಚ್ಚುವರಿ ಸಾಲಿಸಿಟರ್ ಜನರಲ್ಲನು ಇತರ ಎಲ್ಲ ನ್ಯಾಯವಾದಿಗಳಿಗಿಂತ ಮೊದಲು ವಾದಿಸುವ ಹಕ್ಕನ್ನು ಹೊಂದಿರತಕ್ಕುದು.

(4) (1)ನೆಯ, (2)ನೆಯ, (3)ನೆಯ ಮತ್ತು (3ಎ) ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾವುದೇ ರಾಜ್ಯದ ಅಡ್ವೋಕೇಟ್ ಜನರಲ್ಲನು, ಇತರ ಎಲ್ಲಾ ನ್ಯಾಯವಾದಿಗಳಿಗಿಂತ ಮೊದಲು ವಾದಿಸುವ ಹಕ್ಕನ್ನು ಹೊಂದಿರತಕ್ಕುದು ಮತ್ತು ಅಡ್ವೋಕೇಟ್ ಜನರಲ್‌ಗಳ ಮೊದಲು ವಾದಿಸುವ ಹಕ್ಕು ಅವರವರ ಜ್ಯೇಷ್ಠತೆಗನುಸಾರ ನಿರ್ಧಾರವಾಗತಕ್ಕುದು.

(5) ಮೇಲೆ ಹೇಳಿರುವುದಕ್ಕೆ ಒಳಪಟ್ಟು,–

(i) ಹಿರಿಯ ನ್ಯಾಯವಾದಿಗಳು ಇತರ ಎಲ್ಲಾ ನ್ಯಾಯವಾದಿಗಳಿಗಿಂತ ಮೊದಲು ವಾದಿಸುವ ಹಕ್ಕನ್ನು ಹೊಂದಿರತಕ್ಕುದು.

(ii) ಹಿರಿಯ ನ್ಯಾಯವಾದಿಗಳ ಮತ್ತು ಇತರ ನ್ಯಾಯವಾದಿಗಳ ಮೊದಲು ವಾದಿಸುವ ಹಕ್ಕು ಅವರವರ ಜ್ಯೇಷ್ಠತೆಗನುಸಾರ ನಿರ್ಧಾರವಾಗತಕ್ಕುದು.

**24. ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರಿಕೊಳ್ಳಬಹುದಾದ ವ್ಯಕ್ತಿಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಒಳಪಟ್ಟು, ಒಬ್ಬ ವ್ಯಕ್ತಿಯು, ಈ ಕೆಳಕಂಡ ಷರತ್ತುಗಳನ್ನು ಪೂರೈಸಿದರೆ ಅವನು ಒಂದು ರಾಜ್ಯ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರಿಕೊಳ್ಳಲು ಅರ್ಹನಾಗಿರತಕ್ಕುದು, ಎಂದರೆ:–

(ಎ) ಅವನು ಭಾರತದ ನಾಗರಿಕನಾಗಿರಬೇಕು:

ಪರಂತು, ಈ ಅಧಿನಿಯಮದಲ್ಲಿರುವ ಇತರ ಉಪಬಂಧಗಳಿಗೊಳಪಟ್ಟು, ಯುಕ್ತ ಅರ್ಹತೆ ಹೊಂದಿರುವ ಭಾರತದ ನಾಗರಿಕರಿಗೆ ಇತರ ಯಾವುದೇ ದೇಶದಲ್ಲಿ ಕಾನೂನು ವೃತ್ತಿ ನಡೆಸಲು ಅನುಮತಿ ಕೊಡುವ ಪಕ್ಷದಲ್ಲಿ ಆ ಯಾವುದೇ ದೇಶದ ರಾಷ್ಟ್ರಕನಿಗೆ, ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರಿಸಿಕೊಳ್ಳಬಹುದು.

(ಬಿ) ಅವನಿಗೆ ಇಪ್ಪತ್ತೊಂದು ವರ್ಷ ವಯಸ್ಸು ತುಂಬಿರಬೇಕು.

(ಸಿ) ಅವನು,-

(i) ಭಾರತದ ರಾಜ್ಯಕ್ಷೇತ್ರದಲ್ಲಿನ ಯಾವುದೇ ವಿಶ್ವವಿದ್ಯಾನಿಲಯದಿಂದ 1967ನೇ ಮಾರ್ಚ್ 12ನೇ ದಿನಕ್ಕಿಂತ ಮುಂಚೆ; ಅಥವಾ

(ii) ಭಾರತದ ಸರ್ಕಾರದ ಅಧಿನಿಯಮ, 1935 ರಲ್ಲಿ ಪರಿಭಾಷಿಸಿದಂತೆ, ಭಾರತದೊಳಗೆ ಅಡಕವಾಗಿದ್ದ ಯಾವುದೇ ಪ್ರದೇಶದಲ್ಲಿನ ಯಾವುದೇ ವಿಶ್ವವಿದ್ಯಾನಿಲಯದಿಂದ 1947ನೇ ಆಗಸ್ಟ್ ಹದಿನೈದನೇ ದಿನಾಂಕಕ್ಕೆ ಮುಂಚೆ; ಅಥವಾ

(iii) (iiiಎ) ಉಪಖಂಡದಲ್ಲಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಭಾರತದ ಬಾರ್ ಕೌನ್ಸಿಲ್ ಮೂಲಕ ಮಾನ್ಯತೆ ಪಡೆದ ಭಾರತದಲ್ಲಿನ ಯಾವುದೇ ವಿಶ್ವವಿದ್ಯಾನಿಲಯದಿಂದ ಕಾನೂನಿನಲ್ಲಿ ಮೂರು ವರ್ಷಗಳ ಅಧ್ಯಯನ ಕ್ರಮವನ್ನು ಪೂರೈಸಿದ ಬಳಿಕ 1967ನೇ ಮಾರ್ಚಿ 12ನೇ ದಿನದ ತರುವಾಯ; ಅಥವಾ

(iiiಎ) ಭಾರತದ ಬಾರ್ ಕೌನ್ಸಿಲ್ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಮಾನ್ಯತೆ ಪಡೆದ ಭಾರತದ ಯಾವುದೇ ವಿಶ್ವವಿದ್ಯಾನಿಲಯದಿಂದ 1967-68ರ ಶೈಕ್ಷಣಿಕ ವರ್ಷದಿಂದ ಅಥವಾ ಅದಕ್ಕೆ ಮುಂಚಿನ ಯಾವುದೇ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗುವ ಎರಡು ಶೈಕ್ಷಣಿಕ ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಾನೂನಿನಲ್ಲಿ ಅಧ್ಯಯನ ಕ್ರಮವನ್ನು ಪೂರೈಸಿದ ತರುವಾಯ; ಅಥವಾ

(iv) ಇತರ ಯಾವುದೇ ಸಂದರ್ಭದಲ್ಲಿ, ಭಾರತದ ರಾಜ್ಯ ಕ್ಷೇತ್ರದ ಹೊರಗಿನ ಯಾವುದೇ ವಿಶ್ವವಿದ್ಯಾನಿಲಯದ ಕಾನೂನು ಪದವಿಯು ಭಾರತದ ಬಾರ್ ಕೌನ್ಸಿಲ್‌ನಿಂದ ಈ ಅಧಿನಿಯಮದ ಉದ್ದೇಶಗಳಿಗಾಗಿ ಮಾನ್ಯತೆ ಹೊಂದಿದ್ದರೆ ಆ ಯಾವುದೇ ವಿಶ್ವವಿದ್ಯಾನಿಲಯದಿಂದ

- ಕಾನೂನು ಪದವಿಯನ್ನು ಪಡೆದಿರಬೇಕು; ಅಥವಾ

ಅವನು ಬ್ಯಾರಿಸ್ಟರನಾಗಿದ್ದು, 1976ನೇ ಡಿಸೆಂಬರ್ 31ನೇ ದಿನದಂದು ಅಥವಾ ಅದಕ್ಕೆ ಮುಂಚೆ ನ್ಯಾಯವಾದಿಯಾಗಿ ಸೇರ್ಪಡೆಯಾಗಿರಬೇಕು. ಅಥವಾ ಮುಂಬಯಿಯ ಅಥವಾ ಕಲ್ಕತ್ತದ ಉಚ್ಚ ನ್ಯಾಯಾಲಯದ ಒಬ್ಬ ಅಟಾರ್ನಿಯಾಗಿ ಸೇರ್ಪಡೆಯಾಗಿದ್ದು ಆ ಉಚ್ಚ ನ್ಯಾಯಾಲಯಗಳಿಂದ ನಿರ್ದಿಷ್ಟಪಡಿಸಲಾದ ಕಟ್ಟಳೆಗೊಳಪಟ್ಟ ಅಭ್ಯಾಸಿಯ ಪರೀಕ್ಷೆಯಲ್ಲಿ ಅಥವಾ ಇತರ ಯಾವುದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಈ ಅಧಿನಿಯಮದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಸೇರಿಕೊಳ್ಳುವ ಉದ್ದೇಶಕ್ಕಾಗಿ ಭಾರತದ ಬಾರ್ ಕೌನ್ಸಿಲ್ ಮಾನ್ಯತೆ ನೀಡಿರುವಂಥ ಇತರ ವಿದೇಶೀ ಕಾನೂನು ವಿದ್ಯಾರ್ಹತೆಯನ್ನು ಪಡೆದಿರಬೇಕು;

(ಡಿ) [* * * *]

(ಇ) ಈ ಅಧ್ಯಾಯದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ಲು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಷರತ್ತುಗಳನ್ನು ಅವನು ಪೂರೈಸಿರಬೇಕು;

(ಎಫ್) ಪಟ್ಟಿಯಲ್ಲಿ ಸೇರಿಸುವುದಕ್ಕೆ ಸಂಬಂಧಿಸಿದಂತೆ, ಸ್ಟಾಂಪು ಅಧಿನಿಯಮ, 1899 (1899ರ 2) ಇದರ ಮೇರೆಗೆ ವಿಧಿಸಬಹುದಾದ ಸ್ಟಾಂಪು ಶುಲ್ಕ ಯಾವುದಾದರೂ ಇದ್ದರೆ ಅದನ್ನು ಹಾಗೂ ರಾಜ್ಯ ಬಾರ್ ಕೌನ್ಸಿಲ್ಲಿಗೆ ಸಂದಾಯ ಮಾಡಬೇಕಾದ ಆರು ನೂರು ರೂಪಾಯಿಗಳು ಮತ್ತು ಭಾರತದ ಬಾರ್ ಕೌನ್ಸಿಲ್‌ಗೆ, ಆ ಕೌನ್ಸಿಲ್‌ನ ಪರವಾಗಿ ಪಡೆದ ಡ್ರಾಫ್ಟ್ ರೂಪದಲ್ಲಿ ಒಂದು ನೂರ ಐವತ್ತು ರೂಪಾಯಿಗಳ ಸೇರ್ಪಡೆ ಫೀಜನ್ನು ಸಂದಾಯ ಮಾಡಿರಬೇಕು:

ಪರಂತು, ಅಂಥ ವ್ಯಕ್ತಿಯು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಒಬ್ಬ ಸದಸ್ಯನಾಗಿದ್ದಲ್ಲಿ, ಮತ್ತು ನಿಯಮಿಸಬಹುದಾದಂಥ ಪ್ರಾಧಿಕಾರದಿಂದ ಆ ಬಗ್ಗೆ ಒಂದು ಪ್ರಮಾಣ

ಪತ್ರವನ್ನು ಹಾಜರುಪಡಿಸಿದಲ್ಲಿ, ರಾಜ್ಯ ಬಾರ್ ಕೌನ್ಸಿಲ್‌ಗೆ ಸಂದಾಯ ಮಾಡಬೇಕಾದ ಸೇರ್ಪಡೆ ಫೀಜು ಒಂದು ನೂರು ರೂಪಾಯಿಗಳು ಮತ್ತು ಬಾರ್ ಕೌನ್ಸಿಲ್‌ಗೆ ಇಪ್ಪತ್ತೈದು ರೂಪಾಯಿಗಳಾಗಿರತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಭಾರತದಲ್ಲಿನ ಒಂದು ವಿಶ್ವವಿದ್ಯಾನಿಲಯವು, ಒಬ್ಬ ವ್ಯಕ್ತಿಯು, ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಾನೆಂದು ಘೋಷಿಸಿ ತನ್ನ ಸೂಚನಾ ಫಲಕದಲ್ಲಿ ಅಥವಾ ಅನ್ಯಥಾ ಆ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಿದ ದಿನಾಂಕದಂದು ಅವನು ಆ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆದಿರುವನೆಂದು ಭಾವಿಸತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಾನೂನು ಪದವೀಧರನಾಗಿರುವ ಒಬ್ಬ ವಕೀಲನು ಅಥವಾ ಪ್ಲೀಡರನು,-

(ಎ) ಗೊತ್ತುಪಡಿಸಲಾದ ದಿನದಿಂದ ಎರಡು ವರ್ಷಗಳಿಗೆ ಮೀರದ ಅವಧಿಯೊಳಗೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರ್ಪಡೆಗಾಗಿ ಅರ್ಜಿ ಸಲ್ಲಿಸಿದರೆ; ಮತ್ತು

(ಬಿ) (1)ನೇ ಉಪಪ್ರಕರಣದ (ಎ), (ಬಿ), (ಇ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಪೂರೈಸಿದರೆ

– ರಾಜ್ಯ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಅವನನ್ನು ಸೇರಿಸಿಕೊಳ್ಳಬಹುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಕನಿಷ್ಠ ಮೂರು ವರ್ಷಗಳು ವಕೀಲನಾಗಿರುವ ಅಥವಾ ಪ್ಲೀಡರ್ ಆಗಿರುವ ಅಥವಾ ಮುಖ್ತಿಯಾರ್ ಆಗಿರುವ ಅಥವಾ ಒಂದು ಉಚ್ಚ ನ್ಯಾಯಾಲಯದ (ಹಿಂದಿನ ಭಾಗ 'ಬಿ' ರಾಜ್ಯದ ಒಂದು ಉಚ್ಚ ನ್ಯಾಯಾಲಯವೂ ಸೇರಿದಂತೆ) ಅಥವಾ ಯಾವುದೇ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ನ್ಯಾಯಿಕ ಕಮೀಷನರ್‌ನ ನ್ಯಾಯಾಲಯದ ಒಬ್ಬ ನ್ಯಾಯವಾದಿಯಾಗಿ ಯಾವುದೇ ಕಾನೂನಿನ ಮೇರೆಗೆ ಸೇರ್ಪಡೆಯಾಗಲು ಯಾವುದೇ ಸಮಯದಲ್ಲಿ ಹಕ್ಕುಳ್ಳವನಾಗಿರುವ; ಅಥವಾ

(ಎಎ) 1961ರ ಡಿಸೆಂಬರ್ 1ನೇ ದಿನಾಂಕಕ್ಕೆ ಮುಂಚೆ, ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದಾಗಿ ಕಾನೂನು ವೃತ್ತಿಯನ್ನು (ವಾದ ಮಾಡುವ ಮೂಲಕವಾಗಲೀ ಅಥವಾ ವ್ಯವಹರಣೆ ಮೂಲಕವಾಗಲಿ ಅಥವಾ ಅವೆರಡರ ಮೂಲಕವಾಗಲಿ) ನಡೆಸುವುದಕ್ಕೆ ನ್ಯಾಯವಾದಿಯಾಗಿ ಅಲ್ಲದೆ ಅನ್ಯಥಾ ಹಕ್ಕುಳ್ಳವನಾಗಿರುವ ಅಥವಾ ಸದರಿ ದಿನಾಂಕದಂದು ಲೋಕ ಸೇವೆಯಲ್ಲಿಲ್ಲದಿದ್ದರೆ ಹಾಗೆ ಹಕ್ಕುಳ್ಳವನಾಗಬಹುದಾಗಿರುವ; ಅಥವಾ

(ಬಿ) [* * * *]

(ಸಿ) 1937ರ ಏಪ್ರಿಲ್ 1ನೇ ದಿನಾಂಕಕ್ಕೆ ಮುಂಚೆ, ಭಾರತ ಸರ್ಕಾರದ ಅಧಿನಿಯಮ, 1935 ಇದರಲ್ಲಿ ಪರಿಭಾಷಿಸಿದಂತೆ ಬರ್ಮಾ ದೇಶದಲ್ಲಿ ಒಳಗೊಂಡಿರುವ ಯಾವುದೇ ಕ್ಷೇತ್ರದಲ್ಲಿನ ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿರುವ; ಅಥವಾ

(ಡಿ) ಈ ಬಗ್ಗೆ ಭಾರತದ ಬಾರ್ ಕೌನ್ಸಿಲ್ ರಚಿಸಿದ ಯಾವುದೇ ನಿಯಮದ ಮೇರೆಗೆ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಹಕ್ಕುಳ್ಳವನಾಗಿರುವ

– ಯಾರೇ ವ್ಯಕ್ತಿಯು,

(i) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಸೇರ್ಪಡೆಗಾಗಿ ಅರ್ಜಿಯನ್ನು ಸಲ್ಲಿಸಿದರೆ; ಮತ್ತು

(ii) ಉಪಪ್ರಕರಣ (1)ರ (ಎ), (ಬಿ), (ಇ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದರೆ

– ಅವನನ್ನು ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರಿಸಿಕೊಳ್ಳಬಹುದು.

(iii) [ * * * ]

**24ಎ. ಸೇರ್ಪಡೆಗೆ ಅನರ್ಹತೆ.–** (1) ಯಾರೇ ವ್ಯಕ್ತಿಯು,–

(ಎ) ಅವನು ನೈತಿಕ ಪತನವನ್ನು ಒಳಗೊಂಡ ಒಂದು ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಬಿ) ಅವನು ಅಸ್ಪೃಶ್ಯತಾ (ಅಪರಾಧಗಳು) ಅಧಿನಿಯಮ, 1955ರ ಉಪಬಂಧಗಳ ಮೇರೆಗಿನ ಒಂದು ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ

– ಅವನನ್ನು ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರಿಸಿಕೊಳ್ಳತಕ್ಕುದಲ್ಲ;

(ಸಿ) ಅವನು ನೈತಿಕ ಪತನವನ್ನು ಒಳಗೊಂಡ ಯಾವುದೇ ಆರೋಪದ ಮೇಲೆ ರಾಜ್ಯ ಅಧೀನ ಉದ್ಯೋಗದಿಂದ ಅಥವಾ ಹುದ್ದೆಯಿಂದ ವಜಾ ಆಗಿದ್ದರೆ ಅಥವಾ ತೆಗೆದುಹಾಕಲ್ಪಟ್ಟಿದ್ದರೆ

ವಿವರಣೆ:– ಈ ಖಂಡದಲ್ಲಿ " ರಾಜ್ಯ " ಎಂಬ ಪದವು ಸಂವಿಧಾನದ 12ನೇ ಅನುಚ್ಛೇದದ ಮೇರೆಗೆ ಅದಕ್ಕೆ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು:

ಪರಂತು, ಹಿಂದೆ ಹೇಳಿದಂಥ ಸೇರ್ಪಡೆ ಬಗೆಗಿನ ಅನರ್ಹತೆಯು, ಅವನ ಬಿಡುಗಡೆಯಾದ ಅಥವಾ ವಜಾ ಆದ ಅಥವಾ ಸಂದರ್ಭಾನುಸಾರ ತೆಗೆದುಹಾಕಲ್ಪಟ್ಟ ಎರಡು ವರ್ಷಗಳ ಅವಧಿಯ ತರುವಾಯ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕುದು.

(2) ತಪ್ಪಿತಸ್ಥನೆಂದು ನಿರ್ಣೀತನಾದ ಯಾರೇ ವ್ಯಕ್ತಿಗೆ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958ರ ಉಪಬಂಧಗಳನ್ನು ಅನ್ವಯಿಸಿರುವಲ್ಲಿ (1)ನೇ ಉಪಪ್ರಕರಣದಲ್ಲಿರುವುದು ಯಾವುದೂ ಅವನಿಗೆ ಅನ್ವಯಿಸತಕ್ಕುದಲ್ಲ.

**25. ಪಟ್ಟಿಯಲ್ಲಿ ಸೇರ್ಪಡೆಗಾಗಿ ಅರ್ಜಿಗಳನ್ನು ಯಾವ ಪ್ರಾಧಿಕಾರಕ್ಕೆ ಸಲ್ಲಿಸಬಹುದು.–** ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಸಲ್ಲಿಸತಕ್ಕ ಅರ್ಜಿಯನ್ನು, ಅರ್ಜಿದಾರನು ಯಾವ ರಾಜ್ಯ ಬಾರ್ ಕೌನ್ಸಿಲ್ಲಿನ ಅಧಿಕಾರ ವ್ಯಾಪ್ತಿಯೊಳಗೆ ವೃತ್ತಿ ನಡೆಸಲು ಉದ್ದೇಶಿಸುತ್ತಾನೆಯೋ ಆ ರಾಜ್ಯ ಬಾರ್ ಕೌನ್ಸಿಲ್ಲಿಗೆ ನಿಯಮಿಸಲಾದ ನಮೂನೆಯಲ್ಲಿ ಸಲ್ಲಿಸತಕ್ಕುದು.

**26. ನ್ಯಾಯವಾದಿಯಾಗಿ ಪ್ರವೇಶಾವಕಾಶ ಪಡೆಯಲು ಸಲ್ಲಿಸಿದ ಅರ್ಜಿಗಳ ವಿಲೆ.–** (1) ರಾಜ್ಯ ಬಾರ್ ಕೌನ್ಸಿಲ್, ನ್ಯಾಯವಾದಿಯಾಗಿ ಪ್ರವೇಶಾವಕಾಶ ಪಡೆಯಲು ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು ತನ್ನ ಸೇರ್ಪಡೆ ಸಮಿತಿಗೆ ಕಳಿಸತಕ್ಕುದು, ಮತ್ತು (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೆ ಮತ್ತು ಈ ಬಗ್ಗೆ ರಾಜ್ಯ ಬಾರ್ ಕೌನ್ಸಿಲ್ ಲಿಖಿತದಲ್ಲಿ ಕೊಡಬಹುದಾದಂಥ ಯಾವುದೇ ನಿರ್ದೇಶನಕ್ಕೆ ಒಳಪಟ್ಟು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಸಮಿತಿಯು ಆ ಅರ್ಜಿಯನ್ನು ವಿಲೆ ಮಾಡತಕ್ಕುದು:

ಪರಂತು, ಭಾರತದ ಬಾರ್ ಕೌನ್ಸಿಲ್ಲಿಗೆ, ಈ ಬಗ್ಗೆ ಅದಕ್ಕೆ ಮಾಡಲಾದ ಉಲ್ಲೇಖದ ಮೇಲೆಯಾಗಲಿ ಅಥವಾ ಅನ್ಯಥಾ ಯಾರೇ ವ್ಯಕ್ತಿಯು ತನ್ನ ಹೆಸರನ್ನು ಅತ್ಯಾವಶ್ಯಕ ಸಂಗತಿಯ ಸಂಬಂಧದಲ್ಲಿ ತಪ್ಪು ನಿರೂಪಣೆಯಿಂದ ಅಥವಾ ಮೋಸದಿಂದ ಅಥವಾ ಅನುಚಿತ ಪ್ರಭಾವದಿಂದ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸಿಕೊಂಡಿದ್ದಾನೆಂದು ಮನವರಿಕೆಯಾದರೆ, ಅದು ಅವನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ತರುವಾಯ, ನ್ಯಾಯವಾದಿಗಳ ಪಟ್ಟಿಯಿಂದ ಅಂಥ ವ್ಯಕ್ತಿಯ ಹೆಸರನ್ನು ತೆಗೆದುಹಾಕಬಹುದು.

(2) ರಾಜ್ಯ ಬಾರ್ ಕೌನ್ಸಿಲ್ಲಿನ ಸೇರ್ಪಡೆ ಸಮಿತಿಯು ಯಾವುದೇ ಅಂಥ ಅರ್ಜಿಯನ್ನು ತಿರಸ್ಕರಿಸಲು ಪ್ರಸ್ತಾವಿಸಿದ್ದಲ್ಲಿ, ಅದು ಭಾರತದ ಬಾರ್ ಕೌನ್ಸಿಲ್‌ಗೆ ಅಭಿಪ್ರಾಯಕ್ಕಾಗಿ ಅರ್ಜಿಯನ್ನು ಕಳಿಸತಕ್ಕುದು ಮತ್ತು ಅಂಥ ಪ್ರತಿಯೊಂದು ಉಲ್ಲೇಖದ ಜೊತೆಯಲ್ಲಿ ಆ ಅರ್ಜಿಯ ನಿರಾಕರಣೆಗಳ ಕಾರಣಗಳನ್ನು ಸಮರ್ಥಿಸುವ ನಿರೂಪಣೆಗಳನ್ನು ಲಗತ್ತಿಸತಕ್ಕುದು.

(3) ರಾಜ್ಯ ಬಾರ್ ಕೌನ್ಸಿಲ್ಲಿನ ಸೇರ್ಪಡೆ ಸಮಿತಿಯು, ಭಾರತದ ಬಾರ್ ಕೌನ್ಸಿಲ್ಲಿನ ಅಭಿಪ್ರಾಯಕ್ಕನುಸಾರವಾಗಿ (2)ನೇ ಉಪಪ್ರಕರಣದ ಮೇರೆಗೆ ಭಾರತದ ಬಾರ್ ಕೌನ್ಸಿಲ್‌ಗೆ ಸಲ್ಲಿಸಿದ ಯಾವುದೇ ಅರ್ಜಿಯನ್ನು ವಿಲೇ ಮಾಡತಕ್ಕುದು.

(4) ರಾಜ್ಯ ಬಾರ್ ಕೌನ್ಸಿಲ್ಲಿನ ಸೇರ್ಪಡೆ ಸಮಿತಿಯು, ತನ್ನ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರ್ಪಡೆಗಾಗಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ನಿರಾಕರಿಸಿರುವಲ್ಲಿ, ರಾಜ್ಯ ಬಾರ್ ಕೌನ್ಸಿಲ್ಲು ಸಾಧ್ಯವಾದಷ್ಟು ಬೇಗನೆ, ಯಾರ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಅಂಥ ವ್ಯಕ್ತಿಯ ಹೆಸರು, ವಿಳಾಸ ಮತ್ತು ಅರ್ಹತೆಗಳನ್ನು ಮತ್ತು ನಿರಾಕರಣೆಯ ಕಾರಣಗಳನ್ನು ವಿವರಿಸಿ ಅಂಥ ನಿರಾಕರಣೆಯ ಬಗ್ಗೆ ಇತರ ಎಲ್ಲಾ ರಾಜ್ಯ ಬಾರ್ ಕೌನ್ಸಿಲ್‌ಗಳಿಗೆ ತಿಳಿವಳಿಕೆಯನ್ನು ಕಳುಹಿಸತಕ್ಕುದು.

**26ಎ. ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲು ಅಧಿಕಾರ.–** ರಾಜ್ಯ ಬಾರ್ ಕೌನ್ಸಿಲ್ಲು, ಮೃತನಾಗಿರುವ ಅಥವಾ ತನ್ನ ಹೆಸರನ್ನು ತೆಗೆದುಹಾಕಲು ಕೋರಿಕೆಯನ್ನು ಸಲ್ಲಿಸಿರುವ ಯಾರೇ ನ್ಯಾಯವಾದಿಯ ಹೆಸರನ್ನು ರಾಜ್ಯದ ಪಟ್ಟಿಯಿಂದ ತೆಗೆದುಹಾಕಬಹುದು.

**27. ಒಂದು ಬಾರ್ ಕೌನ್ಸಿಲ್ಲು ನಿರಾಕರಿಸಿದ ಅರ್ಜಿಯನ್ನು ಕೆಲವು ಸಂದರ್ಭಗಳ ಹೊರತು ಮತ್ತೊಂದು ಬಾರ್ ಕೌನ್ಸಿಲ್ಲು ಸ್ವೀಕರಿಸದಿರುವುದು.–** ಒಂದು ರಾಜ್ಯ ಬಾರ್ ಕೌನ್ಸಿಲ್ಲು, ಅದರ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರಿಕೊಳ್ಳುವುದಕ್ಕಾಗಿ ಸಲ್ಲಿಸಲಾದ ಯಾರೇ ವ್ಯಕ್ತಿಯ ಅರ್ಜಿಯನ್ನು ನಿರಾಕರಿಸಿದಲ್ಲಿ, ಯಾವುದೇ ಇತರ ರಾಜ್ಯ ಬಾರ್ ಕೌನ್ಸಿಲ್ಲು, ತನ್ನ ಪಟ್ಟಿಯಲ್ಲಿ ಅಂಥ ವ್ಯಕ್ತಿಯನ್ನು ಒಬ್ಬ ನ್ಯಾಯವಾದಿಯಾಗಿ ಸೇರಿಸಿಕೊಳ್ಳುವುದಕ್ಕಾಗಿ ಸಲ್ಲಿಸಲಾದ ಅರ್ಜಿಯನ್ನು, ಆ ಅರ್ಜಿಯನ್ನು ನಿರಾಕರಿಸಿದ ರಾಜ್ಯ ಬಾರ್ ಕೌನ್ಸಿಲ್‌ನಿಂದ ಮತ್ತು ಭಾರತದ ಬಾರ್ ಕೌನ್ಸಿಲ್‌ನಿಂದ ಲಿಖಿತ ಸಮ್ಮತಿಯನ್ನು ಮುಂಚಿತವಾಗಿ ಪಡೆದ ಹೊರತು ಸ್ವೀಕರಿಸತಕ್ಕುದಲ್ಲ.

**28. ನಿಯಮ ರಚನಾಧಿಕಾರ.–** (1) ಒಂದು ರಾಜ್ಯ ಬಾರ್ ಕೌನ್ಸಿಲ್ಲು ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಕೆಳಕಂಡವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು:–

(ಎ) ಒಬ್ಬ ನ್ಯಾಯವಾದಿಯು, 20ನೇ ಪ್ರಕರಣದ ಮೇರೆಗೆ ಒಂದು ರಾಜ್ಯ ಬಾರ್ ಕೌನ್ಸಿಲ್ಲಿನ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಿಕೊಳ್ಳುವ ಬಗೆಗಿನ ತನ್ನ ಉದ್ದೇಶವನ್ನು ಯಾವ ಕಾಲ ಮಿತಿಯೊಳಗೆ ಮತ್ತು ಯಾವ ನಮೂನೆಯಲ್ಲಿ ವ್ಯಕ್ತಪಡಿಸತಕ್ಕುದೋ ಆ ಕಾಲಮಿತಿ ಮತ್ತು ನಮೂನೆ;

(ಬಿ) [ * * * ]

(ಸಿ) ಒಂದು ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಬಾರ್ ಕೌನ್ಸಿಲ್‌ಗೆ ಅರ್ಜಿಯನ್ನು ಸಲ್ಲಿಸತಕ್ಕ ನಮೂನೆ ಮತ್ತು ಅಂಥ ಅರ್ಜಿಯನ್ನು ಬಾರ್ ಕೌನ್ಸಿಲ್ಲಿನ ಸೇರ್ಪಡೆ ಸಮಿತಿಯು ವಿಲೇ ಮಾಡತಕ್ಕ ರೀತಿ;

(ಡಿ) ಯಾವ ಷರತ್ತುಗಳಿಗೊಳಪಟ್ಟು ಒಬ್ಬ ವ್ಯಕ್ತಿಯು ಯಾವುದೇ ಅಂಥ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರಿಕೊಳ್ಳಬಹುದೋ ಅಂಥ ಷರತ್ತುಗಳು;

(ಇ) ಸೇರ್ಪಡೆ ಫೀಜನ್ನು ಸಂದಾಯ ಮಾಡಬಹುದಾದಂಥ ಕಂತುಗಳು.

(3) ಈ ಅಧ್ಯಾಯದ ಮೇರೆಗೆ ಮಾಡಲಾದ ನಿಯಮಗಳನ್ನು ಭಾರತದ ಬಾರ್ ಕೌನ್ಸಿಲ್ಲು ಅನುಮೋದಿಸಿದ ಹೊರತು, ಅವು ಪರಿಣಾಮಕಾರಿಯಾಗತಕ್ಕುದಲ್ಲ.

## ಅಧ್ಯಾಯ – IV
## ವೃತ್ತಿಯನ್ನು ನಡೆಸಲು ಹಕ್ಕು

**29. ನ್ಯಾಯವಾದಿಗಳು ಮಾತ್ರ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ಮನ್ನಣೆ ಪಡೆದ ವ್ಯಕ್ತಿಗಳ ವರ್ಗವಾಗಿರುವುದು.–** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಗೊತ್ತುಪಡಿಸಿದ ದಿನದಿಂದ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ವ್ಯಕ್ತಿಗಳ ಒಂದೇ ಒಂದು ವರ್ಗ ಎಂದರೆ, ನ್ಯಾಯವಾದಿಗಳ ವರ್ಗ ಆಗಿರತಕ್ಕುದು.

**30. ವೃತ್ತಿ ನಡೆಸಲು ನ್ಯಾಯವಾದಿಗಳ ಹಕ್ಕು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಾಜ್ಯ ಪಟ್ಟಿಯಲ್ಲಿ ಹೆಸರು ಸೇರಿಸಲಾದ ಪ್ರತಿಯೊಬ್ಬ ನ್ಯಾಯವಾದಿಯು, ಈ ಅಧಿನಿಯಮವು ವ್ಯಾಪ್ತವಾಗುವಂಥ ಎಲ್ಲಾ ರಾಜ್ಯ ಕ್ಷೇತ್ರಗಳಾದ್ಯಂತ,–

(i) ಸರ್ವೋಚ್ಚ ನ್ಯಾಯಾಲಯವೂ ಸೇರಿದಂತೆ ಎಲ್ಲ ನ್ಯಾಯಾಲಯಗಳಲ್ಲಿ;

(ii) ಯಾವುದೇ ನ್ಯಾಯಾಧಿಕರಣ ಅಥವಾ ಸಾಕ್ಷ್ಯವನ್ನು ತೆಗೆದುಕೊಳ್ಳಲು ಕಾನೂನು ಸಮ್ಮತವಾಗಿ ಅಧಿಕೃತನಾದ ವ್ಯಕ್ತಿಯ ಮುಂದೆ; ಮತ್ತು

(iii) ಯಾರ ಸಮ್ಮುಖದಲ್ಲಿ ಅಂಥ ನ್ಯಾಯವಾದಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗಿರುವನೋ ಆ ಯಾವುದೇ ಇತರ ಪ್ರಾಧಿಕಾರದ ಅಥವಾ ವ್ಯಕ್ತಿಯ ಮುಂದೆ

– ವೃತ್ತಿ ನಡೆಸುವ ಹಕ್ಕಿಗೆ ಅರ್ಹನಾಗತಕ್ಕುದು.

**31.** [ * * * ]

**32. ನಿರ್ದಿಷ್ಟ ಪ್ರಕರಣಗಳಲ್ಲಿ ಹಾಜರಾತಿಗೆ ಅನುಮತಿ ನೀಡಲು ನ್ಯಾಯಾಲಯದ ಅಧಿಕಾರ.–** ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ನ್ಯಾಯಾಲಯವು, ಪ್ರಾಧಿಕಾರವು ಅಥವಾ ವ್ಯಕ್ತಿಯು, ಯಾವುದೇ ನಿರ್ದಿಷ್ಟ ಪ್ರಕರಣಗಳಲ್ಲಿ ತನ್ನ ಮುಂದೆ ಹಾಜರಾಗಲು ಈ ಅಧಿನಿಯಮದ ಮೇರೆಗೆ ನ್ಯಾಯವಾದಿಯಾಗಿ ಸೇರ್ಪಡೆಯಾಗಿಲ್ಲದ ಯಾರೇ ವ್ಯಕ್ತಿಗೆ ಅನುಮತಿ ನೀಡಬಹುದು.

**33. ನ್ಯಾಯವಾದಿಗಳು ಮಾತ್ರ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳವರಾಗಿರುವುದು.–** ಈ ಅಧಿನಿಯಮದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿರದ ಹೊರತು, ಯಾರೇ ವ್ಯಕ್ತಿಯು, ಗೊತ್ತುಪಡಿಸಲಾದ ದಿನದಂದು ಅಥವಾ ಆ ತರುವಾಯ, ಈ ಅಧಿನಿಯಮದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾದ ಹೊರತು ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗಿರತಕ್ಕುದಲ್ಲ.

**34. ಉಚ್ಚ ನ್ಯಾಯಾಲಯಗಳ ನಿಯಮ ರಚನಾಧಿಕಾರ.–** (1) ಉಚ್ಚ ನ್ಯಾಯಾಲಯವು, ಉಚ್ಚ ನ್ಯಾಯಾಲಯದಲ್ಲಿ ಮತ್ತು ಅದಕ್ಕೆ ಅಧೀನವಾದ ನ್ಯಾಯಾಲಯಗಳಲ್ಲಿ ಕಾನೂನು ವೃತ್ತಿಯನ್ನು ನಡೆಸಲು ಒಬ್ಬ ನ್ಯಾಯವಾದಿಗೆ ಯಾವ ಷರತ್ತುಗಳಿಗೊಳಪಟ್ಟು ಅನುಮತಿ ನೀಡತಕ್ಕುದೋ ಆ ಷರತ್ತುಗಳನ್ನು ಗೊತ್ತುಪಡಿಸುವ ನಿಯಮಗಳನ್ನು ರಚಿಸಬಹುದು.

(1ಎ) ಉಚ್ಚ ನ್ಯಾಯಾಲಯವು, ಉಚ್ಚ ನ್ಯಾಯಾಲಯದ ಅಥವಾ ಅದಕ್ಕೆ ಅಧೀನವಾದ ಯಾವುದೇ ನ್ಯಾಯಾಲಯದ ಎಲ್ಲಾ ವ್ಯವಹರಣೆಗಳ ಬಗ್ಗೆ ಎದುರು ಪಕ್ಷದ ನ್ಯಾಯವಾದಿಯ ಫೀಜುಗಳ ಸಂಬಂಧದಲ್ಲಿ ಯಾರೇ ಪಕ್ಷಕಾರನು ವೆಚ್ಚಗಳೆಂದು ಸಂದಾಯ ಮಾಡಬೇಕಾದ ಫೀಜುಗಳನ್ನು ತೆರಿಗೆ ವಿಧಿಸುವ ಮೂಲಕ ಅಥವಾ ಇತರ ರೀತಿಯಲ್ಲಿ ನಿಗದಿಪಡಿಸುವ ಮತ್ತು ವಿನಿಯಮಿಸುವ ಸಲುವಾಗಿ ನಿಯಮಗಳನ್ನು ರಚಿಸತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗೆ ಬಾಧಕವಾಗದಂತೆ, ಕಲ್ಕತ್ತದಲ್ಲಿರುವ ಉಚ್ಚ ನ್ಯಾಯಾಲಯವು, ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರಿಕೊಳ್ಳುವ ಉದ್ದೇಶಕ್ಕಾಗಿ 58ಎಜಿ ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು ಉತ್ತೀರ್ಣವಾಗಬೇಕಾದ ಕಟ್ಟಳೆಗೊಳಪಟ್ಟ ಅಭ್ಯಾಸಿಗಳ ಇಂಟರ್ ಮೀಡಿಯೇಟ್ ಮತ್ತು ಅಂತಿಮ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಯಾವುದೇ ವಿಷಯದ ಬಗ್ಗೆ ಅವಕಾಶ ಮಾಡಿಕೊಡುವ ನಿಯಮಗಳನ್ನು ರಚಿಸಬಹುದು.

## ಅಧ್ಯಾಯ - V

## ನ್ಯಾಯವಾದಿಗಳ ನಡತೆ

**35. ದುರ್ನಡತೆಗಾಗಿ ನ್ಯಾಯವಾದಿಗಳಿಗೆ ದಂಡನೆ.–** (1) ರಾಜ್ಯ ಬಾರ್ ಕೌನ್ಸಿಲ್ಲು ಒಂದು ಫಿರ್ಯಾದನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ, ತನ್ನ ನ್ಯಾಯವಾದಿಗಳ ಪಟ್ಟಿಯಲ್ಲಿರುವ ಯಾರೇ ನ್ಯಾಯವಾದಿಯು ವೃತ್ತೀಯ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನಾಗಿದ್ದಾನೆಂದು ನಂಬಲು ಅದಕ್ಕೆ ಕಾರಣವಿದ್ದರೆ ಅದು, ಆ ಪ್ರಕರಣವನ್ನು ಶಿಸ್ತು ಸಮಿತಿಗೆ ವಿಲೆಗಾಗಿ ಕಳುಹಿಸಿಕೊಡತಕ್ಕುದು.

(1ಎ) ರಾಜ್ಯ ಬಾರ್ ಕೌನ್ಸಿಲ್ಲು ಅದರ ಶಿಸ್ತು ಸಮಿತಿಯ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಯನ್ನು ತಾನಾಗಿಯೇ ಆಗಲಿ ಅಥವಾ ಆಸಕ್ತ ವ್ಯಕ್ತಿಯು ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲಾಗಲೀ ಹಿಂತೆಗೆದುಕೊಳ್ಳಬಹುದು ಮತ್ತು ಆ ರಾಜ್ಯ ಬಾರ್ ಕೌನ್ಸಿಲ್ಲಿನ ಇತರ ಯಾವುದೇ ಶಿಸ್ತು ಸಮಿತಿಯು ವಿಚಾರಣೆಯನ್ನು ನಡೆಸಬೇಕೆಂದು ನಿರ್ದೇಶಿಸಬಹುದು.

(2) ರಾಜ್ಯ ಬಾರ್ ಕೌನ್ಸಿಲ್ಲಿನ ಶಿಸ್ತು ಸಮಿತಿಯು, ಆ ಪ್ರಕರಣದ ಸುನಾವಣೆಗಾಗಿ ಒಂದು ದಿನಾಂಕವನ್ನು ಗೊತ್ತುಪಡಿಸತಕ್ಕುದು ಮತ್ತು ಆ ಸಂಬಂಧವಾದ ನೋಟೀಸನ್ನು ಸಂಬಂಧಿಸಿದ ನ್ಯಾಯವಾದಿಗೆ ಮತ್ತು ರಾಜ್ಯದ ಅಡ್ವೋಕೇಟ್ ಜನರಲ್‌ಗೆ ಕಳಿಸುವ ವ್ಯವಸ್ಥೆ ಮಾಡತಕ್ಕುದು.

(3) ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಸಂಬಂಧಿಸಿದ ನ್ಯಾಯವಾದಿಗೆ ಮತ್ತು ಅಡ್ವೋಕೇಟ್ ಜನರಲ್‌ಗೆ ಕೊಟ್ಟ ತರುವಾಯ, ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ಈ ಕೆಳಕಂಡ ಆದೇಶಗಳಲ್ಲಿ ಯಾವುದೇ ಆದೇಶವನ್ನು ಮಾಡಬಹುದು, ಎಂದರೆ:–

(ಎ) ಫಿರ್ಯಾದನ್ನು ವಜಾ ಮಾಡಬಹುದು, ಅಥವಾ ವ್ಯವಹರಣೆಗಳನ್ನು ರಾಜ್ಯ ಬಾರ್ ಕೌನ್ಸಿಲಿನ ಸೂಚನೆಯ ಮೇರೆಗೆ ಪ್ರಾರಂಭಿಸಿರುವಲ್ಲಿ, ಆ ವ್ಯವಹರಣೆಗಳನ್ನು ಫೈಲು ಮಾಡಬೇಕೆಂದು ನಿರ್ದೇಶಿಸಬಹುದು;

(ಬಿ) ನ್ಯಾಯವಾದಿಗೆ ವಾಗ್ದಂಡನೆ ಮಾಡಬಹುದು;

(ಸಿ) ಅದು ಯುಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ ಕಾನೂನು ವೃತ್ತಿಯನ್ನು ನಡೆಸದಂತೆ ಆ ನ್ಯಾಯವಾದಿಯನ್ನು ಅಮಾನತ್ತುಗೊಳಿಸಬಹುದು;

(ಡಿ) ಆ ನ್ಯಾಯವಾದಿಯ ಹೆಸರನ್ನು ರಾಜ್ಯ ನ್ಯಾಯವಾದಿಗಳ ಪಟ್ಟಿಯಿಂದ ತೆಗೆದುಹಾಕಬಹುದು.

(4) (3)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಒಬ್ಬ ನ್ಯಾಯವಾದಿಯನ್ನು ಕಾನೂನು ವೃತ್ತಿಯನ್ನು ನಡೆಸದಂತೆ ಅಮಾನತ್ತುಗೊಳಿಸಿದಲ್ಲಿ, ಆ ಅಮಾನತ್ತಿನ ಅವಧಿಯಲ್ಲಿ ಭಾರತದಲ್ಲಿ ಯಾವುದೇ ನ್ಯಾಯಾಲಯದ ಮುಂದೆ ಅಥವಾ ಯಾವುದೇ ಪ್ರಾಧಿಕಾರದ ಅಥವಾ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸದಂತೆ ಅವನನ್ನು ಅನರ್ಹಗೊಳಿಸತಕ್ಕುದು.

(5) (2)ನೇ ಉಪಪ್ರಕರಣದ ಮೇರೆಗೆ ಅಡ್ವೋಕೇಟ್ ಜನರಲ್‌ಗೆ ಯಾವುದೇ ನೋಟೀಸನ್ನು ನೀಡಿರುವಲ್ಲಿ, ಅಡ್ವೋಕೇಟ್ ಜನರಲ್ಲನು ಖುದ್ದಾಗಿಯಾಗಲೀ ಅಥವಾ ಅವನ ಪರವಾಗಿ ಹಾಜರಾಗುವ ಯಾರೇ ನ್ಯಾಯವಾದಿಯ ಮೂಲಕವಾಗಲೀ ರಾಜ್ಯ ಬಾರ್ ಕೌನ್ಸಿಲ್ಲಿನ ಶಿಸ್ತು ಸಮಿತಿಯ ಮುಂದೆ ಹಾಜರಾಗಬಹುದು.

ವಿವರಣೆ:– ಈ ಪ್ರಕರಣದಲ್ಲಿ (ಪ್ರಕರಣ 37 ಮತ್ತು ಪ್ರಕರಣ 38 ರಲ್ಲಿ) " ಅಡ್ವೋಕೇಟ್ – ಜನರಲ್ " ಮತ್ತು " ರಾಜ್ಯದ ಅಡ್ವೋಕೇಟ್ – ಜನರಲ್ " ಎಂಬ ಪದಗಳಿಗೆ ದೆಹಲಿಯ ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ, ಭಾರತದ ಅಡಿಷನಲ್ ಸಾಲಿಸಿಟರ್ ಜನರಲ್ ಎಂದು ಅರ್ಥ.

**36. ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಅಧಿಕಾರಗಳು.–** (1) ಭಾರತದ ಬಾರ್ ಕೌನ್ಸಿಲ್ಲು ಒಂದು ಫಿರ್ಯಾದನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಯಾವುದೇ ರಾಜ್ಯ ಪಟ್ಟಿಯಲ್ಲಿ ಹೆಸರು ಸೇರಿಸಲಾದ ಯಾರೇ ನ್ಯಾಯವಾದಿಯು ವೃತ್ತಿ ಸಂಬಂಧವಾದ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನಾಗಿದ್ದಾನೆಂದು ನಂಬಲು ಕಾರಣವಿದ್ದರೆ, ಅದು ಆ ಪ್ರಕರಣವನ್ನು ವಿಲೆಗಾಗಿ ತನ್ನ ಶಿಸ್ತು ಸಮಿತಿಗೆ ಕಳುಹಿಸತಕ್ಕುದು.

(2) ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ಭಾರತದ ಬಾರ್ ಕೌನ್ಸಿಲ್ಲಿನ ಶಿಸ್ತು ಸಮಿತಿಯು, ತಾನಾಗಿಯೇ ಆಗಲಿ ಅಥವಾ ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನ ವರದಿಯ ಮೇಲೆ ಆಗಲಿ ಅಥವಾ ಯಾರೇ ಆಸಕ್ತ ವ್ಯಕ್ತಿಯು ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲಾಗಲೀ ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಮುಂದೆ ಇತ್ಯರ್ಥದಲ್ಲಿರುವ ಯಾರೇ ನ್ಯಾಯವಾದಿಯ ವಿರುದ್ಧದ ಶಿಸ್ತುಕ್ರಮಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಗಳನ್ನು ತನ್ನ ಮುಂದೆ ವಿಚಾರಣೆ ನಡೆಸುವುದಕ್ಕಾಗಿ ಅಲ್ಲಿಂದ ತರಿಸಿಕೊಳ್ಳಬಹುದು ಹಾಗೂ ಅದನ್ನು ವಿಲೆ ಮಾಡಬಹುದು.

(3) ಈ ಪ್ರಕರಣದ ಮೇರೆಗೆ ಭಾರತದ ಬಾರ್ ಕೌನ್ಸಿಲ್ಲಿನ ಶಿಸ್ತು ಸಮಿತಿಯು ಯಾವುದೇ ಪ್ರಕರಣವನ್ನು ವಿಲೆ ಮಾಡಿರುವಲ್ಲಿ 35ನೇ ಪ್ರಕರಣದಲ್ಲಿ ಗೊತ್ತುಪಡಿಸಿದ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಅನುಸರಿಸತಕ್ಕುದು ಮತ್ತು ಆ ಪ್ರಕರಣದಲ್ಲಿ ಅಡ್ವೋಕೇಟ್ ಜನರಲ್‌ಗೆ ಸಂಬಂಧಿಸಿ ಮಾಡಲಾದ ಉಲ್ಲೇಖಗಳನ್ನು ಭಾರತದ ಅಟಾರ್ನಿ ಜನರಲ್‌ಗೆ ಮಾಡಲಾದ ಉಲ್ಲೇಖಗಳು ಎಂಬುದಾಗಿ ಅರ್ಥೈಸತಕ್ಕುದು.

(4) ಈ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಗಳನ್ನು ವಿಲೆ ಮಾಡುವಾಗ, ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, 35ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಮಾಡಲು ಸಾಧ್ಯವಿರುವಂಥ ಯಾವುದೇ ಆದೇಶವನ್ನು ಮಾಡಬಹುದು, ಮತ್ತು ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಮುಂದೆ ವಿಚಾರಣೆಗಾಗಿ ಯಾವುದೇ ವ್ಯವಹರಣೆಯನ್ನು ತರಿಸಿಕೊಂಡಿರುವಲ್ಲಿ ರಾಜ್ಯ ಬಾರ್ ಕೌನ್ಸಿಲ್ಲು, ಅಂಥ ಯಾವುದೇ ಆದೇಶವನ್ನು ಜಾರಿಗೊಳಿಸತಕ್ಕುದು.

**36ಎ. ಶಿಸ್ತು ಸಮಿತಿಗಳ ರಚನೆಯಲ್ಲಿ ಬದಲಾವಣೆಗಳು.–** 35ನೇ ಪ್ರಕರಣದ ಅಥವಾ 36ನೇ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ, ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಅಥವಾ ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದು ನಿಂತು ಹೋದಾಗಲೆಲ್ಲಾ, ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮತ್ತು ಅದನ್ನು ಚಲಾಯಿಸುವ ಮತ್ತೊಂದು ಸಮಿತಿಯು ಉತ್ತರಾಧಿಕಾರಿಯಾಗಿ ಬಂದಿರುವಲ್ಲಿ, ಹಾಗೆ ಉತ್ತರಾಧಿಕಾರಿಯಾಗಿ ಬಂದಿರುವ ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ಅಥವಾ ಸಂದರ್ಭಾನುಸಾರ ಭಾರತದ ಬಾರ್ ಕೌನ್ಸಿಲಿನ ಶಿಸ್ತು ಸಮಿತಿಯು, ಅದರ ಪೂರ್ವಾಧಿಕಾರಿ ಸಮಿತಿಯು ವ್ಯವಹರಣೆಗಳನ್ನು ಯಾವ ಹಂತದಲ್ಲಿ ಹಾಗೆ ಬಿಟ್ಟಿತ್ತೋ ಆ ಹಂತದಿಂದ ಅವುಗಳನ್ನು ಮುಂದುವರಿಸಬಹುದು.

**36ಬಿ. ಶಿಸ್ತು ವ್ಯವಹರಣೆಗಳ ವಿಲೆ.–** (1) ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, 35ನೇ ಪ್ರಕರಣದ ಮೇರೆಗೆ ತಾನು ಸ್ವೀಕರಿಸಿದ ಫಿರ್ಯಾದನ್ನು ತ್ವರಿತವಾಗಿ ವಿಲೆ ಮಾಡತಕ್ಕುದು ಮತ್ತು ಪ್ರತಿಯೊಂದು ಪ್ರಕರಣದಲ್ಲಿನ ವ್ಯವಹರಣೆಗಳನ್ನು, ಫಿರ್ಯಾದನ್ನು ಸ್ವೀಕರಿಸಿದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ರಾಜ್ಯ ಬಾರ್ ಕೌನ್ಸಿಲ್‌ನ ಸೂಚನೆ ಮೇರೆಗೆ ವ್ಯವಹರಣೆಗಳನ್ನು ಪ್ರಾರಂಭಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮುಕ್ತಾಯಗೊಳಿಸತಕ್ಕುದು, ಹಾಗೆ ಮಾಡಲು ತಪ್ಪಿದರೆ, ಅಂಥ ವ್ಯವಹರಣೆಗಳು ಭಾರತದ ಬಾರ್ ಕೌನ್ಸಿಲ್‌ಗೆ ವರ್ಗಾವಣೆಯಾಗತಕ್ಕುದು. ಮತ್ತು ಆ ಬಾರ್

ಕೌನ್ಸಿಲ್ಲು, ಆ ವ್ಯವಹರಣೆಗಳು 36ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿಚಾರಣೆಗಾಗಿ ಹಿಂದಕ್ಕೆ ತರಿಸಿಕೊಳ್ಳಲಾದ ವ್ಯವಹರಣೆಗಳಾಗಿದ್ದರೆ ಹೇಗೋ ಹಾಗೆ ಅವುಗಳನ್ನು ವಿಲೆ ಮಾಡತಕ್ಕುದು.

(2)(1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1973 (1973ರ 60) ಇದರ ಪ್ರಾರಂಭದಂದು, ಒಬ್ಬ ನ್ಯಾಯವಾದಿಯ ವಿರುದ್ಧ ಯಾವುದೇ ಶಿಸ್ತು ವಿಷಯದ ಸಂಬಂಧದಲ್ಲಿ ಯಾವುವೇ ವ್ಯವಹರಣೆಗಳು ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಮುಂದೆ ಇತ್ಯರ್ಥದಲ್ಲಿರುವಲ್ಲಿ, ರಾಜ್ಯ ಬಾರ್ ಕೌನ್ಸಿಲ್‌ನ ಆ ಶಿಸ್ತು ಸಮಿತಿಯು, ಅದನ್ನು ಅಂಥ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಅಥವಾ ಫಿರ್ಯಾದನ್ನು ಸ್ವೀಕರಿಸಿದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ರಾಜ್ಯ ಬಾರ್ ಕೌನ್ಸಿಲ್‌ನ ಸೂಚನೆ ಮೇರೆಗೆ ವ್ಯವಹರಣೆಗಳ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ, ಇವೆರಡರಲ್ಲಿ ಯಾವುದು ತರುವಾಯದ್ದೋ, ಆ ಅವಧಿಯೊಳಗೆ ವಿಲೆ ಮಾಡತಕ್ಕುದು, ಹಾಗೆ ಮಾಡಲು ತಪ್ಪಿದರೆ ಅಂಥ ವ್ಯವಹರಣೆಗಳು (1)ನೇ ಉಪಪ್ರಕರಣದ ಮೇರೆಗೆ ವಿಲೇಗಾಗಿ ಭಾರತದ ಬಾರ್ ಕೌನ್ಸಿಲ್‌ಗೆ ವರ್ಗಾವಣೆಯಾಗತಕ್ಕುದು.

**37. ಭಾರತದ ಬಾರ್ ಕೌನ್ಸಿಲ್‌ಗೆ ಅಪೀಲು ಸಲ್ಲಿಸುವುದು.–** (1) 35ನೇ ಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಥವಾ ರಾಜ್ಯದ ಅಡ್ವೋಕೇಟ್ ಜನರಲ್‌ನ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಭಾರತದ ಬಾರ್ ಕೌನ್ಸಿಲ್‌ಗೆ ಅಪೀಲನ್ನು ಸಲ್ಲಿಸಬಹುದು.

(2) ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಅಂಥ ಪ್ರತಿಯೊಂದು ಅಪೀಲನ್ನು ಸುನಾವಣೆ ಮಾಡತಕ್ಕುದು ಮತ್ತು ಅದು ಆ ಅಪೀಲಿನ ಮೇಲೆ ಆ ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ನೀಡಿದ ದಂಡನೆಯನ್ನು ವ್ಯತ್ಯಸ್ತಗೊಳಿಸುವ ಆದೇಶವೂ ಸೇರಿದಂತೆ ತಾನು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು:

ಪರಂತು, ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಆದೇಶದಿಂದ ಬಾಧಿತನಾದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಅವನಿಗೆ ಪ್ರತಿಕೂಲವಾಗುವ ಹಾಗೆ ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಆ ಯಾವುದೇ ಆದೇಶವನ್ನು ವ್ಯತ್ಯಸ್ತಗೊಳಿಸತಕ್ಕುದಲ್ಲ.

**38. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವುದು.–** 36ನೇ ಪ್ರಕರಣದ ಅಥವಾ 37ನೇ ಪ್ರಕರಣದ ಮೇರೆಗೆ, ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಥವಾ ಭಾರತದ ಅಟಾರ್ನಿ ಜನರಲ್ ಅಥವಾ ಸಂದರ್ಭಾನುಸಾರ ಸಂಬಂಧಪಟ್ಟ ರಾಜ್ಯದ ಅಡ್ವೋಕೇಟ್ ಜನರಲ್ ಅವನಿಗೆ ಆ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಸರ್ವೋಚ್ಚ ನ್ಯಾಯಾಲಯವು ಆ ಅಪೀಲಿನ ಮೇಲೆ ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ನೀಡಿದ ದಂಡನೆಯನ್ನು ವ್ಯತ್ಯಸ್ತಗೊಳಿಸುವ ಆದೇಶವೂ ಸೇರಿದಂತೆ ತಾನು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು:

ಪರಂತು, ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಆದೇಶದಿಂದ ಬಾಧಿತನಾದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಅವನಿಗೆ ಪ್ರತಿಕೂಲವಾಗುವ ಹಾಗೆ ಸರ್ವೋಚ್ಚ ನ್ಯಾಯಾಲಯವು ಆ ಯಾವುದೇ ಆದೇಶವನ್ನು ವ್ಯತ್ಯಸ್ತಗೊಳಿಸತಕ್ಕುದಲ್ಲ.

**39. ಕಾಲ ಪರಿಮಿತಿ ಅಧಿನಿಯಮ, 1963 (1963ರ 36) ರ 5 ಮತ್ತು 12 ಈ ಪ್ರಕರಣಗಳ ಅನ್ವಯ.–** ಕಾಲ ಪರಿಮಿತಿ ಅಧಿನಿಯಮ, 1963 (1963ರ 36)ರ 5 ಮತ್ತು 12 ಈ ಪ್ರಕರಣಗಳ ಉಪಬಂಧಗಳು, 37ನೆಯ ಮತ್ತು 38ನೇ ಪ್ರಕರಣಗಳ ಮೇರೆಗಿನ ಅಪೀಲುಗಳಿಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯಿಸತಕ್ಕುದು.

**40. ಆದೇಶಕ್ಕೆ ತಡೆ.–** (1) 37 ಅಥವಾ 38ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಒಂದು ಅಪೀಲು, ಯಾವ ಆದೇಶದ ವಿರುದ್ಧ ಅದನ್ನು ಸಲ್ಲಿಸಲಾಗಿದೆಯೋ, ಆ ಆದೇಶಕ್ಕೆ ತಡೆಯಾಗಿ ಪ್ರವರ್ತಿಸತಕ್ಕುದಲ್ಲ. ಆದರೆ, ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಅಥವಾ ಸಂದರ್ಭಾನುಸಾರ ಸರ್ವೋಚ್ಚ ನ್ಯಾಯಾಲಯವು, ಸಾಕಷ್ಟು ಕಾರಣಕ್ಕಾಗಿ, ತಾನು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಆದೇಶಕ್ಕೆ ತಡೆಯನ್ನು ನಿರ್ದೇಶಿಸಬಹುದು.

(2) ಒಂದು ಆದೇಶದ ವಿರುದ್ಧ ಅಪೀಲು ಸಲ್ಲಿಸಲು 37 ಅಥವಾ 38ನೇ ಪ್ರಕರಣದ ಮೇರೆಗೆ ಅನುಮತಿಸಲಾದ ಸಮಯವು ಮುಗಿಯುವುದಕ್ಕೆ ಮುಂಚೆ ಆ ಆದೇಶಕ್ಕೆ ತಡೆ ಕೋರಿ ಅರ್ಜಿಯನ್ನು ಸಲ್ಲಿಸಿರುವಲ್ಲಿ ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ಅಥವಾ ಸಂದರ್ಭಾನುಸಾರ ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ಸಾಕಷ್ಟು ಕಾರಣಕ್ಕಾಗಿ, ತಾನು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಆದೇಶದ ತಡೆಯನ್ನು ನಿರ್ದೇಶಿಸಬಹುದು.

**41. ನ್ಯಾಯವಾದಿಗಳ ಪಟ್ಟಿಯಲ್ಲಿ ವ್ಯತ್ಯಾಸಗಳನ್ನು ಮಾಡುವುದು.–** (1) ಈ ಅಧ್ಯಾಯದ ಮೇರೆಗೆ ಒಬ್ಬ ನ್ಯಾಯವಾದಿಗೆ ವಾಗ್ದಂಡನೆ ನೀಡುವ ಅಥವಾ ಅವನನ್ನು ಅಮಾನತ್ತುಗೊಳಿಸುವ ಆದೇಶವನ್ನು ಮಾಡಿರುವಲ್ಲಿ, ಆ ದಂಡನೆಯ ದಾಖಲೆಯನ್ನು ಅವನ ಹೆಸರಿನ ಎದುರು ನಮೂದಿಸತಕ್ಕುದು.

(ಎ) ರಾಜ್ಯದ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ನ್ಯಾಯವಾದಿಯ ಸಂದರ್ಭದಲ್ಲಿ ಆ ಪಟ್ಟಿಯಲ್ಲಿ ನಮೂದಿಸತಕ್ಕುದು.

ಮತ್ತು ನ್ಯಾಯವಾದಿಯು ಕಾನೂನು ವೃತ್ತಿಯನ್ನು ನಡೆಸದಂತೆ ಅವನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು ಮಾಡಿರುವಲ್ಲಿ, ಅವನ ಹೆಸರನ್ನು ರಾಜ್ಯ ಪಟ್ಟಿಯಲ್ಲಿ ಹೊಡೆದು ಹಾಕತಕ್ಕುದು.

[ * * * ]

(3) ಯಾವನೇ ನ್ಯಾಯವಾದಿಯನ್ನು, ಕಾನೂನು ವೃತ್ತಿಯಿಂದ ಅಮಾನತ್ತುಗೊಳಿಸಿರುವಲ್ಲಿ, ಅಥವಾ ತೆಗೆದುಹಾಕಿರುವಲ್ಲಿ, 22ನೇ ಪ್ರಕರಣದ ಮೇರೆಗೆ ಅವನ ಸೇರ್ಪಡೆಯ ಸಂಬಂಧದಲ್ಲಿ ಅವನಿಗೆ ನೀಡಲಾಗಿದ್ದ ಪ್ರಮಾಣ ಪತ್ರವನ್ನು ವಾಪಸ್ಸು ಪಡೆಯತಕ್ಕುದು.

**42. ಶಿಸ್ತು ಸಮಿತಿಯ ಅಧಿಕಾರಗಳು.–** (1) ಒಂದು ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ,–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ಯಾವುವೇ ದಸ್ತಾವೇಜುಗಳನ್ನು ಹುಡುಕಿ ತೆಗೆಯುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಗಳನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನನ್ನು ಹೊರಡಿಸುವುದು;

(ಎಫ್) ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ:

ಪರಂತು, ಅಂಥ ಶಿಸ್ತು ಸಮಿತಿಯು ಈ ಕೆಳಕಂಡವರ ಹಾಜರಾತಿಯನ್ನು ಅಗತ್ಯಪಡಿಸುವ ಅಧಿಕಾರ ಹೊಂದಿರತಕ್ಕುದಲ್ಲ:–

(ಎ) ಉಚ್ಚ ನ್ಯಾಯಾಲಯದ ಪೂರ್ವ ಮಂಜೂರಾತಿಯ ಹೊರತು ಅದಕ್ಕೆ ಅಧೀನವಾಗಿರುವಂಥ ಒಂದು ನ್ಯಾಯಾಲಯದ ಯಾರೇ ಅಧ್ಯಕ್ಷಾಧಿಕಾರಿ;

(ಬಿ) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯ ಹೊರತು ಒಂದು ರೆವಿನ್ಯೂ ನ್ಯಾಯಾಲಯದ ಯಾರೇ ಅಧಿಕಾರಿ.

(2) ಒಂದು ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಮುಂದಿರುವ ಎಲ್ಲಾ ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ (1860ರ 45) 193 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯಲ್ಲಿ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಂದು ಶಿಸ್ತು ಸಮಿತಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 480, 482 ಮತ್ತು 485ನೇ ಪ್ರಕರಣಗಳ ಉದ್ದೇಶಗಳಿಗಾಗಿ ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕುದು.

(3) (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಉದ್ದೇಶಗಳಿಗಾಗಿ, ಶಿಸ್ತು ಸಮಿತಿಯು, ಸಾಕ್ಷಿದಾರನ ಹಾಜರಾತಿಗಾಗಿ ಅಥವಾ ಸಮಿತಿಗೆ ಬೇಕಾಗಿರುವ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ಯಾವುದೇ ಸಮನನ್ನು ಅಥವಾ ಇತರ ಆದೇಶಿಕೆಯನ್ನು ಅಥವಾ ಅದು ಹೊರಡಿಸಬೇಕೆಂದು ಇಚ್ಛಿಸುವ ಯಾವುದೇ ಕಮಿಷನ್ನು ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯ ಕ್ಷೇತ್ರಗಳಲ್ಲಿನ ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಬಹುದು ಮತ್ತು ಆ ಸಿವಿಲ್ ನ್ಯಾಯಾಲಯವು, ಅಂಥ ಆದೇಶಿಕೆಯನ್ನು ಜಾರಿಗೊಳಿಸುವಂತೆ ಅಥವಾ ಸಂದರ್ಭಾನುಸಾರ ಅಂಥ ಕಮಿಷನನ್ನು ಹೊರಡಿಸುವಂತೆ ಮಾಡತಕ್ಕುದು ಮತ್ತು ಅದು ತನ್ನ ಮುಂದೆ ಹಾಜರಾತಿಗಾಗಿ ಅಥವಾ ಹಾಜರುಪಡಿಸುವುದಕ್ಕಾಗಿ ಒಂದು ಆದೇಶಿಕೆಯಾಗಿದ್ದಿದ್ದರೆ ಹೇಗೋ ಹಾಗೆ ಯಾವುದೇ ಅಂಥ ಆದೇಶಿಕೆಯನ್ನು ಜಾರಿಗೊಳಿಸಬಹುದು.

(4) ಶಿಸ್ತು ಸಮಿತಿಯ ಮುಂದಿರುವ ಒಂದು ಪ್ರಕರಣದ ಸುನಾವಣೆಗಾಗಿ ನಿಗದಿಪಡಿಸಲಾದ ದಿನಾಂಕದಂದು ಅದರ ಅಧ್ಯಕ್ಷನು ಅಥವಾ ಯಾವನೇ ಸದಸ್ಯನು ಗೈರು ಹಾಜರಾಗಿದ್ದರೂ, ಶಿಸ್ತು ಸಮಿತಿಯು, ಅದು ಹಾಗೆ ನಿಗದಿಪಡಿಸಲಾದ ದಿನಾಂಕದಂದು ಆ ವ್ಯವಹರಣೆಗಳನ್ನು ನಡೆಸುವುದು ಅಥವಾ ಮುಂದುವರೆಸುವುದು ಯುಕ್ತವೆಂದು ಯೋಚಿಸಿದರೆ, ಮತ್ತು ಯಾವುದೇ ಅಂಥ ವ್ಯವಹರಣೆಗಳು ಹಾಗೂ ಆ ವ್ಯವಹರಣೆಗಳಲ್ಲಿ ಶಿಸ್ತು ಸಮಿತಿಯು ಮಾಡಿದ ಆದೇಶವು, ಯಾವುದೇ ಅಂಥ ದಿನಾಂಕದಂದು ಅದರ ಅಧ್ಯಕ್ಷನ ಅಥವಾ ಸದಸ್ಯನ ಗೈರುಹಾಜರಿಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ:

ಪರಂತು, ಶಿಸ್ತು ಸಮಿತಿಯ ಅಧ್ಯಕ್ಷನು ಮತ್ತು ಇತರ ಸದಸ್ಯ ಹಾಜರಿದ್ದ ಹೊರತು ಯಾವುದೇ ವ್ಯವಹರಣೆಯಲ್ಲಿ 35ನೇ ಪ್ರಕರಣದ 3ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಸ್ವರೂಪದ ಅಂತಿಮ ಆದೇಶಗಳನ್ನು ಮಾಡತಕ್ಕುದಲ್ಲ.

(5) ಶಿಸ್ತು ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರೊಳಗೆ ಬಹುಮತ ಅಭಿಪ್ರಾಯವಿಲ್ಲದಿರುವ ಕಾರಣದಿಂದಾಗಲಿ ಅಥವಾ ಅನ್ಯಥಾ ಆಗಲಿ ಅವರ ಅಭಿಪ್ರಾಯಕ್ಕನುಸಾರವಾಗಿ ಯಾವುವೇ ವ್ಯವಹರಣೆಗಳಲ್ಲಿ 35ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಸ್ವರೂಪದ ಅಂತಿಮ ಆದೇಶಗಳನ್ನು ಮಾಡಲು ಸಾಧ್ಯವಾಗದಿರುವಲ್ಲಿ ಆ ಪ್ರಕರಣದ ಬಗ್ಗೆ ಅವರ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಬಾರ್ ಕೌನ್ಸಿಲ್‌ನ ಅಧ್ಯಕ್ಷನ ಮುಂದೆ ಅಥವಾ ಆ ಬಾರ್ ಕೌನ್ಸಿಲ್‌ನ ಅಧ್ಯಕ್ಷನು ಶಿಸ್ತು ಸಮಿತಿಯ ಅಧ್ಯಕ್ಷನಾಗಿ ಅಥವಾ ಒಬ್ಬ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಆ ಬಾರ್ ಕೌನ್ಸಿಲ್‌ನ ಉಪಾಧ್ಯಕ್ಷನ ಮುಂದೆ ಇಡತಕ್ಕುದು, ಮತ್ತು ಬಾರ್ ಕೌನ್ಸಿಲ್‌ನ ಸದರಿ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನು ತಾನು ಯುಕ್ತವೆಂದು ಯೋಚಿಸಬಹುದಾದಂತೆ ಸುನಾವಣೆ ಮಾಡಿದ ತರುವಾಯ, ತನ್ನ ಅಭಿಪ್ರಾಯವನ್ನು ನೀಡತಕ್ಕುದು ಮತ್ತು ಶಿಸ್ತು ಸಮಿತಿಯ ಅಂತಿಮ ಆದೇಶವು ಅಂಥ ಅಭಿಪ್ರಾಯಕ್ಕನುಸಾರವಾಗಿ ಇರತಕ್ಕುದು.

**42ಎ. ಭಾರತದ ಬಾರ್ ಕೌನ್ಸಿಲ್‌ನ ಮತ್ತು ಇತರ ಸಮಿತಿಗಳ ಅಧಿಕಾರಗಳು.–** 42ನೇ ಪ್ರಕರಣದ ಉಪಬಂಧಗಳು ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಭಾರತದ ಬಾರ್ ಕೌನ್ಸಿಲ್, ಸೇರ್ಪಡೆ ಸಮಿತಿ, ಚುನಾವಣಾ ಸಮಿತಿ, ಕಾನೂನು ನೆರವು ಸಮಿತಿ ಅಥವಾ ಇತರ ಯಾವುದೇ ಸಮಿತಿಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

**43. ಶಿಸ್ತು ಸಮಿತಿಯ ಮುಂದಿರುವ ವ್ಯವಹರಣೆಗಳ ಖರ್ಚು.–** ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ತನ್ನ ಮುಂದಿರುವ ಯಾವುದೇ ವ್ಯವಹರಣೆಯ ಖರ್ಚುಗಳ ಬಗ್ಗೆ ತಾನು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು ಮತ್ತು ಅಂಥ ಯಾವುದೇ ಆದೇಶವು,–

(ಎ) ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಒಂದು ಆದೇಶವಾಗಿರುವಾಗ ಅದು, ಸರ್ವೋಚ್ಚ ನ್ಯಾಯಾಲಯದ;

(ಬಿ) ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯ ಒಂದು ಆದೇಶವಾಗಿರುವಾಗ, ಉಚ್ಚ ನ್ಯಾಯಾಲಯದ

– ಒಂದು ಆದೇಶವಾಗಿದ್ದರೆ ಹೇಗೋ ಹಾಗೆ ಅದನ್ನು ಅಮಲ್ಜಾರಿಗೊಳಿಸತಕ್ಕುದು.

**44. ಶಿಸ್ತು ಸಮಿತಿಯು ಆದೇಶಗಳನ್ನು ಪುನರವಲೋಕಿಸುವುದು.–** ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ತಾನಾಗಿಯೇ ಅಥವಾ ಅನ್ಯಥಾ, ಈ ಅಧ್ಯಾಯದ ಮೇರೆಗೆ ತಾನು ಮಾಡಿದ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಯಾವುದೇ ಆದೇಶವನ್ನು ಪುನರವಲೋಕಿಸಬಹುದು:

ಪರಂತು, ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಪುನರವಲೋಕಿಸಿದಂಥ ಆದೇಶವನ್ನು, ಭಾರತದ ಬಾರ್ ಕೌನ್ಸಿಲ್ಲು ಅನುಮೋದಿಸಿದ ಹೊರತು, ಅದು ಪರಿಣಾಮಕಾರಿಯಾಗತಕ್ಕುದಲ್ಲ.

## ಅಧ್ಯಾಯ – VI
### ಸಂಕೀರ್ಣ

**45. ನ್ಯಾಯಾಲಯಗಳಲ್ಲಿ ಮತ್ತು ಇತರ ಪ್ರಾಧಿಕಾರಗಳ ಮುಂದೆ ಕಾನೂನುಬಾಹಿರವಾಗಿ ಕಾನೂನು ವೃತ್ತಿಯನ್ನು ನಡೆಸುವ ವ್ಯಕ್ತಿಗಳಿಗೆ ದಂಡ.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ವ್ಯಕ್ತಿಯು ಯಾವ ನ್ಯಾಯಾಲಯದಲ್ಲಿ ಅಥವಾ ಯಾವ ಪ್ರಾಧಿಕಾರದ ಅಥವಾ ವ್ಯಕ್ತಿಯ ಮುಂದೆ ಕಾನೂನು ವೃತ್ತಿ ನಡೆಸಲು ಹಕ್ಕುಳ್ಳವನಾಗಿಲ್ಲವೋ ಅಂಥ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಅಥವಾ ವ್ಯಕ್ತಿಯ ಮುಂದೆ ಕಾನೂನು ವೃತ್ತಿ ನಡೆಸಿದರೆ ಅವನು, ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು.

**46.** [ * * * * ]

**46ಎ. ರಾಜ್ಯ ಬಾರ್ ಕೌನ್ಸಿಲ್‌ಗೆ ಆರ್ಥಿಕ ನೆರವು.–** ಯಾವುದೇ ರಾಜ್ಯ ಬಾರ್ ಕೌನ್ಸಿಲ್ ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ನಿಧಿಗಳ ಅಗತ್ಯವಿದೆಯೆಂದು ಭಾರತದ ಬಾರ್ ಕೌನ್ಸಿಲ್‌ಗೆ ಮನವರಿಕೆಯಾದರೆ, ಅದು ಅನುದಾನದ ರೂಪದಲ್ಲಿ ಅಥವಾ ಅನ್ಯಥಾ ಆ ಬಾರ್ ಕೌನ್ಸಿಲ್‌ಗೆ ತಾನು ಯುಕ್ತವೆಂದು ಭಾವಿಸುವಷ್ಟು ಆರ್ಥಿಕ ನೆರವನ್ನು ನೀಡಬಹುದು.

**47. ಪರಸ್ಪರತೆ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಈ ಸಂಬಂಧದಲ್ಲಿ ಅಧಿಸೂಚನೆ ಹೊರಡಿಸಿ ನಿರ್ದಿಷ್ಟಪಡಿಸಿದ ಯಾವುದೇ ದೇಶವು ಕಾನೂನು ವೃತ್ತಿಯನ್ನು ನಡೆಸದಂತೆ ಭಾರತದ ಪ್ರಜೆಗಳನ್ನು ತಡೆಯುವಲ್ಲಿ, ಅಥವಾ ಆ ದೇಶದಲ್ಲಿ ಅನುಚಿತ ತಾರತಮ್ಯಕ್ಕೆ ಅವರನ್ನು ಗುರಿಪಡಿಸುವಲ್ಲಿ, ಅಂಥ ಯಾವುದೇ ದೇಶದ ಪ್ರಜೆಯು, ಭಾರತದಲ್ಲಿ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗತಕ್ಕುದಲ್ಲ.

(2) ಭಾರತದ ನಾಗರಿಕರಲ್ಲದ ಇತರ ವ್ಯಕ್ತಿಗಳು ಪಡೆದಿರುವ ವಿದೇಶಿ ಕಾನೂನು ವಿದ್ಯಾರ್ಹತೆಗಳನ್ನು ಈ ಅಧಿನಿಯಮದ ಮೇರೆಗೆ ನ್ಯಾಯವಾದಿಯಾಗಿ ಸೇರಿಸಿಕೊಳ್ಳುವ ಉದ್ದೇಶಕ್ಕಾಗಿ ಯಾವ ಷರತ್ತುಗಳಿಗೆ ಒಳಪಟ್ಟು ಮನ್ನಣೆ ನೀಡತಕ್ಕುದೋ ಅಂಥ ಷರತ್ತುಗಳು ಯಾವುವಾದರೂ ಇದ್ದರೆ

ಅವುಗಳನ್ನು ಭಾರತದ ಬಾರ್ ಕೌನ್ಸಿಲ್ (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ನಿಯಮಿಸಬಹುದು.

**48. ಕಾನೂನು ವ್ಯವಹರಣೆಗಳಿಂದ ರಕ್ಷಣೆ.–** ಯಾವುದೇ ಬಾರ್ ಕೌನ್ಸಿಲ್ ಅಥವಾ ಅದರ ಯಾವುದೇ ಸಮಿತಿಯು ಅಥವಾ ಬಾರ್ ಕೌನ್ಸಿಲ್ ಅಥವಾ ಅದರ ಯಾವುದೇ ಸಮಿತಿಯ ಸದಸ್ಯನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಅದರ ಅಥವಾ ಅವರ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕುದಲ್ಲ.

**48ಎ. ಪುನರೀಕ್ಷಣೆಯ ಅಧಿಕಾರ.–** (1) ಒಂದು ರಾಜ್ಯ ಬಾರ್ ಕೌನ್ಸಿಲ್ ಅಥವಾ ಅದರ ಸಮಿತಿಯು ವಿಲೇ ಮಾಡಿರುವ ಈ ಅಧಿನಿಯಮದ ಮೇರೆಗಿನ ಯಾವ ವ್ಯವಹರಣೆಯ ವಿರುದ್ಧ ಅಪೀಲಿಗೆ ಅವಕಾಶವಿಲ್ಲವೋ ಆ ಯಾವುದೇ ವ್ಯವಹರಣೆಯ ದಾಖಲೆಯನ್ನು ಭಾರತದ ಬಾರ್ ಕೌನ್ಸಿಲ್, ಅಂಥ ವಿಲೆಯ ಕಾನೂನು ಸಮ್ಮತತೆಯ ಅಥವಾ ಔಚಿತ್ಯದ ಬಗ್ಗೆ ತಾನು ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಸಮಯದಲ್ಲಿ ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ತಾನು ಯುಕ್ತವೆಂದು ಆಲೋಚಿಸಬಹುದಾದಂಥ ಆದೇಶಗಳನ್ನು ಮಾಡಬಹುದು.

(2) ಯಾವನೇ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ಕೊಟ್ಟ ಹೊರತು ಈ ಪ್ರಕರಣದ ಮೇರೆಗೆ ಅವನಿಗೆ ಪ್ರತಿಕೂಲ ಪರಿಣಾಮಗಳನ್ನುಂಟು ಮಾಡುವ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

**48ಎಎ. ಪುನರವಲೋಕನ.–** ಭಾರತದ ಬಾರ್ ಕೌನ್ಸಿಲ್ಲು ಅಥವಾ ಅದರ ಶಿಸ್ತು ಸಮಿತಿಯ ಹೊರತಾಗಿ ಅದರ ಸಮಿತಿಗಳ ಪೈಕಿ ಯಾವುದೇ ಸಮಿತಿಯು ಈ ಅಧಿನಿಯಮದ ಮೇರೆಗೆ ತಾನು ಮಾಡಿದ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ತಾನಾಗಿಯೇ ಅಥವಾ ಅನ್ಯಥಾ ಅದನ್ನು ಪುನರವಲೋಕನ ಮಾಡಬಹುದು.

**48ಬಿ. ನಿರ್ದೇಶನಗಳನ್ನು ನೀಡಲು ಅಧಿಕಾರ.–** (1) ಭಾರತದ ಬಾರ್ ಕೌನ್ಸಿಲ್, ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ನ ಅಥವಾ ಅದರ ಯಾವುದೇ ಸಮಿತಿಯ ಪ್ರಕಾರ್ಯಗಳನ್ನು ಸೂಕ್ತವಾಗಿ ಮತ್ತು ಸಮರ್ಥವಾಗಿ ನಿರ್ವಹಿಸುವುದಕ್ಕಾಗಿ, ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವ ತನ್ನ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಬಾರ್ ಕೌನ್ಸಿಲ್‌ಗೆ ಅಥವಾ ಅದರ ಯಾವುದೇ ಸಮಿತಿಗೆ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ರಾಜ್ಯ ಬಾರ್ ಕೌನ್ಸಿಲ್ ಅಥವಾ ಸಮಿತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕುದು.

(2) ರಾಜ್ಯ ಬಾರ್ ಕೌನ್ಸಿಲ್, ಯಾವುದೇ ಬಗೆಯ ಕಾರಣಕ್ಕಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥವಾಗಿದ್ದಲ್ಲಿ, ಭಾರತದ ಬಾರ್ ಕೌನ್ಸಿಲ್, ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಆ ರಾಜ್ಯದ ಬಾರ್ ಕೌನ್ಸಿಲಿನ ಪದನಿಮಿತ್ತ ಸದಸ್ಯನಿಗೆ ತನಗೆ ಅವಶ್ಯವೆಂದು ಕಂಡುಬರುವಂಥ ನಿರ್ದೇಶನಗಳನ್ನು ನೀಡಬಹುದು, ಮತ್ತು ರಾಜ್ಯ ಬಾರ್ ಕೌನ್ಸಿಲ್ ರಚಿಸಿದ ನಿಯಮಗಳಲ್ಲಿ ಏನೇ ಇದ್ದರೂ ಅಂಥ ನಿರ್ದೇಶನಗಳು ಪರಿಣಾಮಕಾರಿಯಾಗಿರತಕ್ಕುದು.

**49. ನಿಯಮಗಳನ್ನು ರಚಿಸಲು ಭಾರತದ ಬಾರ್ ಕೌನ್ಸಿಲ್‌ನ ಸಾಮಾನ್ಯ ಅಧಿಕಾರ.–** (1) ಭಾರತದ ಬಾರ್ ಕೌನ್ಸಿಲ್ ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು ಮತ್ತು ವಿಶೇಷತಃ ಅಂಥ ನಿಯಮಗಳು ಕೆಳಕಂಡವುಗಳನ್ನು ನಿಯಮಿಸಬಹುದು:–

(ಎ) ಒಬ್ಬ ನ್ಯಾಯವಾದಿಯು, ರಾಜ್ಯ ಬಾರ್ ಕೌನ್ಸಿಲ್‌ಗೆ ನಡೆಯುವ ಚುನಾವಣೆಯಲ್ಲಿ ಯಾವ ಷರತ್ತಿಗೊಳಪಟ್ಟು ಮತ ನೀಡಲು ಹಕ್ಕುಳ್ಳವನಾಗಬಹುದೋ ಅಂಥ ಷರತ್ತುಗಳು ಮತ್ತು ಮತದಾರರ

ಅರ್ಹತೆಗಳು ಅಥವಾ ಅನರ್ಹತೆಗಳು ಮತ್ತು ರಾಜ್ಯ ಬಾರ್ ಕೌನ್ಸಿಲ್ ಮತದಾರರ ಪಟ್ಟಿಯನ್ನು ಯಾವ ರೀತಿಯಲ್ಲಿ ತಯಾರಿಸಬಹುದೋ ಮತ್ತು ಪರಿಷ್ಕರಿಸಬಹುದೋ ಅಂಥ ರೀತಿ;

(ಎಬಿ) ಬಾರ್ ಕೌನ್ಸಿಲ್‌ನ ಸದಸ್ಯತ್ವದ ಅರ್ಹತೆಗಳು ಮತ್ತು ಅನರ್ಹತೆಗಳು;

(ಎಸಿ) 3ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕವನ್ನು ಯಾವ ಅವಧಿಯೊಳಗೆ ಮತ್ತು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಬಹುದೋ ಅಂಥ ಅವಧಿ ಮತ್ತು ರೀತಿ;

(ಎಡಿ) ಒಂದಕ್ಕಿಂತ ಹೆಚ್ಚು ರಾಜ್ಯಗಳ ಪಟ್ಟಿಯಲ್ಲಿ ಯಾವನೇ ನ್ಯಾಯವಾದಿಯ ಹೆಸರು ಸೇರದಂತೆ ಯಾವ ರೀತಿಯಲ್ಲಿ ತಡೆಯಬಹುದೋ ಅಂಥ ರೀತಿ;

(ಎಇ) ನ್ಯಾಯವಾದಿಗಳಲ್ಲಿ ಜ್ಯೇಷ್ಠತೆಯನ್ನು ನಿರ್ಧರಿಸಬಹುದಾದಂಥ ರೀತಿ;

(ಎಎಫ್) ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿಯ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆಯಲು ಅಗತ್ಯವಾದ ಕನಿಷ್ಠ ವಿದ್ಯಾರ್ಹತೆ;

(ಎಜಿ) ನ್ಯಾಯವಾದಿಗಳಾಗಿ ಸೇರ್ಪಡೆಯಾಗಲು ಹಕ್ಕುಳ್ಳವರಾದ ವ್ಯಕ್ತಿಗಳ ವರ್ಗ ಅಥವಾ ಪ್ರವರ್ಗ;

(ಎಎಚ್) ಯಾವ ಷರತ್ತುಗಳಿಗೊಳಪಟ್ಟು, ನ್ಯಾಯವಾದಿಯು ಕಾನೂನು ವೃತ್ತಿಯನ್ನು ನಡೆಸಲು ಹಕ್ಕನ್ನು ಹೊಂದಿರುತ್ತಾನೋ ಅಂಥ ಷರತ್ತುಗಳು ಮತ್ತು ಯಾವ ಸನ್ನಿವೇಶಗಳಲ್ಲಿ ವ್ಯಕ್ತಿಯು ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಕಾನೂನು ವೃತ್ತಿಯನ್ನು ನಡೆಸುತ್ತಿರುವುದಾಗಿ ಭಾವಿಸತಕ್ಕುದೋ ಅಂಥ ಸನ್ನಿವೇಶಗಳು;

(ಬಿ) ಒಂದು ರಾಜ್ಯ ಪಟ್ಟಿಯಿಂದ ಮತ್ತೊಂದು ರಾಜ್ಯ ಪಟ್ಟಿಗೆ ಒಬ್ಬ ನ್ಯಾಯವಾದಿಯ ಹೆಸರನ್ನು ವರ್ಗಾಯಿಸಲು ಸಲ್ಲಿಸತಕ್ಕ ಅರ್ಜಿಯ ನಮೂನೆ;

(ಸಿ)ನ್ಯಾಯವಾದಿಗಳು ಪಾಲಿಸಬೇಕಾದ ವೃತ್ತೀಯ ನಡತೆ ಮತ್ತು ನೀತಿ ನಡಾವಳಿ;

(ಡಿ) ಭಾರತದ ವಿಶ್ವವಿದ್ಯಾನಿಲಯಗಳು ಅನುಸರಿಸಬೇಕಾದ ಕಾನೂನು ಶಿಕ್ಷಣದ ಗುಣಮಟ್ಟ, ಮತ್ತು ಆ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯಗಳ ಪರಿಶೀಲನೆ;

(ಇ) ಈ ಅಧಿನಿಯಮದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಸೇರಿಸಿಕೊಳ್ಳುವ ಉದ್ದೇಶಕ್ಕಾಗಿ ಮಾನ್ಯತೆ ನೀಡತಕ್ಕ, ಭಾರತದ ನಾಗರಿಕರ ಹೊರತಾದ ವ್ಯಕ್ತಿಗಳು ಪಡೆದಿರುವ, ವಿದೇಶಿ ಕಾನೂನು ವಿದ್ಯಾರ್ಹತೆಗಳು;

(ಎಫ್) ರಾಜ್ಯ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು, ಮತ್ತು ತನ್ನ ಶಿಸ್ತು ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ;

(ಜಿ) ಕಾನೂನು ವೃತ್ತಿಯನ್ನು ನಡೆಸುವ ವಿಷಯದಲ್ಲಿ ಜ್ಯೇಷ್ಠ ನ್ಯಾಯವಾದಿಗಳು ಒಳಪಡತಕ್ಕಂಥ ನಿರ್ಬಂಧಗಳು;

(ಜಿಜಿ) ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಮುಂದೆ ಹಾಜರಾಗುವ ನ್ಯಾಯವಾದಿಗಳು ಹವಾಮಾನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಧರಿಸಬೇಕಾದ ಉಡುಪುಗಳ ಅಥವಾ ಮೇಲುಡುಪುಗಳ ನಮೂನೆ;

(ಹೆಚ್) ಈ ಅಧಿನಿಯಮದ ಮೇರೆಗಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ವಿಧಿಸಬಹುದಾದಂಥ ಫೀಜು;

(ಐ) ರಾಜ್ಯ ಬಾರ್ ಕೌನ್ಸಿಲ್‌ಗಳ ಮಾರ್ಗದರ್ಶನಕ್ಕಾಗಿ ಸಾಮಾನ್ಯ ತತ್ವಗಳು ಮತ್ತು ಭಾರತದ ಬಾರ್ ಕೌನ್ಸಿಲ್ ನೀಡಿದ ನಿರ್ದೇಶನಗಳನ್ನು ಅಥವಾ ಮಾಡಿದ ಆದೇಶಗಳನ್ನು ಜಾರಿಗೊಳಿಸಬಹುದಾದಂಥ ರೀತಿ;

(ಜೆ) ನಿಯಮಿಸಬಹುದಾದ ಇತರ ಯಾವುದೇ ವಿಷಯ:

ಪರಂತು, (ಸಿ) ಖಂಡ ಅಥವಾ (ಜಿಜಿ) ಖಂಡಕ್ಕೆ ಸಂಬಂಧಿಸಿದಂತೆ ಮಾಡಲಾದ ಯಾವುವೇ ನಿಯಮಗಳನ್ನು ಭಾರತದ ಮುಖ್ಯ ನ್ಯಾಯಾಧೀಶರು ಅನುಮೋದಿಸಿದ ಹೊರತು ಅವು ಪರಿಣಾಮಕಾರಿಯಾಗತಕ್ಕುದಲ್ಲ:

ಮತ್ತೂ ಪರಂತು (ಇ) ಖಂಡಕ್ಕೆ ಸಂಬಂಧಿಸಿದಂತೆ ಮಾಡಲಾದ ನಿಯಮಗಳನ್ನು ಕೇಂದ್ರ ಸರ್ಕಾರವು ಅನುಮೋದಿಸಿದ ಹೊರತು, ಅವು ಪರಿಣಾಮಕಾರಿಯಾಗತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೊದಲನೆಯ ಪರಂತುಕದಲ್ಲಿ ಏನೇ ಇದ್ದರೂ, ಸದರಿ ಉಪಪ್ರಕರಣದ (ಸಿ) ಖಂಡ ಅಥವಾ (ಜಿಜಿ) ಖಂಡಕ್ಕೆ ಸಂಬಂಧಿಸಿದಂತೆ ಮಾಡಲಾದ ಮತ್ತು ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1973 (1973ರ 60) ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುವೇ ನಿಯಮಗಳು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅವುಗಳನ್ನು ಬದಲಾಯಿಸುವ ತನಕ ಅಥವಾ ನಿರಸನಗೊಳಿಸುವ ತನಕ ಅಥವಾ ತಿದ್ದುಪಡಿ ಮಾಡುವ ತನಕ ಅವುಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕುದು.

**49ಎ. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಭಾರತದ ಬಾರ್ ಕೌನ್ಸಿಲ್ ಅಥವಾ ರಾಜ್ಯ ಬಾರ್ ಕೌನ್ಸಿಲ್ ಯಾವ ವಿಷಯಕ್ಕೆ ಸಂಬಂಧಿಸಿ ನಿಯಮ ರಚನಾಧಿಕಾರವನ್ನು ಹೊಂದಿರುವುದೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದ ನಿಯಮಗಳೂ ಸೇರಿದಂತೆ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಕೆಳಕಂಡವುಗಳ ಬಗ್ಗೆ ಉಪಬಂಧಿಸಬಹುದು,–

(ಎ) ಬಾರ್ ಕೌನ್ಸಿಲ್‌ನ ಸದಸ್ಯತ್ವದ ಅರ್ಹತೆಗಳು ಮತ್ತು ಅನರ್ಹತೆಗಳು;

(ಬಿ) ಭಾರತದ ಬಾರ್ ಕೌನ್ಸಿಲ್ಲು, ರಾಜ್ಯ ಬಾರ್ ಕೌನ್ಸಿಲ್‌ಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸಬಹುದಾದ ರೀತಿ ಮತ್ತು ಭಾರತದ ಬಾರ್ ಕೌನ್ಸಿಲ್ ನೀಡಿದ ನಿರ್ದೇಶನಗಳನ್ನು ಅಥವಾ ಮಾಡಿದ ಆದೇಶಗಳನ್ನು ಜಾರಿಗೊಳಿಸಬಹುದಾದಂಥ ರೀತಿ;

(ಸಿ) ಈ ಅಧಿನಿಯಮದ ಮೇರೆಗೆ ನ್ಯಾಯವಾದಿಗಳಾಗಿ ಪಟ್ಟಿಯಲ್ಲಿ ಸೇರ್ಪಡೆಯಾಗಲು ಅರ್ಹರಾದ ವ್ಯಕ್ತಿಗಳ ವರ್ಗ ಅಥವಾ ಪ್ರವರ್ಗ;

(ಡಿ) 24ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಿಯಮಿಸಲಾದಂತೆ ಪಡೆಯಬೇಕಾದ ತರಬೇತಿ ವ್ಯಾಸಂಗ ಕ್ರಮದಿಂದ ಮತ್ತು ತೇರ್ಗಡೆಯಾಗಬೇಕಾದ ಪರೀಕ್ಷೆಯಿಂದ ಯಾವ ವ್ಯಕ್ತಿಗಳ ಪ್ರವರ್ಗಕ್ಕೆ ವಿನಾಯಿತಿ ನೀಡಬಹುದೋ ಆ ವ್ಯಕ್ತಿಗಳ ಪ್ರವರ್ಗ;

(ಇ) ನ್ಯಾಯವಾದಿಗಳಲ್ಲಿ ಜ್ಯೇಷ್ಠತೆಯನ್ನು ನಿರ್ಧರಿಸಬಹುದಾದಂಥ ರೀತಿ;

(ಎಫ್) ಒಂದು ಬಾರ್ ಕೌನ್ಸಿಲ್ಲಿನ ಶಿಸ್ತು ಸಮಿತಿಯು ಪ್ರಕರಣಗಳನ್ನು ಸುನಾವಣೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅಪೀಲುಗಳನ್ನು ಸುನಾವಣೆ ಮಾಡಲು ಭಾರತದ ಬಾರ್ ಕೌನ್ಸಿಲ್‌ನ ಶಿಸ್ತು ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ;

(ಜಿ) ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗಿನ ನಿಯಮಗಳನ್ನು ಇಡೀ ಭಾರತಕ್ಕೆ ಅಥವಾ ಎಲ್ಲ ಬಾರ್ ಕೌನ್ಸಿಲ್‌ಗಳಿಗೆ ಅಥವಾ ಯಾವುದೇ ಒಂದು ಬಾರ್ ಕೌನ್ಸಿಲ್‌ಗೆ ಅನ್ವಯವಾಗುವಂತೆ ರಚಿಸಬಹುದು.

(4) ಒಂದು ಬಾರ್ ಕೌನ್ಸಿಲ್ ರಚಿಸಿದ ನಿಯಮದ ಯಾವುದೇ ಉಪಬಂಧವು, ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮದ ಯಾವುದೇ ಉಪಬಂಧಕ್ಕೆ ವಿರುದ್ಧವಾಗಿದ್ದರೆ, ಆಗ ಈ

ಪ್ರಕರಣದ ಮೇರೆಗೆ ರಚಿಸಿದ ನಿಯಮವನ್ನು ಬಾರ್ ಕೌನ್ಸಿಲ್ ರಚಿಸಿದ ನಿಯಮಕ್ಕೆ ಮುಂಚೆ ಅಥವಾ ತರುವಾಯ ರಚಿಸಲಾಗಿದ್ದರೂ, ಅದು ಪ್ರಭಾವವುಳ್ಳದ್ದಾಗಿರತಕ್ಕದ್ದು ಮತ್ತು ಬಾರ್ ಕೌನ್ಸಿಲ್ ರಚಿಸಿದ ನಿಯಮವು ಹಾಗೆ ವಿರುದ್ಧವಾಗಿರುವಷ್ಟರ ಮಟ್ಟಿಗೆ ಶೂನ್ಯವಾಗತಕ್ಕುದು.

(5) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**50. ಕೆಲವು ಅಧಿನಿಯಮಿತಿಗಳ ನಿರಸನ.–** (1) ಈ ಅಧಿನಿಯಮದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ರಚಿತವಾದ ದಿನಾಂಕದಂದು, ಭಾರತ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ 3 ರಿಂದ 7ರ ವರೆಗಿನ ಪ್ರಕರಣಗಳು (ಎರಡೂ ಸೇರಿದಂತೆ) 9ನೇ ಪ್ರಕರಣದ (1), (2) ಮತ್ತು (3)ನೇ ಉಪಪ್ರಕರಣಗಳು, 15ನೇ ಪ್ರಕರಣ ಮತ್ತು 20ನೇ ಪ್ರಕರಣ– ಇವುಗಳ ಉಪಬಂಧಗಳು, ಯಾವ ಪ್ರದೇಶದ ಸಲುವಾಗಿ ರಾಜ್ಯ ಬಾರ್ ಕೌನ್ಸಿಲನ್ನು ರಚಿಸಲಾಗಿದೆಯೋ ಆ ಪ್ರದೇಶದಲ್ಲಿ ನಿರಸಿತವಾಗಿರತಕ್ಕುದು.

(2) IIIನೇ ಅಧ್ಯಾಯವು ಜಾರಿಗೆ ಬರುವ ದಿನಾಂಕದಂದು, ಈ ಕೆಳಕಂಡವುಗಳು ನಿರಸಿತವಾಗಿರತಕ್ಕುದು, ಎಂದರೆ:–

(ಎ) ಕಾನೂನು ವೃತ್ತಿಗರ ಅಧಿನಿಯಮ, 1879ರ 6, 7, 18 ಮತ್ತು 37ನೇ ಪ್ರಕರಣಗಳು, ಮತ್ತು ಆ ಅಧಿನಿಯಮದ 8, 9, 16, 17, 19 ಮತ್ತು 41 – ಈ ಪ್ರಕರಣಗಳ ಪೈಕಿ ಕಾನೂನು ವೃತ್ತಿಗರ ಪ್ರವೇಶ ಮತ್ತು ಸೇರ್ಪಡೆಗೆ ಸಂಬಂಧಪಡುವಷ್ಟು ಭಾಗ;

(ಬಿ) ಮುಂಬಯಿ ಪ್ಲೀಡರುಗಳ ಅಧಿನಿಯಮ, 1920ರ 3, 4 ಮತ್ತು 6ನೇ ಪ್ರಕರಣಗಳು;

(ಸಿ)ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ 8ನೇ ಪ್ರಕರಣದ ಪೈಕಿ ಕಾನೂನು ವೃತ್ತಿಗರ ಪ್ರವೇಶ ಮತ್ತು ಸೇರ್ಪಡೆಗೆ ಸಂಬಂಧಪಡುವಷ್ಟು ಭಾಗ;

(ಡಿ) ಯಾವುದೇ ಉಚ್ಚ ನ್ಯಾಯಾಲಯದ ಲೆಟರ್ಸ್ ಪೇಟೆಂಟಿನ ಮತ್ತು ಯಾವುದೇ ಇತರ ಕಾನೂನಿನ ಉಪಬಂಧಗಳು ಕಾನೂನು ವೃತ್ತಿಗರ ಪ್ರವೇಶ ಮತ್ತು ಸೇರ್ಪಡೆಗೆ ಸಂಬಂಧಪಡುವಷ್ಟರ ಮಟ್ಟಿಗೆ.

(3) IVನೇ ಅಧ್ಯಾಯವು ಜಾರಿಗೆ ಬರುವ ದಿನಾಂಕದಂದು, ಈ ಕೆಳಕಂಡವುಗಳು ನಿರಸಿತವಾಗಿರತಕ್ಕುದು, ಎಂದರೆ:–

(ಎ) ಕಾನೂನು ವೃತ್ತಿಗರ ಅಧಿನಿಯಮ, 1879ರ 4, 5,10 ಮತ್ತು 20ನೇ ಪ್ರಕರಣಗಳು ಮತ್ತು ಆ ಅಧಿನಿಯಮದ 8, 9, 19 ಮತ್ತು 41– ಈ ಪ್ರಕರಣಗಳು – ಕಾನೂನು ವೃತ್ತಿಗರಿಗೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಅಥವಾ ಯಾವನೇ ವ್ಯಕ್ತಿಯ ಮುಂದೆ ವೃತ್ತಿಯನ್ನು ನಡೆಸುವ ಹಕ್ಕನ್ನು ಪ್ರದಾನ ಮಾಡುವಷ್ಟು ಮಟ್ಟಿಗೆ;

(ಬಿ) ಮುಂಬಯಿ ಪ್ಲೀಡರುಗಳ ಅಧಿನಿಯಮ, 1920 (1920ರ 17)ರ 5, 7, 8 ಮತ್ತು 9ನೇ ಪ್ರಕರಣಗಳು;

(ಸಿ)ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38)ರ 14ನೇ ಪ್ರಕರಣ ಮತ್ತು ಆ ಅಧಿನಿಯಮದ 8 ಮತ್ತು 15ನೇ ಪ್ರಕರಣಗಳ ಪೈಕಿ ಕಾನೂನು ವೃತ್ತಿಗರಿಗೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಅಥವಾ ಯಾವನೇ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವ ಹಕ್ಕನ್ನು ಪ್ರದಾನ ಮಾಡುವಷ್ಟು ಮಟ್ಟಿಗೆ;

(ಡಿ) ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳ (ಉಚ್ಚ ನ್ಯಾಯಾಲಯಗಳಲ್ಲಿ ಕಾನೂನು ವೃತ್ತಿಯನ್ನು ನಡೆಸುವುದು) ಅಧಿನಿಯಮ, 1951 (1951ರ 18);

(ಇ) ಕಾನೂನು ವೃತ್ತಿಗರಿಗೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಅಥವಾ ಯಾರೇ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವ ಹಕ್ಕನ್ನು ಪ್ರದಾನ ಮಾಡುವ ಯಾವುದೇ ಉಚ್ಚ ನ್ಯಾಯಾಲಯದ ಲೆಟರ್ಸ್ ಪೇಟೆಂಟ್‌ನ ಮತ್ತು ಯಾವುದೇ ಇತರ ಕಾನೂನಿನ ಉಪಬಂಧಗಳು.

(4) IIIನೇ ಅಧ್ಯಾಯವು ಜಾರಿಗೆ ಬರುವ ದಿನಾಂಕದಂದು ಈ ಕೆಳಕಂಡವುಗಳು ನಿರಸಿತವಾಗಿರತಕ್ಕುದು, ಎಂದರೆ:-

(ಎ) ಕಾನೂನು ವೃತ್ತಿಗರ ಅಧಿನಿಯಮ, 1879 (1879ರ 18)ರ 12 ರಿಂದ 15ರ ವರೆಗಿನ ಪ್ರಕರಣಗಳು (ಎರಡೂ ಸೇರಿದಂತೆ) 21 ರಿಂದ 24ರ ವರೆಗಿನ ಪ್ರಕರಣಗಳು (ಎರಡೂ ಸೇರಿದಂತೆ) ಮತ್ತು 39 ಮತ್ತು 40ನೇ ಪ್ರಕರಣಗಳು ಮತ್ತು ಆ ಅಧಿನಿಯಮದ 16, 17 ಮತ್ತು 41ನೇ ಪ್ರಕರಣಗಳ ಪೈಕಿ ಕಾನೂನು ವೃತ್ತಿಗರನ್ನು ಅಮಾನತುಗೊಳಿಸುವುದಕ್ಕೆ, ತೆಗೆದುಹಾಕುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಸಂಬಂಧಪಡುವಷ್ಟು ಭಾಗ;

(ಬಿ) ಮುಂಬಯಿ ಪ್ಲೀಡರುಗಳ ಅಧಿನಿಯಮ, 1920 (1920ರ 17)ರ 24 ರಿಂದ 27ರವರೆಗಿನ ಪ್ರಕರಣಗಳು (ಎರಡೂ ಸೇರಿದಂತೆ);

(ಸಿ) ಭಾರತ ಬಾರ್ ಕೌನ್ಸಿಲ್ ಅಧಿನಿಯಮ, 1926 (1926ರ 38)ರ 10 ರಿಂದ 13ರ ವರೆಗಿನ ಪ್ರಕರಣಗಳು (ಎರಡೂ ಸೇರಿದಂತೆ);

(ಡಿ) ಕಾನೂನು ವೃತ್ತಿಗರನ್ನು ಅಮಾನತುಗೊಳಿಸುವುದಕ್ಕೆ, ತೆಗೆದುಹಾಕುವುದಕ್ಕೆ ಅಥವಾ ವಜಾಮಾಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಯಾವುದೇ ಉಚ್ಚ ನ್ಯಾಯಾಲಯದ ಲೆಟರ್ಸ್ ಪೇಟೆಂಟ್‌ನ ಮತ್ತು ಯಾವುದೇ ಇತರ ಕಾನೂನಿನ ಉಪಬಂಧಗಳು.

(5) ಈ ಅಧಿನಿಯಮವು ಸಂಪೂರ್ಣವಾಗಿ ಜಾರಿಗೆ ಬಂದಾಗ,-

(ಎ) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಕಾರಣದಿಂದಾಗಿ ನಿರಸಿತವಾಗಿರದ ಮತ್ತು ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿನಿಯಮಗಳ ಉಳಿದ ಉಪಬಂಧಗಳು (ಕಾನೂನು ವೃತ್ತಿಗರ ಅಧಿನಿಯಮ, 1879ರ 1, 3 ಮತ್ತು 36ನೇ ಪ್ರಕರಣಗಳ ಹೊರತು) ನಿರಸಿತವಾಗಿರತಕ್ಕುದು;

(ಬಿ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅಧಿನಿಯಮಿತಿಗಳು ಅದರಲ್ಲಿ ನಮೂದಿಸಿರುವಷ್ಟರ ಮಟ್ಟಿಗೆ ನಿರಸಿತವಾಗಿರತಕ್ಕುದು.

**51. ಅರ್ಥಾನ್ವಯದ ನಿಯಮ.–** ಗೊತ್ತುಪಡಿಸಿದ ದಿನದಂದು ಮತ್ತು ಅಂದಿನಿಂದ, ಯಾವುದೇ ಬಗೆಯ ಪದ ಪ್ರಯೋಗದಿಂದ ಉಚ್ಚ ನ್ಯಾಯಾಲಯದ ಮೂಲಕ ಸೇರ್ಪಡೆಯಾದ ನ್ಯಾಯವಾದಿಗೆ ಸಂಬಂಧಿಸಿ ಯಾವುದೇ ಅಧಿನಿಯಮಿತಿಯಲ್ಲಿ ಮಾಡಲಾದ ಉಲ್ಲೇಖಗಳನ್ನು ಈ ಅಧಿನಿಯಮದ ಮೇರೆಗೆ ಸೇರ್ಪಡೆಯಾದ ನ್ಯಾಯವಾದಿಯ ಸಂಬಂಧದಲ್ಲಿ ಮಾಡಲಾದ ಉಲ್ಲೇಖಗಳು ಎಂದು ಅರ್ಥೈಸತಕ್ಕುದು.

**52. ಉಳಿಸುವಿಕೆ.–** ಈ ಕೆಳಕಂಡ ಉದ್ದೇಶಗಳಿಗಾಗಿ ಈ ಅಧಿನಿಯಮದಲ್ಲಿರುವುದು ಯಾವುದೂ, ಸಂವಿಧಾನದ 145ನೇ ಅನುಚ್ಛೇದದ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ನಿಯಮ ರಚನಾಧಿಕಾರವನ್ನು ಬಾಧಿಸುವುದಾಗಿ ಭಾವಿಸತಕ್ಕುದಲ್ಲ.

(ಎ) ಆ ನ್ಯಾಯಾಲಯದಲ್ಲಿ ಯಾವ ಷರತ್ತುಗಳಿಗೊಳಪಟ್ಟು, ಹಿರಿಯ ನ್ಯಾಯವಾದಿಯು, ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗತಕ್ಕುದೋ ಆ ಷರತ್ತುಗಳನ್ನು ನಿಗದಿಪಡಿಸುವುದು;

(ಬಿ) ಆ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸಲು ಅಥವಾ ವಾದಿಸಲು ಹಕ್ಕುಳ್ಳವರಾಗತಕ್ಕ ವ್ಯಕ್ತಿಗಳನ್ನು ನಿರ್ಧರಿಸುವುದು.

## ಅಧ್ಯಾಯ – VII
## ತಾತ್ಕಾಲಿಕ ಮತ್ತು ಮಧ್ಯಕಾಲೀನ ಉಪಬಂಧಗಳು

**53. ಪ್ರಥಮ ರಾಜ್ಯ ಬಾರ್ ಕೌನ್ಸಿಲಿನ ಚುನಾವಣೆಗಳು.–** ಈ ಅಧಿನಿಯಮದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಮೊದಲ ಬಾರಿಗೆ ರಚಿತವಾಗಬೇಕಾದ ರಾಜ್ಯ ಬಾರ್ ಕೌನ್ಸಿಲ್‌ಗೆ ಚುನಾಯಿತರಾಗಬೇಕಾದ ಸದಸ್ಯರನ್ನು ಚುನಾವಣೆಯ ದಿನಾಂಕದಂದು, ಉಚ್ಚ ನ್ಯಾಯಾಲಯದಲ್ಲಿ ಹಕ್ಕಿನಿಂದ ಕಾನೂನು ವೃತ್ತಿಯನ್ನು ನಡೆಸಲು ಅರ್ಹರಾಗಿರುವಂಥ ಮತ್ತು ಯಾವ ಪ್ರದೇಶದ ಸಲುವಾಗಿ ಬಾರ್ ಕೌನ್ಸಿಲನ್ನು ರಚಿಸಬೇಕಾಗಿದೆಯೋ ಆ ಪ್ರದೇಶದಲ್ಲಿ ಸಾಮಾನ್ಯವಾಗಿ ಕಾನೂನು ವೃತ್ತಿಯನ್ನು ನಡೆಸುತ್ತಿರುವಂಥ ನ್ಯಾಯವಾದಿಗಳು, ವಕೀಲರು, ಪ್ಲೀಡರು ಮತ್ತು ಅಟಾರ್ನಿಗಳು ತಮ್ಮೊಳಗಿನಿಂದ ಚುನಾಯಿಸತಕ್ಕುದು.

ವಿವರಣೆ:– ಯಾವ ರಾಜ್ಯಕ್ಷೇತ್ರದಲ್ಲಿ ಬಾರ್ ಕೌನ್ಸಿಲನ್ನು ರಚಿಸಬೇಕಾಗಿದೆಯೋ ಆ ಕ್ಷೇತ್ರವು ಒಕ್ಕೂಟ ರಾಜ್ಯ ಕ್ಷೇತ್ರವನ್ನು ಒಳಗೊಂಡಿರುವಲ್ಲಿ " ಉಚ್ಚ ನ್ಯಾಯಾಲಯ " ಎಂಬ ಪದವು ಆ ಒಕ್ಕೂಟ ರಾಜ್ಯಕ್ಷೇತ್ರದ ನ್ಯಾಯಿಕ ಕಮೀಷನರ್‌ನ ನ್ಯಾಯಾಲಯವನ್ನು ಒಳಗೊಳ್ಳತಕ್ಕುದು.

**54. ಪ್ರಥಮ ರಾಜ್ಯ ಬಾರ್ ಕೌನ್ಸಿಲ್ಲುಗಳ ಸದಸ್ಯರ ಪದಾವಧಿ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಮೊದಲ ಬಾರಿಗೆ ರಚಿಸಲಾದ ಒಂದು ರಾಜ್ಯ ಬಾರ್ ಕೌನ್ಸಿಲ್‌ನ ಚುನಾಯಿತ ಸದಸ್ಯರ ಪದಾವಧಿಯು ಆ ಕೌನ್ಸಿಲ್ಲಿನ ಮೊದಲ ಸಭೆಯ ದಿನಾಂಕದಿಂದ ಎರಡು ವರ್ಷಗಳಾಗಿರತಕ್ಕುದು:

ಪರಂತು, ಅಂಥ ಸದಸ್ಯರು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ರಾಜ್ಯ ಬಾರ್ ಕೌನ್ಸಿಲ್ ಪುನಾರಚಿತವಾಗುವ ತನಕ ಆ ಪದದಲ್ಲಿ ಮುಂದುವರಿಯತಕ್ಕುದು.

**55. ಕೆಲವರು ಹಾಲಿ ನ್ಯಾಯವಾದಿಗಳ ಹಕ್ಕುಗಳಿಗೆ ಬಾಧಕವಾಗದಿರುವುದು.–** ಈ ಅಧಿನಿಯಮದಲ್ಲಿ ಏನೇ ಇದ್ದರೂ,–

(ಎ) IVನೇ ಅಧ್ಯಾಯವು ಜಾರಿಗೆ ಬಂದ ದಿನಾಂಕಕ್ಕೆ (ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ದಿನಾಂಕವೆಂದು ಉಲ್ಲೇಖಿಸಲಾಗಿದೆ) ನಿಕಟ ಪೂರ್ವದಲ್ಲಿ ಕಾನೂನು ವೃತ್ತಿಗರ ಅಧಿನಿಯಮ, 1879 (1879ರ 18), ಮುಂಬಯಿ ಪ್ಲೀಡರುಗಳ ಅಧಿನಿಯಮ, 1920 (1920ರ 17) ಅಥವಾ ಇತರ ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದ ಪ್ಲೀಡರನಾಗಿ ಅಥವಾ ವಕೀಲನಾಗಿ ವೃತ್ತಿಯನ್ನು ನಡೆಸುತ್ತಿರುವ ಮತ್ತು ಈ ಅಧಿನಿಯಮದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಆಯ್ಕೆ ಮಾಡಿಕೊಳ್ಳದಿರುವ ಅಥವಾ ಅದಕ್ಕೆ ಅರ್ಹನಾಗಿರದ ಪ್ರತಿಯೊಬ್ಬ ಪ್ಲೀಡರ್;

(ಬಿ) [ * * * ]

(ಸಿ) ಕಾನೂನು ವೃತ್ತಿಗರ ಅಧಿನಿಯಮ, 1879 ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳ ಕಾರಣದಿಂದ ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಮುಖ್ತಾರನಾಗಿ ಅಂಥ ಕಾನೂನು ವೃತ್ತಿಯನ್ನು ನಡೆಸುತ್ತಿರುವ ಮತ್ತು ಈ ಅಧಿನಿಯಮದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಆಯ್ಕೆ ಮಾಡಿಕೊಳ್ಳದಿರುವ ಅಥವಾ ಅದಕ್ಕೆ ಅರ್ಹನಾಗಿರದ ಪ್ರತಿಯೊಬ್ಬ ಮುಖ್ತಾರನು;

(ಡಿ) ಕಾನೂನು ವೃತ್ತಿಗರ ಅಧಿನಿಯಮ, 1879 ಅಥವಾ ಇತರ ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದ ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ರೆವಿನ್ಯೂ ಏಜೆಂಟನಾಗಿ ಅಂಥ ಕಾನೂನು ವೃತ್ತಿಯನ್ನು ನಡೆಸುವ ಪ್ರತಿಯೊಬ್ಬ ರೆವಿನ್ಯೂ ಏಜೆಂಟನು

– ಕಾನೂನು ವೃತ್ತಿಗರ ಅಧಿನಿಯಮ, 1879 (1879ರ 18), ಮುಂಬಯಿ ಪ್ಲೀಡರುಗಳ ಅಧಿನಿಯಮ, 1920, ಅಥವಾ ಇತರ ಕಾನೂನಿನ ಸಂಬಂಧಪಟ್ಟ ಉಪಬಂಧಗಳನ್ನು ಈ ಅಧಿನಿಯಮದ ಮೂಲಕ ನಿರಸನಗೊಳಿಸಿದ್ದರೂ, ಯಾವುದೇ ನ್ಯಾಯಾಲಯದಲ್ಲಿ ಅಥವಾ ರೆವಿನ್ಯೂ ಕಚೇರಿಯಲ್ಲಿ (ತಾಲ್ಲೂಕು ಕಚೇರಿಯಲ್ಲಿ) ಅಥವಾ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವ ಸಂಬಂಧವಾಗಿ ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಯಾವ ಹಕ್ಕುಗಳನ್ನು ಉಪಭೋಗಿಸುತ್ತಿದ್ದನೋ ಅವೇ ಹಕ್ಕುಗಳನ್ನು ಉಪಭೋಗಿಸುವುದು ಮುಂದುವರಿಯತಕ್ಕುದು ಮತ್ತು ಯಾವ ಪ್ರಾಧಿಕಾರದ ಶಿಸ್ತು ಪಾಲನಾ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದನೋ ಅದೇ ಪ್ರಾಧಿಕಾರದ ಅಂಥ ಅಧಿಕಾರ ವ್ಯಾಪ್ತಿಗೆ ಒಳಪಡುವುದು ಮುಂದುವರೆಯತಕ್ಕುದು ಮತ್ತು ತದನುಸಾರವಾಗಿ ಮೇಲೆ ಹೇಳಿದ ಅಧಿನಿಯಮಗಳ ಅಥವಾ ಕಾನೂನಿನ ಸಂಬಂಧಪಟ್ಟ ಉಪಬಂಧಗಳನ್ನು ನಿರಸನಗೊಳಿಸಿರದಿದ್ದರೆ ಹೇಗೋ ಹಾಗೆ ಅಂಥ ವ್ಯಕ್ತಿಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗತಕ್ಕುದು.

**56. ಹಾಲಿ ಬಾರ್ ಕೌನ್ಸಿಲ್‌ಗಳ ವಿಸರ್ಜನೆ.–** (1) ದೆಹಲಿಯ ಬಾರ್ ಕೌನ್ಸಿಲನ್ನು ಹೊರತುಪಡಿಸಿ ಈ ಅಧಿನಿಯಮದ ಮೇರೆಗೆ ರಾಜ್ಯ ಬಾರ್ ಕೌನ್ಸಿಲನ್ನು (ಇಲ್ಲಿ ಇನ್ನು ಮುಂದೆ ಹೊಸ ಬಾರ್ ಕೌನ್ಸಿಲ್ ಎಂದು ಉಲ್ಲೇಖಿಸಲಾಗಿದೆ) ರಚಿಸಿದ ಮೇಲೆ,–

(ಎ) ಸಂವಾದಿ ಬಾರ್ ಕೌನ್ಸಿಲ್‌ನಲ್ಲಿ ನಿಹಿತವಾದ ಎಲ್ಲಾ ಸ್ವತ್ತುಗಳು ಮತ್ತು ಆಸ್ತಿಗಳು ಹೊಸ ಬಾರ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕುದು;

(ಬಿ) ಸಂವಾದಿ ಬಾರ್ ಕೌನ್ಸಿಲ್‌ನ ಎಲ್ಲಾ ಹಕ್ಕುಗಳು, ಹೊಣೆಗಳು ಮತ್ತು ಬಾಧ್ಯತೆಗಳು ಯಾವುದೇ ಕರಾರಿನಿಂದಾಗಲಿ ಅಥವಾ ಅನ್ಯಥಾ ಆಗಲಿ ಉದ್ಭವಿಸಿದ್ದರೂ ಅವು ಅನುಕ್ರಮವಾಗಿ ಆ ಹೊಸ ಬಾರ್ ಕೌನ್ಸಿಲ್‌ನ ಹಕ್ಕುಗಳು, ಹೊಣೆಗಳು ಮತ್ತು ಬಾಧ್ಯತೆಗಳು ಆಗಿರತಕ್ಕುದು;

(ಸಿ) ಯಾವುದೇ ಶಿಸ್ತುಪಾಲನಾ ವಿಷಯದ ಸಂಬಂಧದಲ್ಲಿ ಅಥವಾ ಅನ್ಯಥಾ ಸಂವಾದಿ ಬಾರ್ ಕೌನ್ಸಿಲ್‌ನ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹರಣೆಗಳು ಆ ಹೊಸ ಬಾರ್ ಕೌನ್ಸಿಲ್‌ಗೆ ವರ್ಗಾವಣೆಗೊಳ್ಳತಕ್ಕುದು.

(2) ಈ ಪ್ರಕರಣದಲ್ಲಿ ದೆಹಲಿಯ ಬಾರ್ ಕೌನ್ಸಿಲನ್ನು ಹೊರತುಪಡಿಸಿ ರಾಜ್ಯ ಬಾರ್ ಕೌನ್ಸಿಲ್‌ನ ಸಂಬಂಧದಲ್ಲಿ " ಸಂವಾದಿ ಬಾರ್ ಕೌನ್ಸಿಲ್ " ಎಂದರೆ ಈ ಅಧಿನಿಯಮದ ಮೇರೆಗೆ ಯಾವ ರಾಜ್ಯ ಕ್ಷೇತ್ರಕ್ಕಾಗಿ ಒಂದು ರಾಜ್ಯ ಬಾರ್ ಕೌನ್ಸಿಲನ್ನು ರಚಿಸಲಾಗಿದೆಯೋ ಆ ರಾಜ್ಯ ಕ್ಷೇತ್ರದಲ್ಲಿನ ಉಚ್ಚ ನ್ಯಾಯಾಲಯದ ಸಲುವಾಗಿ ಇರುವ ಬಾರ್ ಕೌನ್ಸಿಲ್.

**57. ಬಾರ್ ಕೌನ್ಸಿಲ್‌ನ ರಚನೆಯು ಇನ್ನೂ ಆಗಬೇಕಾಗಿರುವಾಗ ನಿಯಮ ರಚನಾಧಿಕಾರ.–** ಈ ಅಧಿನಿಯಮದ ಮೇರೆಗೆ ಒಂದು ಬಾರ್ ಕೌನ್ಸಿಲ್ಲನ್ನು ರಚಿಸುವ ತನಕ, ಈ ಅಧಿನಿಯಮದ ಮೇರೆಗಿನ ಆ ಬಾರ್ ಕೌನ್ಸಿಲ್‌ನ ನಿಯಮ ರಚನಾಧಿಕಾರವನ್ನು,–

(ಎ) ಭಾರತದ ಬಾರ್ ಕೌನ್ಸಿಲ್‌ನ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು;

(ಬಿ) ಒಂದು ರಾಜ್ಯ ಬಾರ್ ಕೌನ್ಸಿಲ್‌ನ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು

– ಚಲಾಯಿಸತಕ್ಕುದು.

**58. ಮಧ್ಯಕಾಲೀನ ಅವಧಿಯಲ್ಲಿ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದ ಮೇರೆಗೆ ರಾಜ್ಯ ಬಾರ್ ಕೌನ್ಸಿಲನ್ನು ರಚಿಸದಿರುವಲ್ಲಿ ಅಥವಾ ಹಾಗೆ ರಚಿತವಾದ ರಾಜ್ಯ ಬಾರ್ ಕೌನ್ಸಿಲ್ಲು ನ್ಯಾಯಾಲಯದ ಯಾವುದೇ ಆದೇಶದ ಕಾರಣದಿಂದ ಅಥವಾ ಅನ್ಯಥಾ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು

ಅಸಮರ್ಥವಾಗಿರುವಲ್ಲಿ, ಆ ಬಾರ್ ಕೌನ್ಸಿಲ್ಲಿನ ಅಥವಾ ಅದರ ಯಾವುದೇ ಸಮಿತಿಯ ಪ್ರಕಾರ್ಯಗಳು ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಗಳ ಪ್ರವೇಶ ಮತ್ತು ಸೇರ್ಪಡೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅವುಗಳನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಉಚ್ಚ ನ್ಯಾಯಾಲಯವು ನಿರ್ವಹಿಸತಕ್ಕುದು.

(2) IVನೇ ಅಧ್ಯಾಯವು ಜಾರಿಗೆ ಬರುವ ತನಕ, ರಾಜ್ಯ ಬಾರ್ ಕೌನ್ಸಿಲ್ ಅಥವಾ ರಾಜ್ಯ ಬಾರ್ ಕೌನ್ಸಿಲ್‌ನ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಉಚ್ಚ ನ್ಯಾಯಾಲಯವು, 28ನೇ ಪ್ರಕರಣದ ಮೇರೆಗೆ ನಿಯಮಗಳು ರಚಿತವಾಗದಿದ್ದರೂ, ಅಥವಾ ಹಾಗೆ ರಚಿತವಾದ ನಿಯಮಗಳನ್ನು ಭಾರತದ ಬಾರ್ ಕೌನ್ಸಿಲ್ ಅನುಮೋದಿಸದಿದ್ದರೂ, ಈ ಅಧಿನಿಯಮದ ಮೇರೆಗೆ ಯಾವನೇ ವ್ಯಕ್ತಿಯು ಒಬ್ಬ ನ್ಯಾಯವಾದಿಯಾಗಿ ರಾಜ್ಯ ಪಟ್ಟಿಯಲ್ಲಿ ಸೇರ್ಪಡೆಯಾಗಲು ಅರ್ಹನಾಗಿದ್ದರೆ, ಅವನನ್ನು ಆ ಪಟ್ಟಿಯಲ್ಲಿ ಹಾಗೆ ಸೇರ್ಪಡೆ ಮಾಡಬಹುದು. ಮತ್ತು ಹಾಗೆ ಪಟ್ಟಿಯಲ್ಲಿ ಸೇರ್ಪಡೆಯಾದ ಪ್ರತಿಯೊಬ್ಬ ವ್ಯಕ್ತಿಯು, ಆ ಅಧ್ಯಾಯವು ಜಾರಿಗೆ ಬರುವ ತನಕ, ಭಾರತ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38)ರ 14ನೇ ಪ್ರಕರಣದ ಮೇರೆಗೆ ಕಾನೂನು ವೃತ್ತಿಯನ್ನು ನಡೆಸುವ ಸಂಬಂಧದಲ್ಲಿ ಒಬ್ಬ ನ್ಯಾಯವಾದಿಗೆ ಪ್ರದಾನ ಮಾಡಲಾಗಿರುವ ಎಲ್ಲಾ ಹಕ್ಕುಗಳಿಗೂ ಅರ್ಹನಾಗಿರತಕ್ಕುದು.

(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, 1961ರ ಡಿಸೆಂಬರ್ 1ಕ್ಕೆ ನಿಕಟಪೂರ್ವದಲ್ಲಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿದ್ದ ಅಥವಾ ಈ ಅಧಿನಿಯಮದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಽಗಿನೇ ಅಧ್ಯಾಯವು ಜಾರಿಗೆ ಬರುವ ತನಕ, ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ರಚಿಸಿದ ನಿಯಮಗಳಿಗೊಳಪಟ್ಟು, ಆ ನ್ಯಾಯಾಲಯದಲ್ಲಿ ಕಾನೂನು ವೃತ್ತಿಯನ್ನು ಹಕ್ಕಿನಿಂದ ನಡೆಸಲು ಅರ್ಹನಾಗಿರತಕ್ಕುದು.

(4) 50ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಕಾನೂನು ವೃತ್ತಿಗರ ಅಧಿನಿಯಮ, 1879ರ ಅಥವಾ ಮುಂಬಯಿ ಪ್ಲೀಡರುಗಳ ಅಧಿನಿಯಮ, 1920ರ ಅಥವಾ ಕಾನೂನು ವೃತ್ತಿಗರ ಪ್ರವೇಶ ಮತ್ತು ಸೇರ್ಪಡೆಗೆ ಸಂಬಂಧಿಸಿದ ಇತರ ಯಾವುದೇ ಕಾನೂನಿನ ಉಪಬಂಧಗಳು ನಿರಸಿತವಾಗಿದ್ದಾಗ್ಯೂ, ಹಿಂದೆ ಹೇಳಿದ ಅಧಿನಿಯಮ ಮತ್ತು ಅವುಗಳ ಮೇರೆಗೆ ರಚಿತವಾದ ಯಾವುದೇ ನಿಯಮಗಳ ಉಪಬಂಧಗಳು ಕಾನೂನು ವೃತ್ತಿಗನಿಗೆ ಕಾನೂನು ವೃತ್ತಿ ನಡೆಸಲು ಅಧಿಕಾರ ಕೊಡುವ ಪ್ರಮಾಣ ಪತ್ರವನ್ನು ನವೀಕರಿಸುವುದಕ್ಕೆ ಅಥವಾ ನವೀಕರಣದ ರೂಪದಲ್ಲಿ ನೀಡುವುದಕ್ಕೆ ಸಂಬಂಧಪಡುವಷ್ಟು ಮಟ್ಟಿಗೆ ಅವುಗಳು ಽಗಿನೇ ಅಧ್ಯಾಯವು ಜಾರಿಗೆ ಬರುವ ತನಕ ಪರಿಣಾಮಕಾರಿಯಾಗತಕ್ಕುದು, ಮತ್ತು ತದನುಸಾರವಾಗಿ, 1961ರ ಡಿಸೆಂಬರ್, 1 ರಿಂದ ಪ್ರಾರಂಭವಾಗಿ IVನೇ ಅಧ್ಯಾಯವು ಜಾರಿಗೆ ಬರುವ ದಿನಾಂಕಕ್ಕೆ ಕೊನೆಗೊಳ್ಳುವವರೆಗಿನ ಅವಧಿಯಲ್ಲಿ, ಈ ಅಧಿನಿಯಮದ ಮೇರೆಗೆ ನ್ಯಾಯವಾದಿಯಾಗಿ ಸೇರ್ಪಡೆಯಾಗದಿರುವ ಒಬ್ಬ ಕಾನೂನು ವೃತ್ತಿಗನಿಗೆ ನೀಡಲಾದ ಅಥವಾ ನವೀಕರಿಸಿ ನೀಡಲಾದ ಮತ್ತು ಹಿಂದೆ ಹೇಳಿದ ಅಧಿನಿಯಮಗಳ ಅಥವಾ ಆ ಇತರ ಕಾನೂನಿನ ಉಪಬಂಧಗಳ ಮೇರೆಗೆ ನೀಡಲಾದ ಅಥವಾ ನವೀಕರಿಸಿ ನೀಡಲಾದ ಅಥವಾ ನೀಡಲಾಗಿದೆಯೆಂದು ಅಥವಾ ನವೀಕರಿಸಿ ನೀಡಲಾಗಿದೆಯೆಂದು ತಾತ್ಪರ್ಯವಾಗುವ ಪ್ರತಿಯೊಂದು ಪ್ರಮಾಣ ಪತ್ರವನ್ನು ಕಾನೂನು ಮಾನ್ಯವಾಗಿ ನೀಡಲಾಗಿದೆ ಅಥವಾ ನವೀಕರಿಸಲಾಗಿದೆ ಎಂದು ಭಾವಿಸತಕ್ಕುದು.

**58ಎ. ಕೆಲವರು ನ್ಯಾಯವಾದಿಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, 1948ನೇ ಜುಲೈ, 26ನೇ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅಲಹಾಬಾದ್‌ನ ಉಚ್ಚ ನ್ಯಾಯಾಲಯದಲ್ಲಿ ಅಥವಾ ಔಧ್‌ನ ಮುಖ್ಯ ನ್ಯಾಯಾಲಯದಲ್ಲಿ ಕಾನೂನು ವೃತ್ತಿಯನ್ನು ನಡೆಸುವುದಕ್ಕೆ ಹಕ್ಕುಳ್ಳವರಾಗಿದ್ದ ಮತ್ತು ಸಂಯುಕ್ತ ಪ್ರಾಂತಗಳ ಉಚ್ಚ ನ್ಯಾಯಾಲಯಗಳ (ಸಮ್ಮಿಲನ) ಆದೇಶದ ಉಪಬಂಧಗಳ ಮೇರೆಗೆ ಅಲಹಾಬಾದಿನ ಹೊಸ ಉಚ್ಚ ನ್ಯಾಯಾಲಯದಲ್ಲಿ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ನ್ಯಾಯವಾದಿಗಳೆಂದು ಮನ್ನಣೆ ಪಡೆದ, ಆದರೆ ಸದರಿ ಉಚ್ಚ ನ್ಯಾಯಾಲಯದ ಬಾರ್ ಕೌನ್ಸಿಲ್‌ಗೆ ಸಂದಾಯ ಮಾಡಬೇಕಾದ ಫೀಜನ್ನು ಸಂದಾಯ ಮಾಡಿಲ್ಲವೆಂಬ

ಕಾರಣಕ್ಕಾಗಿ ಮಾತ್ರವೇ ಸದರಿ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಔಪಚಾರಿಕವಾಗಿ ಹೆಸರು ಸೇರ್ಪಡೆಯಾಗಿರದ ಎಲ್ಲಾ ನ್ಯಾಯವಾದಿಗಳು ಮತ್ತು ಸದರಿ ದಿನಾಂಕ ಮತ್ತು 1952ರ ಮೇ 26ನೇ ದಿನಾಂಕದ ನಡುವಣ ಅವಧಿಯಲ್ಲಿ ನ್ಯಾಯವಾದಿಗಳೆಂದು ಸೇರ್ಪಡೆಯಾದ ಎಲ್ಲ ನ್ಯಾಯವಾದಿಗಳು 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ ಸದರಿ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳೆಂಬುದಾಗಿ ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು, ಈ ಬಗ್ಗೆ ಒಂದು ಅರ್ಜಿಯನ್ನು ಸಲ್ಲಿಸಿದ ಮೇಲೆ, ಉತ್ತರ ಪ್ರದೇಶದ ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಅವನಿಗೇ ಪ್ರವೇಶ ನೀಡಬಹುದು.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ, 1952ರ ಅಕ್ಟೋಬರ್ 10ನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ, ಹೈದರಾಬಾದಿನ ಉಚ್ಚ ನ್ಯಾಯಾಲಯದಲ್ಲಿ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ, ಆದರೆ, ಆ ಉಚ್ಚ ನ್ಯಾಯಾಲಯದ ಬಾರ್ ಕೌನ್ಸಿಲಿಗೆ ಸಂದಾಯ ಮಾಡಬೇಕಾದ ಫೀಜನ್ನು ಸಂದಾಯ ಮಾಡಿಲ್ಲವೆಂಬ ಕಾರಣಕ್ಕಾಗಿ ಮಾತ್ರವೇ, ಸದರಿ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಔಪಚಾರಿಕವಾಗಿ ಹೆಸರು ಸೇರ್ಪಡೆಯಾಗಿರದ ಎಲ್ಲಾ ನ್ಯಾಯವಾದಿಗಳು, 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ ಸದರಿ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳು ಎಂಬುದಾಗಿ ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು, ಅವನು ಈ ಬಗ್ಗೆ ಒಂದು ಅರ್ಜಿಯನ್ನು ಸಲ್ಲಿಸಿದ ಮೇಲೆ ಆಂಧ್ರಪ್ರದೇಶದ ಅಥವಾ ಮಹಾರಾಷ್ಟ್ರ ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಅವನಿಗೆ ಪ್ರವೇಶ ನೀಡಬಹುದು.

(3) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, 1960ರ ಮೇ 1ನೇ ದಿನಾಂಕದ ನಿಕಟ ಪೂರ್ವದಲ್ಲಿ, ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ಮತ್ತು ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ 8ನೇ ಪ್ರಕರಣದ ಉಪಬಂಧಗಳ ಮೇರೆಗೆ ಗುಜರಾತಿನ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳ ಸೇರ್ಪಡೆಗಾಗಿ ಅರ್ಜಿ ಸಲ್ಲಿಸಿರುವ, ಆದರೆ ಸದರಿ ಉಪಬಂಧದ ನಿರಸನದ ಕಾರಣದಿಂದ ಹಾಗೆ ಹೆಸರು ಸೇರ್ಪಡೆಯಾಗಿಲ್ಲದ ಎಲ್ಲಾ ನ್ಯಾಯವಾದಿಗಳು, 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ, ಆ ಅಧಿನಿಯಮದ ಮೇರೆಗೆ ಗುಜರಾತಿನ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳೆಂಬುದಾಗಿ ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು. ಈ ಬಗ್ಗೆ ಒಂದು ಅರ್ಜಿಯನ್ನು ಸಲ್ಲಿಸಿದ ಮೇಲೆ ಗುಜರಾತ್‌ನ ರಾಜ್ಯ ನ್ಯಾಯವಾದಿಗಳ ಪಟ್ಟಿಯಲ್ಲಿ ಅವನಿಗೆ ನ್ಯಾಯವಾದಿಯಾಗಿ ಪ್ರವೇಶ ನೀಡಬಹುದು.

(4) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ. 1961ರ ಡಿಸೆಂಬರ್ 1ನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ, ಯಾವುದೇ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಆ ಪ್ರದೇಶದ ನ್ಯಾಯಿಕ ಕಮೀಷನರ್‌ನ ನ್ಯಾಯಾಲಯದ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿದ್ದ ಎಲ್ಲಾ ವ್ಯಕ್ತಿಗಳು, 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳು ಎಂಬುದಾಗಿ ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು ಈ ಬಗ್ಗೆ ಒಂದು ಅರ್ಜಿಯನ್ನು ಸಲ್ಲಿಸಿದ ಮೇಲೆ, ಆ ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಇಟ್ಟುಕೊಂಡು ಬಂದ ರಾಜ್ಯ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಅವನಿಗೆ ಪ್ರವೇಶ ನೀಡಬಹುದು.

**58ಎಎ. ಪಾಂಡಿಚೇರಿಯ ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, IIIನೇ ಅಧ್ಯಾಯದ ಉಪಬಂಧಗಳನ್ನು ಪಾಂಡಿಚೇರಿಯ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಗೆ ತಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಸದರಿ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ

ಜಾರಿಯಲ್ಲಿದ್ದ ಯಾವುದೇ ಕಾನೂನಿನ ಮೇರೆಗೆ (ವಾದಿಸುವ ಅಥವಾ ಕಾರ್ಯ ನಿರ್ವಹಿಸುವ ರೂಪದಲ್ಲಿಯಾಗಲೀ ಅಥವಾ ಅವೆರಡರ ರೂಪದಲ್ಲಿಯಾಗಲೀ) ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ಅಥವಾ ಸದರಿ ದಿನಾಂಕದಂದು ಲೋಕಸೇವೆಯಲ್ಲಿ ಇಲ್ಲದಿದ್ದರೆ ಹಾಗೆ ಹಕ್ಕುಳ್ಳವರಾಗಬಹುದಾದಂಥ ಎಲ್ಲ ವ್ಯಕ್ತಿಗಳನ್ನು 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ, ಉಚ್ಚ ನ್ಯಾಯಾಲಯದ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳೆಂದು ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು, ಮದರಾಸಿನ ಬಾರ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗಾಗಿ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಸದರಿ ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಇಟ್ಟುಕೊಂಡು ಬಂದ ರಾಜ್ಯ ಪಟ್ಟಿಯಲ್ಲಿ ಅವನಿಗೆ ಒಬ್ಬ ನ್ಯಾಯವಾದಿಯಾಗಿ ಪ್ರವೇಶ ನೀಡಬಹುದು.

(2) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, IVನೇ ಅಧ್ಯಾಯದ ಉಪಬಂಧಗಳನ್ನು ಪಾಂಡಿಚೆರಿಯ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಗೆ ತಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಸದರಿ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದ (ವಾದಿಸುವ ಅಥವಾ ಕಾರ್ಯ ನಿರ್ವಹಿಸುವ ರೂಪದಲ್ಲಾಗಲಿ ಅಥವಾ ಅವೆರಡರ ರೂಪದಲ್ಲಿಯಾಗಲೀ ಅಥವಾ ಇತರ ಯಾವುದೇ ರೂಪದಲ್ಲಿಯಾಗಲಿ) ಕಾನೂನು ವೃತ್ತಿಯನ್ನು ನಡೆಸುತ್ತಿದ್ದ ಮತ್ತು (1)ನೇ ಉಪಪ್ರಕರಣದ ಮೇರೆಗೆ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಆಯ್ಕೆ ಮಾಡಿಕೊಳ್ಳದಿರುವ ಅಥವಾ ಅದಕ್ಕೆ ಅರ್ಹನಾಗಿರದ ಪ್ರತಿಯೊಬ್ಬ ವ್ಯಕ್ತಿಯು, ಪಾಂಡಿಚೆರಿ (ಕಾನೂನುಗಳ ವಿಸ್ತರಣೆ) ಅಧಿನಿಯಮ, 1968ರ ಮೂಲಕ ಅಂಥ ಕಾನೂನಿನ ಸಂಬಂಧಪಟ್ಟ ಉಪಬಂಧಗಳು ನಿರಸನಗೊಂಡಿದ್ದರೂ, ಯಾವುದೇ ನ್ಯಾಯಾಲಯದಲ್ಲಿ ಅಥವಾ ರೆವಿನ್ಯೂ ಕಚೇರಿಯಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಅಥವಾ ಯಾವನೇ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ, ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅವನು ಯಾವ ಹಕ್ಕುಗಳನ್ನು ಉಪಭೋಗಿಸುತ್ತಿದ್ದನೋ ಅವೇ ಹಕ್ಕುಗಳನ್ನು ಉಪಭೋಗಿಸುವುದು ಮುಂದುವರಿಯತಕ್ಕುದು ಅಥವಾ ಸಂದರ್ಭಾನುಸಾರ, ಯಾವ ಪ್ರಾಧಿಕಾರದ ಶಿಸ್ತುಪಾಲನಾ ಅಧಿಕಾರ ವ್ಯಾಪ್ತಿಗೆ ಅವನು ಒಳಪಟ್ಟಿದ್ದನೋ ಅದೇ ಅಧಿಕಾರ ವ್ಯಾಪ್ತಿಗೆ ಒಳಪಡುವುದು ಮುಂದುವರಿಯತಕ್ಕುದು. ಮತ್ತು ತದನುಸಾರವಾಗಿ ಹಿಂದೆ ಹೇಳಿದ ಕಾನೂನಿನ ಸಂಬಂಧಪಟ್ಟ ಉಪಬಂಧಗಳು, ಅವುಗಳನ್ನು ನಿರಸನಗೊಳಿಸಿರದಿದ್ದರೆ ಹೇಗೋ ಹಾಗೆ, ಅಂಥ ವ್ಯಕ್ತಿಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗತಕ್ಕುದು.

**58ಎಬಿ. ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಮೂಲಕ ಸೇರ್ಪಡೆಗೊಂಡ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.**– ಈ ಅಧಿನಿಯಮದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಅಥವಾ ಭಾರತದ ಬಾರ್ ಕೌನ್ಸಿಲ್ ಮಾಡಿದ ಯಾವುದೇ ನಿರ್ಣಯದಲ್ಲಿ ಅಥವಾ ನೀಡಿದ ನಿರ್ದೇಶನದಲ್ಲಿ ಏನೇ ಇದ್ದರೂ, ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ 1963ರ ಫೆಬ್ರವರಿ 28ನೇ ದಿನಾಂಕದಿಂದ ಪ್ರಾರಂಭವಾಗಿ 1964ರ ಮಾರ್ಚ್ 31ನೇ ದಿನಾಂಕದಂದು ಕೊನೆಗೊಳ್ಳುವ ಅವಧಿಯಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಪಡೆದ ಪ್ಲೀಡರ್‌ಷಿಪ್ ಪ್ರಮಾಣ ಪತ್ರವನ್ನು ಆಧರಿಸಿ ರಾಜ್ಯ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಪ್ರವೇಶ ಪಡೆದ ಪ್ರತಿಯೊಬ್ಬ ವ್ಯಕ್ತಿಯನ್ನು, ಆ ರಾಜ್ಯ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಕಾನೂನು ಮಾನ್ಯವಾಗಿ ಪ್ರವೇಶ ಪಡೆದ ವ್ಯಕ್ತಿಯೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ (ವಾದಿಸುವ ಅಥವಾ ಕಾರ್ಯ ನಿರ್ವಹಿಸುವ ರೂಪದಲ್ಲಾಗಲಿ ಅಥವಾ ಅವೆರಡರ ರೂಪದಲ್ಲಿಯಾಗಲಿ) ಕಾನೂನು ವೃತ್ತಿಯನ್ನು ನಡೆಸುವುದಕ್ಕೆ ಹಕ್ಕುಳ್ಳವನಾಗಿರತಕ್ಕುದು:

ಪರಂತು, ಅಂಥ ಯಾರೇ ವ್ಯಕ್ತಿಯು, ಯಾವುದೇ ಇತರ ರಾಜ್ಯ ಬಾರ್ ಕೌನ್ಸಿಲ್‌ನ ನ್ಯಾಯವಾದಿಗಳ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಆಯ್ಕೆ ಮಾಡಿಕೊಂಡಿರುವಲ್ಲಿ ಇತರ ರಾಜ್ಯ ಬಾರ್ ಕೌನ್ಸಿಲ್ ಅವನನ್ನು ಸೇರ್ಪಡೆ ಮಾಡಿಕೊಂಡ ದಿನಾಂಕದಿಂದ ಅವನ ಹೆಸರನ್ನು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಿಂದ ಹೊಡೆದು ಹಾಕಲಾಗಿದೆಯೆಂದು ಭಾವಿಸತಕ್ಕುದು:

ಮತ್ತೂ ಪರಂತು, ಅಂಥ ವ್ಯಕ್ತಿಯ ಹೆಸರು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನ ರಾಜ್ಯ ಪಟ್ಟಿಯಲ್ಲಿರಲಿ ಅಥವಾ ಯಾವುದೇ ಇತರ ಬಾರ್ ಕೌನ್ಸಿಲ್‌ನ ರಾಜ್ಯ ಪಟ್ಟಿಯಲ್ಲಿರಲಿ, ಅವನ ಜ್ಯೇಷ್ಠತೆಯನ್ನು 17ನೇ ಪ್ರಕರಣದ (3)ನೇ ಉಪಪ್ರಕರಣದ (ಡಿ) ಖಂಡದ ಉದ್ದೇಶಗಳಿಗಾಗಿ 1964ರ ಮೇ 16ನೇ ದಿನಾಂಕವನ್ನು ಪ್ರವೇಶದ ದಿನಾಂಕವೆಂದು ಪರಿಗಣಿಸಿ ನಿರ್ಧರಿಸತಕ್ಕುದು.

**58ಎಸಿ. ಉತ್ತರ ಪ್ರದೇಶದ ರಾಜ್ಯ ಬಾರ್ ಕೌನ್ಸಿಲ್ ಮೂಲಕ ಸೇರ್ಪಡೆಯಾದ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** ಈ ಅಧಿನಿಯಮದಲ್ಲಿ ಅಥವಾ ಯಾವುದೇ ನ್ಯಾಯಾಲಯದ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಅಡಕವಾಗಿದ್ದರೂ, 1962ರ ಜನವರಿ 2ನೇ ದಿನಾಂಕದಿಂದ ಪ್ರಾರಂಭವಾಗಿ 1962ರ ಮೇ 25ನೇ ದಿನಾಂಕದಂದು ಕೊನೆಗೊಳ್ಳುವ ಅವಧಿಯಲ್ಲಿ ಉಚ್ಚ ನ್ಯಾಯಾಲಯದ ಮೂಲಕ ಸೇರ್ಪಡೆಗೊಂಡ ಮತ್ತು ಆ ತರುವಾಯ ಉತ್ತರ ಪ್ರದೇಶದ ರಾಜ್ಯ ಬಾರ್ ಕೌನ್ಸಿಲ್ ಮೂಲಕ ಆ ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಪ್ರವೇಶ ಪಡೆದ ಪ್ರತಿಯೊಬ್ಬ ವ್ಯಕ್ತಿಯನ್ನು, ಉಚ್ಚ ನ್ಯಾಯಾಲಯದ ಮೂಲಕ, ಅವನ ಸೇರ್ಪಡೆಯ ದಿನಾಂಕದಿಂದ ಆ ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಕಾನೂನು ಮಾನ್ಯವಾಗಿ ಪ್ರವೇಶ ಪಡೆದ ವ್ಯಕ್ತಿಯೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು (ವಾದಿಸುವ ಅಥವಾ ಕಾರ್ಯ ನಿರ್ವಹಿಸುವ ರೂಪದಲ್ಲಾಗಲಿ ಅಥವಾ ಅವೆರಡರ ರೂಪದಲ್ಲಿಯಾಗಲೀ) ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗಿರತಕ್ಕುದು.

**58ಎಡಿ. ಭಾರತಕ್ಕೆ ವಲಸೆ ಬರುವ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** ಈ ಅಧಿನಿಯಮದ ಮೂಲಕ ಕಾನೂನು ವೃತ್ತಿಗರ ಅಧಿನಿಯಮ, 1879ರ ಅಥವಾ ಕಾನೂನು ವೃತ್ತಿಗರ ಪ್ರವೇಶ ಮತ್ತು ಸೇರ್ಪಡೆಗೆ ಸಂಬಂಧಿಸಿದ ಇತರ ಯಾವುದೇ ಕಾನೂನಿನ (ಇನ್ನು ಮುಂದೆ ಈ ಪ್ರಕರಣದಲ್ಲಿ ಅಂಥ ಅಧಿನಿಯಮ ಅಥವಾ ಅಂಥ ಕಾನೂನು ಎಂಬುದಾಗಿ ಉಲ್ಲೇಖಿಸಲಾಗಿದೆ) ಉಪಬಂಧಗಳನ್ನು ನಿರಸನಗೊಳಿಸಿದ್ದರೂ, 1947ರ ಆಗಸ್ಟ್ 15ನೇ ದಿನಕ್ಕೆ ಮುಂಚೆ ಭಾರತ ಸರ್ಕಾರದ ಅಧಿನಿಯಮ, 1935ರಲ್ಲಿ ಪರಿಭಾಷಿಸಿದಂತೆ ಭಾರತದೊಳಗೆ ಅಡಕವಾಗಿದ್ದಂಥ ಯಾವುದೇ ಕ್ಷೇತ್ರದಿಂದ ಭಾರತದ ರಾಜ್ಯಕ್ಷೇತ್ರಕ್ಕೆ ವಲಸೆ ಬರುವ ಮತ್ತು ಅಂಥ ವಲಸೆಗೆ ಮುಂಚೆ, ಅಂಥ ಯಾವುದೇ ಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಮೇರೆಗೆ ಅಲ್ಲಿ ಪ್ಲೀಡರನಾಗಿದ್ದ, ಮುಖ್ತಾರನಾಗಿದ್ದ ಅಥವಾ ರೆವಿನ್ಯೂ ಏಜೆಂಟನಾಗಿದ್ದ ಪ್ರತಿಯೊಬ್ಬ ವ್ಯಕ್ತಿಗೆ, ಈ ಕೆಳಕಂಡ ಸಂದರ್ಭಗಳಲ್ಲಿ ಅಂಥ ಅಧಿನಿಯಮದ ಅಥವಾ ಕಾನೂನಿನ ಉಪಬಂಧಗಳ ಮೇರೆಗೆ ಪ್ಲೀಡರನಾಗಿ, ಮುಖ್ತಾರನಾಗಿ ಅಥವಾ ಸಂದರ್ಭಾನುಸಾರ ರೆವಿನ್ಯೂ ಏಜೆಂಟನಾಗಿ ಪ್ರವೇಶ ನೀಡಬಹುದು ಅಥವಾ ಅವನನ್ನು ಸೇರಿಸಿಕೊಳ್ಳಬಹುದು, ಎಂದರೆ ಆ ವ್ಯಕ್ತಿಯು,–

(ಎ) ಅಂಥ ಅಧಿನಿಯಮದ ಅಥವಾ ಕಾನೂನಿನ ಮೇರೆಗೆ ಸಮುಚಿತ ಪ್ರಾಧಿಕಾರಕ್ಕೆ ಆ ಬಗ್ಗೆ ಒಂದು ಅರ್ಜಿಯನ್ನು ಸಲ್ಲಿಸಿದ್ದಿರಬೇಕು; ಮತ್ತು

(ಬಿ) ಭಾರತದ ನಾಗರಿಕನಾಗಿರಬೇಕು ಮತ್ತು ಹಿಂದೆ ಹೇಳಿದ ಸಮುಚಿತ ಪ್ರಾಧಿಕಾರವು ಈ ಬಗ್ಗೆ ನಿರ್ದಿಷ್ಟಪಡಿಸಿದ ಇತರ ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳನ್ನು ಪೂರೈಸಿರಬೇಕು.

– ಮತ್ತು ಈ ಅಧಿನಿಯಮದ ಮೂಲಕ ಅಂಥ ಅಧಿನಿಯಮದ ಅಥವಾ ಕಾನೂನಿನ ಸಂಬಂಧಪಟ್ಟ ಉಪಬಂಧಗಳನ್ನು ನಿರಸನಗೊಳಿಸಿದ್ದರೂ, ಹಾಗೆ ಸೇರ್ಪಡೆಯಾದ ಪ್ರತಿಯೊಬ್ಬ ಪ್ಲೀಡರ್, ಮುಖ್ತಾರ್ ಅಥವಾ ರೆವಿನ್ಯೂ ಏಜೆಂಟನು ಯಾವುದೇ ನ್ಯಾಯಾಲಯದಲ್ಲಿ ಅಥವಾ ರೆವಿನ್ಯೂ ಕಚೇರಿಯಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದ ಅಥವಾ ಯಾರೇ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವ ಸಂಬಂಧದಲ್ಲಿ, ಅಂಥ ಅಧಿನಿಯಮದ ಅಥವಾ ಕಾನೂನಿನ ಸಂಬಂಧಪಟ್ಟ ಉಪಬಂಧಗಳು ನಿರಸಿತವಾಗಿರದಿದ್ದರೆ ಅವುಗಳ ಮೇರೆಗೆ ಯಾವ ಹಕ್ಕುಗಳನ್ನು ಹೊಂದಿರುತ್ತಿದ್ದನೋ ಅವೇ ಹಕ್ಕುಗಳನ್ನು ಹೊಂದಿರತಕ್ಕುದು. ಮತ್ತು ಯಾವ ಪ್ರಾಧಿಕಾರದ ಶಿಸ್ತುಪಾಲನಾ ಅಧಿಕಾರ ವ್ಯಾಪ್ತಿಗೆ ಒಳಪಡುತ್ತಿದ್ದನೋ ಅದೇ ಅಧಿಕಾರ ವ್ಯಾಪ್ತಿಗೆ ಒಳಪಡತಕ್ಕುದು ಮತ್ತು ತದನುಸಾರವಾಗಿ ಆ ಉಪಬಂಧಗಳು ಅಂಥ ವ್ಯಕ್ತಿಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗತಕ್ಕುದು.

**58ಎಇ. ಗೋವಾ, ದಮನ್ ಮತ್ತು ದೀವ್ ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, IIIನೇ ಅಧ್ಯಾಯದ ಉಪಬಂಧಗಳು ಗೋವಾ, ದಮನ್ ಮತ್ತು ದೀವ್ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಗೆ ಬಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಸದರಿ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಮೇರೆಗೆ (ವಾದಿಸುವ ಅಥವಾ ಕಾರ್ಯನಿರ್ವಹಿಸುವ ರೂಪದಲ್ಲಿ ಅಥವಾ ಅವೆರಡರ ರೂಪದಲ್ಲಿ) ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ಅಥವಾ ಸದರಿ ದಿನಾಂಕದಂದು ಅವರು ಲೋಕಸೇವೆಯಲ್ಲಿ ಇಲ್ಲದಿದ್ದರೆ ಹಾಗೆ ಹಕ್ಕುಳ್ಳವರಾಗಬಹುದಾಗಿದ್ದ ಎಲ್ಲಾ ವ್ಯಕ್ತಿಗಳನ್ನು, 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಕ್ಕಾಗಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ ಉಚ್ಚ ನ್ಯಾಯಾಲಯದ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳು ಎಂಬುದಾಗಿ ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು, ಮಹಾರಾಷ್ಟ್ರದ ಬಾರ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗಾಗಿ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಸದರಿ ಕೇಂದ್ರಾಡಳಿತ ಪ್ರದೇಶದ ಸಂಬಂಧದಲ್ಲಿ ಇಟ್ಟುಕೊಂಡು ಬಂದ ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಅವನಿಗೆ ಪ್ರವೇಶ ನೀಡಬಹುದು:

ಪರಂತು, ಹಿಂದೆ ಹೇಳಿದ ಅರ್ಜಿಯ ದಿನಾಂಕದಂದು, ಭಾರತದ ನಾಗರಿಕನಾಗಿಲ್ಲದ ಯಾರೇ ವ್ಯಕ್ತಿಗೆ ಈ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕುದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, IVನೇ ಅಧ್ಯಾಯದ ಉಪಬಂಧಗಳು ಗೋವಾ, ದಮನ್ ಮತ್ತು ದೀವ್ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಗೆ ಬಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಸದರಿ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದಾಗಿ (ವಾದಿಸುವ ಅಥವಾ ಕಾರ್ಯನಿರ್ವಹಿಸುವ ರೂಪದಲ್ಲಾಗಲಿ ಅಥವಾ ಅವೆರಡರ ರೂಪದಲ್ಲಾಗಲಿ ಅಥವಾ ಇತರ ಯಾವುದೇ ರೂಪದಲ್ಲಾಗಲಿ) ಕಾನೂನು ವೃತ್ತಿ ನಡೆಸುತ್ತಿದ್ದ ಅಥವಾ (1)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಆಯ್ಕೆ ಮಾಡಿಕೊಂಡಿಲ್ಲದ ಅಥವಾ ಅರ್ಹನಾಗಿಲ್ಲದ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಂಥ ಕಾನೂನಿನ ಸಂಬಂಧಪಟ್ಟ ಉಪಬಂಧಗಳು ನಿರಸಿತವಾಗಿದ್ದಾಗ್ಯೂ, ಯಾವುದೇ ನ್ಯಾಯಾಲಯದಲ್ಲಿ ಅಥವಾ ರೆವಿನ್ಯೂ ಕಚೇರಿಯಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದ ಅಥವಾ ಯಾರೇ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಅವನು ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಯಾವ ಹಕ್ಕುಗಳನ್ನು ಉಪಭೋಗಿಸುತ್ತಿದ್ದನೋ ಅವೇ ಹಕ್ಕುಗಳನ್ನು ಉಪಭೋಗಿಸುವುದು ಮುಂದುವರಿಯತಕ್ಕುದು ಅಥವಾ ಅವನು ಸಂದರ್ಭಾನುಸಾರ ಯಾವ ಪ್ರಾಧಿಕಾರದ ಶಿಸ್ತುಪಾಲನಾ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದನೋ ಅದೇ ಅಧಿಕಾರ ವ್ಯಾಪ್ತಿಗೆ ಒಳಪಡುವುದು ಮುಂದುವರೆಯತಕ್ಕುದು ಮತ್ತು ತದನುಸಾರವಾಗಿ ಹಿಂದೆ ಹೇಳಿದ ಕಾನೂನಿನ ಸಂಬಂಧಪಟ್ಟ ಉಪಬಂಧಗಳನ್ನು ನಿರಸನಗೊಳಿಸಿರದಿದ್ದರೆ ಹೇಗೋ ಹಾಗೆ ಅವು ಅಂಥ ವ್ಯಕ್ತಿಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗತಕ್ಕುದು.

(3) ಈ ಅಧಿನಿಯಮವು ಅಥವಾ ಅದರ ಯಾವುದೇ ಭಾಗವು, ಗೋವಾ, ದಮನ್ ಮತ್ತು ದೀವ್ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಈ ಅಧಿನಿಯಮ ಅಥವಾ ಅದರ ಯಾವುದೇ ಭಾಗವು ಜಾರಿಗೆ ಬಂದ ದಿನಾಂಕದಂದು ಈ ಅಧಿನಿಯಮಕ್ಕೆ ಅಥವಾ ಅದರ ಭಾಗಕ್ಕೆ ಸಂವಾದಿಯಾಗಿದ್ದು ಆ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಮತ್ತು ಈ ಅಧಿನಿಯಮದ 50ನೇ ಪ್ರಕರಣದ ಉಪಬಂಧಗಳ ಕಾರಣದಿಂದ ನಿರಸನಗೊಳ್ಳದಿರುವಂಥ ಕಾನೂನು ಸಹ ನಿರಸಿತವಾಗಿರತಕ್ಕುದು.

**58ಎಎಫ್. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, IIIನೇ ಅಧ್ಯಾಯದ ಉಪಬಂಧಗಳು ಜಮ್ಮು ಮತ್ತು ಕಾಶ್ಮೀರದ ರಾಜ್ಯದಲ್ಲಿ ಜಾರಿಗೆ ಬಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳವರಾಗಿದ್ದ, ಅಥವಾ ಸದರಿ ದಿನಾಂಕದಂದು

ಲೋಕ ಸೇವೆಯಲ್ಲಿಲ್ಲದಿದ್ದರೆ ಹಾಗೆ ಹಕ್ಕುಳ್ಳವರಾಗಬಹುದಾಗಿದ್ದ ಎಲ್ಲಾ ನ್ಯಾಯವಾದಿಗಳು, 17ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಕ್ಕಾಗಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ ಮೇರೆಗೆ ಉಚ್ಚ ನ್ಯಾಯಾಲಯದ ಪಟ್ಟಿಯಲ್ಲಿ ನ್ಯಾಯವಾದಿಗಳಾಗಿ ಸೇರ್ಪಡೆಯಾದ ವ್ಯಕ್ತಿಗಳು ಎಂಬುದಾಗಿ ಭಾವಿಸತಕ್ಕುದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತದ ಬಾರ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗಾಗಿ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಸದರಿ ರಾಜ್ಯದ ಸಂಬಂಧದಲ್ಲಿ ಇಟ್ಟುಕೊಂಡು ಬಂದ ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಅವನಿಗೆ ಪ್ರವೇಶ ನೀಡಬಹುದು.

(2) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, IIIನೇ ಅಧ್ಯಾಯದ ಉಪಬಂಧಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಗೆ ಬಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಸದರಿ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದ (ವಾದಿಸುವ ಅಥವಾ ಕಾರ್ಯನಿರ್ವಹಿಸುವ ರೂಪದಲ್ಲಾಗಲಿ ಅಥವಾ ಅವೆರಡರ ರೂಪದಲ್ಲಾಗಲಿ) ನ್ಯಾಯವಾದಿಯಾಗಿಲ್ಲದೆ ಅನ್ಯಥಾ ಕಾನೂನು ವೃತ್ತಿಯನ್ನು ನಡೆಸಲು ಹಕ್ಕುಳ್ಳ ಅಥವಾ ಸದರಿ ದಿನಾಂಕದಂದು ಲೋಕ ಸೇವೆಯಲ್ಲಿ ಇಲ್ಲದಿದ್ದರೆ ಹಾಗೆ ಹಕ್ಕುಳ್ಳವನಾಗಬಹುದಾಗಿದ್ದ ಪ್ರತಿಯೊಬ್ಬ ವ್ಯಕ್ತಿಗೆ ಈ ಕೆಳಕಂಡ ಸಂದರ್ಭಗಳಲ್ಲಿ, ಸದರಿ ರಾಜ್ಯದ ಸಂಬಂಧದಲ್ಲಿ ಇಟ್ಟುಕೊಂಡು ಬಂದ ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಪ್ರವೇಶ ನೀಡಬಹುದು,-

(i) ಅವನು ಈ ಅಧಿನಿಯಮದ ಉಪಬಂಧಗಳನುಸಾರವಾಗಿ ಅಂಥ ಸೇರ್ಪಡೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದಿರಬೇಕು; ಮತ್ತು

(ii)ಅವನು 24ನೇ ಪ್ರಕರಣದ (1)ನೇ ಉಪಪ್ರಕರಣದ (ಎ), (ಬಿ), (ಇ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಪೂರೈಸಿರಬೇಕು.

(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, IVನೇ ಅಧ್ಯಾಯದ ಉಪಬಂಧಗಳನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಗೆ ತಂದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಉಪಬಂಧಗಳ ಕಾರಣದಿಂದಾಗಿ (ವಾದಿಸುವ ಅಥವಾ ಕಾರ್ಯ ನಿರ್ವಹಿಸುವ ರೂಪದಲ್ಲಾಗಲಿ ಅಥವಾ ಅವೆರಡರ ರೂಪದಲ್ಲಾಗಲಿ ಅಥವಾ ಇತರ ಯಾವುದೇ ರೂಪದಲ್ಲಿಯಾಗಲಿ) ಕಾನೂನು ವೃತ್ತಿಯನ್ನು ನಡೆಸುತ್ತಿದ್ದ ಅಥವಾ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಯಾಗಿ ಸೇರ್ಪಡೆಯಾಗಲು ಆಯ್ಕೆ ಮಾಡಿಕೊಂಡಿಲ್ಲದ ಅಥವಾ ಅರ್ಹನಾಗಿಲ್ಲದ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಂಥ ಕಾನೂನಿನ ಸಂಬಂಧಪಟ್ಟ ಉಪಬಂಧಗಳು ನಿರಸನಗೊಂಡಿದ್ದರೂ, ಯಾವುದೇ ನ್ಯಾಯಾಲಯದಲ್ಲಿ ಅಥವಾ ರೆವಿನ್ಯೂ ಕಚೇರಿಯಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದ ಮುಂದೆ ಅಥವಾ ಯಾರೇ ವ್ಯಕ್ತಿಯ ಮುಂದೆ ಕಾನೂನು ವೃತ್ತಿಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವ ಹಕ್ಕುಗಳನ್ನು ಉಪಭೋಗಿಸುತ್ತಿದ್ದನೋ ಅವೇ ಹಕ್ಕುಗಳನ್ನು ಉಪಭೋಗಿಸುವುದು ಮುಂದುವರಿಯತಕ್ಕುದು ಅಥವಾ ಸಂದರ್ಭಾನುಸಾರ ಯಾವ ಪ್ರಾಧಿಕಾರದ ಶಿಸ್ತುಪಾಲನಾ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದನೋ ಆ ಅಧಿಕಾರ ವ್ಯಾಪ್ತಿಗೆ ಒಳಪಡುವುದು ಮುಂದುವರಿಯತಕ್ಕುದು, ಮತ್ತು ತದನುಸಾರವಾಗಿ, ಹಿಂದೆ ಹೇಳಿದ ಕಾನೂನಿನ ಸಂಬಂಧಪಟ್ಟ ಉಪಬಂಧಗಳನ್ನು ನಿರಸನಗೊಳಿಸಿರದಿದ್ದರೆ ಹೇಗೋ ಹಾಗೆ ಅಂಥ ವ್ಯಕ್ತಿಗಳ ಸಂಬಂಧದಲ್ಲಿ ಅವು ಪರಿಣಾಮಕಾರಿಯಾಗತಕ್ಕುದು.

(4) ಈ ಅಧಿನಿಯಮವು ಅಥವಾ ಅದರ ಯಾವುದೇ ಭಾಗವು, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಗೆ ಬಂದ ದಿನಾಂಕದಂದು, ಈ ಅಧಿನಿಯಮಕ್ಕೆ ಅಥವಾ ಅದರ ಅಂಥ ಭಾಗಕ್ಕೆ ಸಂವಾದಿಯಾಗಿದ್ದು ಆ ರಾಜ್ಯದಲ್ಲಿ ಜಾರಿಯಲ್ಲಿರುವ ಮತ್ತು ಈ ಅಧಿನಿಯಮದ 50ನೇ ಪ್ರಕರಣದ ಉಪಬಂಧಗಳ ಕಾರಣದಿಂದಾಗಿ ನಿರಸನಗೊಂಡಿರದ ಕಾನೂನು ಸಹ ನಿರಸನಗೊಂಡಿರತಕ್ಕುದು.

**58ಎಜಿ. ಕಟ್ಟಳೆಗೊಳಪಟ್ಟ ಅಭ್ಯಾಸಿಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, 1976ರ ಡಿಸೆಂಬರ್ 31ಕ್ಕೆ ನಿಕಟ ಪೂರ್ವದಲ್ಲಿ ಕಟ್ಟಳೆಗೊಳಪಟ್ಟ ಅಭ್ಯಾಸವನ್ನು ಪ್ರಾರಂಭಿಸಿದ ಮತ್ತು 34ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳನುಸಾರವಾಗಿ, ಕಲ್ಕತ್ತದ ಉಚ್ಚ ನ್ಯಾಯಾಲಯದಲ್ಲಿ ಅಟಾರ್ನಿಯಾಗಿ ಸೇರ್ಪಡೆಯಾಗುವ ಉದ್ದೇಶಕ್ಕಾಗಿ ನ್ಯಾಯವಾದಿಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ಆ ಉಪಪ್ರಕರಣವನ್ನು ಲೋಪಿಸುವುದಕ್ಕೆ ಮುಂಚೆ, ಪ್ರಾರಂಭಿಕ ಪರೀಕ್ಷೆಯಲ್ಲಿ ಉತ್ತೀರ್ಣನಾದ ಪ್ರತಿಯೊಬ್ಬ ವ್ಯಕ್ತಿಗೆ ಕೆಳಕಂಡ ಸಂದರ್ಭದಲ್ಲಿ ರಾಜ್ಯಪಟ್ಟಿಯಲ್ಲಿ ನ್ಯಾಯವಾದಿಯಾಗಿ ಪ್ರವೇಶ ನೀಡಬಹುದು:–

(i) ಅವನು,–

(ಎ) 1976ರ ಡಿಸೆಂಬರ್ 31ಕ್ಕೆ ಮುಂಚೆ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಲ್ಲಿ ಅಂತಿಮ ಪರೀಕ್ಷೆಯಲ್ಲಿ;

(ಬಿ) ಇತರ ಯಾವುದೇ ಸಂದರ್ಭದಲ್ಲಿ ಇಂಟರ್ ಮೀಡಿಯೇಟ್ ಮತ್ತು ಅಂತಿಮ ಪರೀಕ್ಷೆಗಳಲ್ಲಿ

– 1980ರ ಡಿಸೆಂಬರ್ 31ನೇ ದಿನದಂದು ಅಥವಾ ಅದಕ್ಕೆ ಮುಂಚೆ ಉತ್ತೀರ್ಣನಾಗಿರಬೇಕು.

ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ, ಕಲ್ಕತ್ತದಲ್ಲಿನ ಉಚ್ಚ ನ್ಯಾಯಾಲಯವು, ಪರೀಕ್ಷೆಗಳ ಸ್ವರೂಪ ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಇತರ ವಿಷಯವನ್ನು ನಿರ್ದಿಷ್ಟಪಡಿಸಿ 34ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅವಶ್ಯಕವಾಗಬಹುದಾದಂಥ ನಿಯಮಗಳನ್ನು ನಿಯಮಿಸಬಹುದು;

(ii)ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಸೇರ್ಪಡೆಗಾಗಿ ಅರ್ಜಿಯನ್ನು ಸಲ್ಲಿಸಿರಬೇಕು; ಮತ್ತು

(iii) 24ನೇ ಪ್ರಕರಣದ (1)ನೇ ಉಪಪ್ರಕರಣದ (ಎ), (ಬಿ), (ಇ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಪೂರೈಸಿರಬೇಕು.

**58ಬಿ. ಕೆಲವು ಶಿಸ್ತು ವ್ಯವಹರಣೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ.–** (1) 1963ರ ಸೆಪ್ಟೆಂಬರ್ 1ನೇ ದಿನದಿಂದ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯವಾದಿಗೆ ಸಂಬಂಧಿಸಿದ ಯಾವುದೇ ಶಿಸ್ತು ವಿಷಯಕ್ಕೆ ಸಂಬಂಧಿಸಿದ ಪ್ರತಿಯೊಂದು ವ್ಯವಹರಣೆಯನ್ನು (2)ನೇ ಉಪಪ್ರಕರಣದ ಮೊದಲನೇ ಪರಂತುಕದಲ್ಲಿ ಉಪಬಂಧಿಸಿರುವುದನ್ನು ಉಳಿದು, ಆ ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ರಾಜ್ಯ ಬಾರ್ ಕೌನ್ಸಿಲ್ ಆ ಹಾಲಿ ನ್ಯಾಯವಾದಿಯು ಅದರ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರ್ಪಡೆಯಾಗಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕುದು.

(2)ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38)ರ ಮೇರೆಗೆ ಯಾವುದೇ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಒಬ್ಬ ಹಾಲಿ ನ್ಯಾಯವಾದಿಗೆ ಸಂಬಂಧಿಸಿದ ಯಾವುದೇ ಶಿಸ್ತು ವಿಷಯಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹರಣೆಯು ಇತ್ಯರ್ಥದಲ್ಲಿರುವಲ್ಲಿ, ಅಂಥ ವ್ಯವಹರಣೆಯು, 56ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಸಂವಾದಿ ಬಾರ್ ಕೌನ್ಸಿಲ್‌ನ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಯಾಗಿದ್ದರೆ ಹೇಗೋ ಹಾಗೆ ಆ ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ರಾಜ್ಯ ಬಾರ್ ಕೌನ್ಸಿಲ್‌ಗೆ ವರ್ಗಾವಣೆಯಾಗಿರತಕ್ಕುದು:

ಪರಂತು, ಯಾವುದೇ ಅಂಥ ವ್ಯವಹರಣೆಯ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926 (1926ರ 38)ರ 11ನೇ ಪ್ರಕರಣದ ಮೇರೆಗೆ ರಚಿಸಲಾದ ನ್ಯಾಯಾಧಿಕರಣದ ನಿರ್ಣಯವನ್ನು ಸ್ವೀಕರಿಸಿದ್ದಲ್ಲಿ, ಉಚ್ಚ ನ್ಯಾಯಾಲಯವು ಆ ಮೊಕದ್ದಮೆಯನ್ನು ವಿಲೆ ಮಾಡತಕ್ಕುದು ಮತ್ತು ಆ ಉಚ್ಚ ನ್ಯಾಯಾಲಯವು, ಆ ಪ್ರಕರಣವು ನಿರಸಿತವಾಗದಿದ್ದರೆ ಹೇಗೋ ಹಾಗೆ

ಸದರಿ ಅಧಿನಿಯಮದ 12ನೇ ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಆ ಉದ್ದೇಶಕ್ಕಾಗಿ ಚಲಾಯಿಸುವುದು ಕಾನೂನು ಸಮ್ಮತವಾಗಿರತಕ್ಕುದು:

ಮತ್ತೂ ಪರಂತು, ಉಚ್ಚ ನ್ಯಾಯಾಲಯವು ಸದರಿ ಅಧಿನಿಯಮದ 12ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಹೆಚ್ಚಿನ ವಿಚಾರಣೆಗಾಗಿ ಯಾವುದೇ ಮೊಕದ್ದಮೆಯನ್ನು ಹಿಂದಕ್ಕೆ ಒಪ್ಪಿಸಿದರೆ, ಆ ವ್ಯವಹರಣೆಯು, 56ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಸಂವಾದಿ ಬಾರ್ ಕೌನ್ಸಿಲ್‌ನ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಯಾಗಿದ್ದರೆ ಹೇಗೋ ಹಾಗೆ ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ರಾಜ್ಯ ಬಾರ್ ಕೌನ್ಸಿಲ್‌ಗೆ ವರ್ಗಾವಣೆಯಾಗಿರತಕ್ಕುದು.

(3) ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಈ ಅಧಿನಿಯಮದ ಮೇರೆಗೆ ಯಾವುದೇ ರಾಜ್ಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾದ ಯಾವನೇ ಪ್ಲೀಡರನಿಗೆ, ವಕೀಲನಿಗೆ, ಮುಖ್ತಿಯಾರನಿಗೆ ಅಥವಾ ಅಟಾರ್ನಿಗೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿರುವ ಯಾವುದೇ ಶಿಸ್ತುಪಾಲನಾ ವಿಷಯದ ಸಂಬಂಧದಲ್ಲಿ ಯಾವುದೇ ವ್ಯವಹರಣೆಯಿದ್ದರೆ, ಅಂಥ ವ್ಯವಹರಣೆಯು ಅವನು ಯಾವ ರಾಜ್ಯ ಬಾರ್ ಕೌನ್ಸಿಲ್ಲಿನ ಪಟ್ಟಿಯಲ್ಲಿ ಸೇರ್ಪಡೆಯಾಗಿರುವನೋ ಆ ಬಾರ್ ಕೌನ್ಸಿಲ್ಲಿಗೆ ವರ್ಗಾವಣೆಯಾಗಿರತಕ್ಕುದು ಮತ್ತು ಅದು ಈ ಅಧಿನಿಯಮದ ಮೇರೆಗೆ ಅವನ ವಿರುದ್ಧವಾಗಿ ಉದ್ಭವಿಸಿದ ವ್ಯವಹರಣೆಯಾಗಿದ್ದರೆ ಹೇಗೋ ಹಾಗೆ ಅದನ್ನು ಅದರ ಮೇರೆಗೆ ವ್ಯವಹರಿಸತಕ್ಕುದು.

(4) ಈ ಪ್ರಕರಣದಲ್ಲಿ "ಹಾಲಿ ನ್ಯಾಯವಾದಿ" ಎಂದರೆ ಭಾರತದ ಬಾರ್ ಕೌನ್ಸಿಲ್‌ಗಳ ಅಧಿನಿಯಮ, 1926ರ (1926ರ 38) ಮೇರೆಗೆ ಯಾವುದೇ ಉಚ್ಚ ನ್ಯಾಯಾಲಯದ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿ ಸೇರ್ಪಡೆಯಾಗಿದ್ದು ಯಾವುದೇ ಶಿಸ್ತುಪಾಲನಾ ವಿಷಯದ ಸಂಬಂಧದಲ್ಲಿ ಯಾವುದೇ ವ್ಯವಹರಣೆಯನ್ನು ಅವನ ವಿರುದ್ಧ ಪ್ರಾರಂಭಿಸಿದ ಸಮಯಕ್ಕೆ ಈ ಅಧಿನಿಯಮದ ಮೇರೆಗೆ ರಾಜ್ಯ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರ್ಪಡೆಯಾಗಿಲ್ಲದ ಒಬ್ಬ ವ್ಯಕ್ತಿ.

(5) ಈ ಅಧಿನಿಯಮದಲ್ಲಿ ಏನೇ ಇದ್ದರೂ ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗತಕ್ಕುದು.

**59. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ನಿರ್ದಿಷ್ಟವಾಗಿ ಈ ಅಧಿನಿಯಮದ ಮೂಲಕ ನಿರಸಿತವಾದ ಅಧಿನಿಯಮಿತಿಗಳಿಂದ ಈ ಅಧಿನಿಯಮದ ಉಪಬಂಧಗಳಿಗೆ ಪರಿವರ್ತನೆಗೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಹೊರಡಿಸಿ, ತೊಂದರೆಗಳನ್ನು ನಿವಾರಿಸಲು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಮತ್ತು ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಒಂದು ಆದೇಶವನ್ನು 1961ರ ಡಿಸೆಂಬರ್ 1ನೇ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಯಾಗುವಂತೆ ಮಾಡಬಹುದು.

**60. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ನಿಯಮಗಳನ್ನು ರಾಜ್ಯ ಬಾರ್ ಕೌನ್ಸಿಲ್ ರಚಿಸಿ ಅವುಗಳನ್ನು ಭಾರತದ ಬಾರ್ ಕೌನ್ಸಿಲ್ ಅನುಮೋದಿಸುವ ತನಕ ಆ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸುವ ಅಧಿಕಾರವನ್ನು ಚಲಾಯಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶವಿರತಕ್ಕುದು.

(2) ಕೇಂದ್ರ ಸರ್ಕಾರವು, ಭಾರತದ ಬಾರ್ ಕೌನ್ಸಿಲ್‌ನೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ಗಾಗಿಯಾಗಲಿ ಅಥವಾ ಸಾಮಾನ್ಯವಾಗಿ ಎಲ್ಲಾ ರಾಜ್ಯ ಬಾರ್ ಕೌನ್ಸಿಲ್‌ಗಳಿಗಾಗಿ ಆಗಲಿ (1)ನೇ ಉಪಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಬಹುದು ಮತ್ತು ಹಾಗೆ ರಚಿಸಲಾದ ನಿಯಮಗಳು ಈ ಅಧಿನಿಯಮದಲ್ಲಿ ಏನೇ ಇದ್ದರೂ ಪರಿಣಾಮಕಾರಿಯಾಗತಕ್ಕುದು.

(3) ಕೇಂದ್ರ ಸರ್ಕಾರವು, ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ರಾಜ್ಯ ಬಾರ್ ಕೌನ್ಸಿಲ್‌ಗಾಗಿ ಈ ಪ್ರಕರಣದ ಮೇರೆಗೆ ಯಾವುದೇ ನಿಯಮಗಳನ್ನು ರಚಿಸಿರುವಲ್ಲಿ ಮತ್ತು ಅದೇ ವಿಷಯದ ಸಂಬಂಧದಲ್ಲಿ ರಾಜ್ಯ ಬಾರ್ ಕೌನ್ಸಿಲ್ ನಿಯಮಗಳನ್ನು ರಚಿಸಿದ್ದು ಮತ್ತು ಅವುಗಳಿಗೆ ಭಾರತದ ಬಾರ್ ಕೌನ್ಸಿಲ್ ಅನುಮೋದಿಸಿರುವಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ವಿಷಯದ ಸಂಬಂಧದಲ್ಲಿ ಅದು ರಚಿಸಿದ ನಿಯಮಗಳು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆ ಬಾರ್ ಕೌನ್ಸಿಲ್‌ನ ಸಂಬಂಧದಲ್ಲಿ ಜಾರಿಯಲ್ಲಿರುವುದು ನಿಂತುಹೋಗತಕ್ಕುದೆಂದು ನಿರ್ದೇಶಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಕೇಂದ್ರ ಸರ್ಕಾರವು ರಚಿಸಿದ ಆ ನಿಯಮಗಳು, ಸದರಿ ದಿನಾಂಕಕ್ಕೆ ಮುಂಚೆ ಮಾಡಿದ ಅಥವಾ ಮಾಡಲು ತಪ್ಪಿದ ಕೃತ್ಯಗಳಿಗೆ ಸಂಬಂಧಿಸಿದ ಹೊರತು ಜಾರಿಯಲ್ಲಿರುವುದು ತದನುಸಾರವಾಗಿ ನಿಂತುಹೋಗತಕ್ಕುದು.

## ಅನುಸೂಚಿ

## 50(5)ನೇ ಪ್ರಕರಣವನ್ನು ನೋಡಿ

ಕೆಲವು ಅಧಿನಿಯಮಿತಿಗಳ ನಿರಸನ

| | ಸಂಕ್ಷಿಪ್ತ ಹೆಸರು | ನಿರಸನದ ವ್ಯಾಪ್ತಿ |
|---|---|---|
| 1. | ಕಾನೂನು ವೃತ್ತಿಗರ (ಮಹಿಳೆಯರು) ಅಧಿನಿಯಮ, 1923 (1923ರ 23) | ಪೂರ್ತಿ |
| 2. | ಕಾನೂನು ವೃತ್ತಿಗರ (ಶುಲ್ಕಗಳು) ಅಧಿನಿಯಮ, 1926 (1926ರ 21) | ಪೂರ್ತಿ |
| 3. | ರಾಜ್ಯಗಳ ಪುನರ್‌ವಿಂಗಡನೆ ಅಧಿನಿಯಮ, 1956 (1956ರ 37) | 53ನೇ ಪ್ರಕರಣ |
| 4. | ಮುಂಬೈ ಪುನರ್ ವಿಂಗಡನೆ ಅಧಿನಿಯಮ, 1960 (1960ರ 11) | 31ನೇ ಪ್ರಕರಣ |

* * * * *